
ಅಕ್ಷರ ಕವಿ ಸಂಧಾನ



ಬೆರ್ಟೋಲ್ಟ್ ಬ್ರೆಷ್ಟ್

ಎಂಬತ್ತು ಕವಿತೆಗಳು

ಅನುವಾದ: ಶಾ. ಬಾಲುರಾವ್



ಬೆರ್ಟೋಲ್ಟ್ ಬ್ರೆಷ್ಟ್ :
ಎಂಬತ್ತು ಕವಿತೆಗಳು



ಬೆರ್ಟೋಲ್ಟ್ ಬ್ರೆಷ್ಟ್

ಛಾಯಾಚಿತ್ರದ ಪ್ರತಿಕೃತಿ : ರಂಜನ್ (ಸೇನ್‌ಗುಪ್ತ)

ಅಕ್ಷರ ಕವಿ-ಸಂಧಾನ – ೩

ಬೆರ್ಟೋಲ್ಟ್ ಬ್ರೆಷ್ಟ್ :
ಎಂಬತ್ತು ಕವಿತೆಗಳು

ಮೂಲ ಜರ್ಮನ್ ಭಾಷೆಯಿಂದ ಚಯನ ಮತ್ತು ಅನುವಾದ :
ಶಾ. ಬಾಲುರಾವ್
ರಾಯನರ್ ಲೋತ್ಸರ ಸಹಾಯದಿಂದ

ಅಕ್ಷರ ಪ್ರಕಾಶನ
ಹೆಗ್ಗೋಡು ಸಾಗರ ಕರ್ನಾಟಕ.

ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಕರ್ನಾಟಕ.

Bertolt Brecht : Embattu Kavitegalu (Eighty Poems of Bertolt Brecht). Selected and translated, with the help of Rainer Lotz, from German by S. Balu Rao, 'Kaveri', 131, J-Extension, Lakshmi Nagar, Delhi 110 092, India, and published by Akshara Prakashana, Heggodu-Sagara, Karnataka 577 417, in their series, 'Akshara Kavi-Sandhana'. 1994. Price : 70-00.

Cover-design : Pramod Ganapatye, New Delhi.
Frontispiece : Ranjan (Sengupta), New Delhi.

ಮೊದಲ ಮುದ್ರಣ : ೧೯೯೪

ಪ್ರಕಾಶಕರು :
ಅಕ್ಷರ ಪ್ರಕಾಶನ
ಹೆಗ್ಗೋಡು (ಸಾಗರ), ಕರ್ನಾಟಕ – 577 417.

ಮುದ್ರಕರು :
ಪ್ರಗತಿ ಪ್ರಿಂಟರ್ಸ್, ಶಿವಮೊಗ್ಗ

ಬೆಲೆ : 70–00

ಹಿಂದಿಯ ಸುಪ್ರಸಿದ್ಧ ಸಾಹಿತಿ

ಮಿತ್ರ ಶ್ರೀ ಭೀಷ್ಮ ಸಾಹನಿ

ಮತ್ತು

ಅವರ ಪತ್ನಿ ಶ್ರೀಮತಿ ಶೀಲಾ ಸಾಹನಿ ಅವರಿಗೆ

ಪ್ರೀತಿವಿಶ್ವಾಸಗಳಿಂದ

ಒಳಪಿಡಿ

ಒಂದೊಂದು ಕವಿತೆಯ ರಚನಾವರ್ಷವನ್ನೂ ಆಯಾ ಕವಿತೆಯ ಕೆಳಗೆ ತೋರಿಸಿದೆ. ರಚನೆಯ ವರ್ಷದಲ್ಲಿ ಅನುಮಾನವಿದ್ದ ಕಡೆ ಮುಂದೆ ಪ್ರಶ್ನಾರ್ಥಕ ಚಿಹ್ನೆ ಸೇರಿಸಿದೆ. ಕವಿತೆಗಳೆಲ್ಲವನ್ನೂ ಸಾಧಾರಣವಾಗಿ ರಚನೆಯ ಕಾಲಾನುಕ್ರಮದಲ್ಲಿಯೇ ಜೋಡಿಸಿದೆ. ಕೆಲವೆಡೆ ಮಾತ್ರ, ಕವಿತೆಗಳ ವಿಷಯ ಒಂದೇ ಇದ್ದಾಗ, ಅವನ್ನು ಒಟ್ಟಾಗಿ ಕೊಡುವ ಉದ್ದೇಶದಿಂದ ಅನುಕ್ರಮದಲ್ಲಿ ವ್ಯತ್ಯಯ ಮಾಡಿದೆ.

ಅನುಬಂಧಗಳು :

ಚಿತ್ರಗಳು :

ರಕ್ಷಾಪತ್ರ : ಪ್ರಮೋದ್ ಗಾಣಪತ್ಯೆ, ದಿಲ್ಲಿ.
ಮುಖಪುಟದ ಎದುರು : ಬೆರ್ಟೋಲ್ಟ್ ಬ್ರೆಷ್ಟ್, ಅವನ ಕಿರು ಸಹಿಯೊಂದಿಗೆ.
ಛಾಯಾಚಿತ್ರದ ಪ್ರತಿಕೃತಿ : ರಂಜನ್ (ಸೇನ್‌ಗುಪ್ತ), ದಿಲ್ಲಿ.
ರಕ್ಷಾಪತ್ರದ ಹಿಂಬದಿ : ಜರ್ಮನಿಯ ವ್ಯಂಗ್ಯಚಿತ್ರಕಾರ ಗುಸ್ತಾಫ್ ಸೆಯ್ಯ್‌ಸ್‌ನ ಕಣ್ಣಲ್ಲಿ ಬ್ರೆಷ್ಟ್. ಗೋಡ್ಸ್‌ಬರ್ಗ್‌ನ ಇಂಟರ್‌ನೇಷನ್ಸ್ ಅವರ ೧೯೬೭ರ ಪ್ರಕಟನೆಯೊಂದರ ಕೃಪೆಯಿಂದ.

'ಪ್ರಸ್ತಾವನೆ'ಯ ಮೊದಲ ರೇಖಾಚಿತ್ರ : ಪೋಲ್ಯಾಂಡಿನ ವ್ಯಂಗ್ಯಚಿತ್ರಕಾರ ಸ್ಜೋಪ್ಯಾನ ಕಣ್ಣಲ್ಲಿ ಬ್ರೆಷ್ಟ್.

ಒಳಪುಟಗಳಲ್ಲಿ ಒಂದೊಂದು ವಿಭಾಗದ ಮೊದಲಲ್ಲೂ, ಕೊನೆಯ ಪುಟದಲ್ಲೂ ಕೊಟ್ಟಿರುವ ರೇಖಾಚಿತ್ರಗಳು ಬರ್ಲಿನ್‌ನ 'ಬ್ರೆಷ್ಟ್ ಸೆಂಟರ್' ಅವರ ೧೯೮೮ರ ಪ್ರಕಟಣೆ 'ಫೋರಮ್ ಫರ್ ಬ್ರೆಷ್ಟ್'ನ ಕೃಪೆಯಿಂದ. ಕೊನೆಯ ಪುಟದ ರೇಖಾಚಿತ್ರ, ಬ್ರೆಷ್ಟ್ ಕೊನೆಗಾಲದಲ್ಲಿ ವಾಸವಾಗಿದ್ದ ಬರ್ಲಿನ್‌ನ ಚೌಸೀಸ್ಟ್ರಾಸ್ ರಸ್ತೆಯ ಮನೆ. ಬ್ರೆಷ್ಟ್ ಮತ್ತು ಹೆಲೆನ್ ವೀಗಲ್‌ರ ನಿಧನಾನಂತರ ಅಲ್ಲಿ 'ಬ್ರೆಷ್ಟ್ ಸೆಂಟರ್' ಸ್ಥಾಪನೆಯಾಯಿತು.

ಪುಟ xxxvii - ರಾಯನರ್ ಲೋತ್ಸ್‌ರೊಂದಿಗೆ ಅನುವಾದಕ, ಅನುವಾದಕರ್ಮದಲ್ಲಿ (ಚಿತ್ರ : ಬಾರ್ಬರಾ ಲೋತ್ಸ್ ತೆಗೆದದ್ದು).



ಪ್ರಸ್ತಾವನೆ

ಕವಿಯಾಗಿ ಬೆರ್ಟೋಲ್ಟ್ ಬ್ರೆಷ್ಟ್

ಜರ್ಮನ್ ಸಾಹಿತಿ ಬೆರ್ಟೋಲ್ಟ್ ಬ್ರೆಷ್ಟ್ ಕನ್ನಡ ಸಾರಸ್ವತ ಪ್ರಪಂಚಕ್ಕೆ ಅವನು ನಮ್ಮವರಲ್ಲೇ ಒಬ್ಬ ಅನ್ನುವಷ್ಟರ ಮಟ್ಟಿಗೆ ಪರಿಚಿತ. ಕಳೆದ ಎರಡು ದಶಕಗಳಲ್ಲಿ ಅವನ ಅನೇಕ ಪ್ರಮುಖ ನಾಟಕಗಳು ಕನ್ನಡಕ್ಕೆ ಅನುವಾದವಾಗಿ ಮತ್ತೆ ಮತ್ತೆ ರಂಗದ ಮೇಲೆ ಕಾಣಿಸಿಕೊಳ್ಳುತ್ತ ಬಂದಿವೆ. ಬ್ರೆಷ್ಟ್‌ನನ್ನು ನಾವು ಕಂಡಿರುವುದು ಕೇವಲ ನಾಟಕಕಾರನನ್ನಾಗಿ. ಆದರೆ ಅವನಿಗೆ ನಾಟಕದಷ್ಟೇ ಅಥವಾ ಅದಕ್ಕಿಂತ ಹೆಚ್ಚು ಭದ್ರವಾದ ಇನ್ನೂ ಒಂದು ಮುಖವಿದೆ: ಅವನೊಬ್ಬ ವಿಶ್ವಮಾನ್ಯ ಕವಿ. ಪ್ರಖ್ಯಾತ ಬ್ರಿಟಿಷ್ ಕವಿ ಡಬ್ಲ್ಯೂ. ಎಚ್. ಆಡೆನ್ ತಾನು ಯಾರುಯಾರಿಂದ ಕಾವ್ಯಕಲೆಯನ್ನು ಕಲಿತನೆಂದು ಗುರುತಿಸಿದ ಸುಮಾರು ಹದಿನೈದು ಕವಿಗಳಲ್ಲಿ ಬ್ರೆಷ್ಟ್ ಒಬ್ಬ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಅಪರೂಪವಾಗಿ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುವ ಒಂದೊಂದು ಕವಿತೆಯನ್ನು ಬಿಟ್ಟರೆ ನಿಜವಾಗಿ ನಾವು ಅವನ ಕವಿರೂಪವನ್ನು ಕಾಣೆವು. ಈ ಮಾತು ಕರ್ನಾಟಕಕ್ಕೇ ಏಕೆ, ಅವನ ಹುಟ್ಟುನಾಡಾದ ಜರ್ಮನಿಗೂ ಅನ್ವಯಿಸುತ್ತದೆಂದರೆ ಆಶ್ಚರ್ಯದ ಮಾತಾಗಬಹುದು.

ಬ್ರೆಷ್ಟ್ ಕವಿತೆ ಬರೆಯಲು ಶುರು ಮಾಡಿದ್ದು ೧೯೧೩ರಲ್ಲಿ, ಅವನ ಹದಿನೈದನೆ ವಯಸ್ಸಿನಲ್ಲಿ. ಆಗಿನಿಂದ ಹಿಡಿದು ೧೯೫೬ರಲ್ಲಿ ತೀರಿಕೊಳ್ಳುವವರೆಗೂ, ಅಂದರೆ ಜೀವಿತದ ೫೮ ವರ್ಷಗಳಲ್ಲಿ ೪೩ ವರ್ಷಗಳ ಕಾಲ ಅವನು ಎಡೆಬಿಡದೆ ಕವಿತೆ ಬರೆಯುತ್ತಲೇ ಇದ್ದ. ಅವನ ನಿಧನಾನಂತರ ಪ್ರಕಟವಾದ ಕಾವ್ಯಸಮಗ್ರದಲ್ಲಿರುವುದು ಸುಮಾರು ೧೨೦೦

ಕವಿತೆಗಳು. ಜತೆಗೆ ನಾಟಕಗಳಲ್ಲಿ ಬರುವ ಹಾಡುಗಳೂ ಕವಿತೆಗಳೂ ಸುಮಾರು ೧೫೦. ಈ ಬೆಳಸಿನ ಸರಾಸರಿ ತಿಂಗಳಿಗೆ ಮೂರು ಕವಿತೆಗಳಾಗುತ್ತವೆ.

ಇವಲ್ಲದೆ, ಬ್ರೆಷ್ಟ್ ತನ್ನ ಬದುಕಿನ ಕಾಲುಭಾಗ ದೇಶಾಂತರದಲ್ಲಿ ಕಳೆಯುತ್ತಿದ್ದಾಗ ಸುತ್ತುಮುತ್ತಿನ ಐರೋಪ್ಯರಾಷ್ಟ್ರಗಳ ಜರ್ಮನ್ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗಿ ಈಗ ಕಣ್ಮರೆಯಾಗಿರುವವು ಇವೆ; ಯುದ್ಧಾನಂತರ ತನಗೆ ಆಶ್ರಯವಿತ್ತಿದ್ದ ಪೂರ್ವ ಜರ್ಮನಿಯ ಕಮ್ಯುನಿಸ್ಟ್ ಸರಕಾರಕ್ಕೆ ರುಚಿಸಲಾರದೆಂದು ಬರೆದೂ ಪ್ರಕಟಿಸದೆ, ಅವನ ನಂತರ ಆ ಸರಕಾರವೂ ಪ್ರಕಟವಾಗಗೊಡದೆ ಅಡಗಿಸಿಟ್ಟಿದ್ದು, ಇನ್ನು ಮುಂದೆ ಈಗಿನ ಮುಕ್ತ ಜರ್ಮನಿಯಿಂದ ಹೊರಬಹುದಾದವು ಇವೆ.

ಈ ಅಪಾರ ಕಾವ್ಯರಾಶಿಯಲ್ಲಿ ಅವನು ಜೀವಂತನಾಗಿದ್ದಾಗ ಪುಸ್ತಕರೂಪದಲ್ಲಿ ಪ್ರಕಟವಾದವು ಸುಮಾರು ೧೫೦ ಕವಿತೆಗಳು ಮಾತ್ರ. ಒಟ್ಟಿನ ೧೨೦೦ರಲ್ಲಿ ಇದುವರೆಗೆ ಇಂಗ್ಲಿಷಿಗೆ ಅನುವಾದವಾಗಿರುವವು ಹೆಚ್ಚೆಂದರೆ ಐನೂರು.

ಬ್ರೆಷ್ಟ್‌ನ ಕಾವ್ಯ ಪ್ರಚಾರವಾಗಬೇಕಾದಷ್ಟು ಮಾತ್ರದಲ್ಲಿ ಆಗದೇ ಇರಲು ಮೂರು ಮುಖ್ಯ ಕಾರಣಗಳಿವೆ. ಒಂದು, ತನ್ನ ಕಾವ್ಯದ ಬಗ್ಗೆ ಸ್ವತಃ ಬ್ರೆಷ್ಟ್ ತಳೆದಿದ್ದ ಧೋರಣೆ. ಯೌವನದ ಮೊದಮೊದಲ ದಿನಗಳನ್ನು ಬಿಟ್ಟರೆ, ಮುಂದೆ ಬ್ರೆಷ್ಟ್ ಎಲ್ಲೂ ಅಷ್ಟಾಗಿ ಕಾವ್ಯವಾಚನ ಮಾಡಿದ್ದೂ ಹಾಡಿದ್ದೂ ಇಲ್ಲ. ಒಮ್ಮೆ ಯಾರೋ ಕಾವ್ಯವಾಚನಕ್ಕೆ ಕರೆದಾಗ ಅವನು ನಿರಾಕರಿಸಿ ಹೇಳಿದ ಮಾತು: 'ನನ್ನ ಕವಿತೆ ಕೇಳಿದವರು ನಮ್ಮಪ್ಪ ಅಮ್ಮ ನನ್ನನ್ನು ನಾಟಕ ರಚನೆಗೆ ಕೈ ಹಾಕಲು ಏಕೆ ಬಿಟ್ಟರು ಎಂದನ್ನದೆ ಇರರು'. ಇದರ ಅರ್ಥ, ಬ್ರೆಷ್ಟ್‌ಗೆ ತಾನೊಬ್ಬ ಸಮರ್ಥ ಕವಿ ಎಂಬುದರ ಅರಿವಿತ್ತು. ಆದರೆ ಬದುಕಿನಲ್ಲಿ ಊರ್ಜಿತವಾಗಲು ಅವನಿಗೆ ಕವಿಗಿಂತ ಹೆಚ್ಚಾಗಿ ನಾಟಕಕಾರನಾಗುವ ಅಗತ್ಯವಿತ್ತು. ನಾಟಕದಲ್ಲಿ ಸಾಮಾಜಿಕವಾಗಿ ಉತ್ಕರ್ಷೆಯಿತ್ತು, ಜನಪ್ರಿಯತೆಯಿತ್ತು, ಹಣವಿತ್ತು. ೧೯೨೨ರಲ್ಲಿ ಅವನ 'ಡ್ರಮ್ಸ್ ಇನ್ ದಿ ನೈಟ್' ನಾಟಕಕ್ಕೆ ಜರ್ಮನಿಯ ಉತ್ಕೃಷ್ಟ ಕ್ಲೀಸ್ಟ್ ಪುರಸ್ಕಾರ ದೊರೆತ ಮೇಲಂತೂ ಅವನಿಗೆ ಕವಿತೆಯ ಪ್ರಕಟನೆ, ಪ್ರಸಾರ ಗೌಣವಾದವು. ಅವನ ಮೊದಲ ಕವಿತಾಸಂಗ್ರಹ ಹೊರಬಂದದ್ದು ಬರೆಯಲು ಶುರು ಮಾಡಿದ ಹದಿಮೂರು ವರ್ಷಗಳ ಮೇಲೆ, ಏಳೆಂಟು ನಾಟಕಗಳು ಪ್ರಕಟವಾದ ನಂತರ.

ಎರಡನೆಯ ಕಾರಣ, ಅಂದಿನ ಜರ್ಮನಿಯಲ್ಲಿ ಹಿಟ್ಲರನ ದೆವ್ವದೃಷ್ಟಿಗೆ ಗುರಿಯಾಗಿದ್ದ ನಾಜ್ಹೀ–ವಿರೋಧಿ ಸಾಹಿತಿಗಳಲ್ಲಿ ಬ್ರೆಷ್ಟ್ ಒಬ್ಬ ಮುಖ್ಯ. ಆ ಕಾಲದಲ್ಲಿ ಅಂಥವರ ಕೃತಿಗಳನ್ನು ಬಹಿಷ್ಕರಿಸಿ ಬಹಿರಂಗವಾಗಿ ಸುಡುತ್ತಿದ್ದುದೇ ಅಲ್ಲದೆ (ಕ. ೩೭ ನೋಡಿ), ಅವನ್ನು ಇಟ್ಟುಕೊಂಡಿರುವವರಿಗೆ ಘೋರಶಿಕ್ಷೆಯಾಗುತ್ತಿತ್ತು. ಮೇಲೆ, ಬೂಟಿನ ಶಬ್ದ, ಬಾಂಬಿನ ಸಿಡಿತಗಳ ಆ ದಿನಗಳಲ್ಲಿ ಕಾವ್ಯರಚನೆಗೆ ಒಳ್ಳೆಯ ಗ್ರಾಸ ಸಿಕ್ಕಿದರೂ ಅದರ ಓದು, ಅಧ್ಯಯನ ಯಾರಿಗೆ ಬೇಕಾಗುತ್ತದೆ?

ಮೂರನೆ ಕಾರಣ, ಬ್ರೆಷ್ಟ್ ಸುಮಾರು ಹದಿನೈದು ವರ್ಷಕಾಲ ತನ್ನ ಬದುಕಿನ ಅಮೂಲ್ಯ ದಿನಗಳನ್ನು ಹುಟ್ಟುನಾಡಿನ ಹೊರಗೆ ಊರೂರು, ದೇಶ ದೇಶ ಅಲೆಯುತ್ತ ಕಳೆಯಬೇಕಾಯಿತು. ಅಲ್ಲಿ ಕಾವ್ಯ ಪ್ರಕಟನೆ, ಪ್ರಸಾರ ಕಷ್ಟದ ಮಾತೇ. ಆ ಕಾಲದಲ್ಲಿ ಅವನ ಕವಿತಾಸಂಗ್ರಹಗಳು ಹೊರಬಂದದ್ದು ಜರ್ಮನಿಯಿಂದಲ್ಲ, ಲಂಡನ್ ಪ್ಯಾರಿಸ್‌ಗಳಿಂದ.

ಇಷ್ಟೆಲ್ಲ ಅಡೆತಡೆಗಳ ನಡುವೆಯೂ ಬ್ರೆಷ್ಟ್ ಅಷ್ಟು ದೊಡ್ಡ ಪ್ರಮಾಣದಲ್ಲಿ ಕವಿತೆ ಬರೆದದ್ದು, ಕೊನೆಗಾಲದ ಹೊತ್ತಿಗೆ ಒಬ್ಬ ಮಹಾಕವಿಯ ಪಟ್ಟ ಪಡೆದದ್ದು ನಿಜವಾಗಿ ಕೌತುಕವೆ. ಅದು ಅವನ ಚೇತನ, ಕ್ರಿಯಾಶೀಲತೆಗಳಿಗೆ ಒಂದು ಪ್ರಮಾಣ.

೨

ಬ್ರೆಷ್ಟ್‌ನ ಕವಿತೆಗಳನ್ನು ಓದುತ್ತ ಹೋದಂತೆ ಮೊದಲು ಎದ್ದು ಕಾಣುವ ಒಂದು ಅಂಶವೆಂದರೆ ಅವನೊಬ್ಬ ಸೂಕ್ಷ್ಮಸಂವೇದನೆಯ ಪರಿಸರಬದ್ಧ ಕವಿ. ಯಾವ ಯಾವ ಕಾಲದಲ್ಲಿ ಯಾವ ಯಾವ ಪರಿಸರದಲ್ಲಿ ಬದುಕಬೇಕಾಗಿ ಬಂದಿತೊ, ಆಯಾ ಪರಿಸರ ದೊಂದಿಗೆ ಅರ್ಥಾತ್ ತನ್ನ ಸುತ್ತಿನ ವಾಸ್ತವತೆಯೊಂದಿಗೆ ಗಾಢವಾಗಿ ಪ್ರತಿಕ್ರಿಯಿಸಿ, ಹಾಗೆ ದಕ್ಕಿದ ಅನುಭವವನ್ನು ತನ್ನ ಅಂದಂದಿನ ಜೀವನದೃಷ್ಟಿಯಿಂದ ವಿಶ್ಲೇಷಿಸಿ ನೋಡಿ ಅದಕ್ಕೆ ಕವಿತೆಯ ಅಭಿವ್ಯಕ್ತಿ ನೀಡಿದ. ಜಗತ್ತಿನ ಹೆಚ್ಚು ಮಂದಿ ಕವಿಗಳಂತೆ ಅವನೆಂದೂ ಏಕಾಂತ ದಲ್ಲಿ ಸ್ವಪ್ನನಿರತನಾಗಿದ್ದು, ಢೋಂಗೀ ಆದರ್ಶದಿಂದ ತುಂಬಿದ ವ್ಯಕ್ತಿನಿಷ್ಠ ಕವಿತೆಗಳನ್ನು ಬರೆಯಲಿಲ್ಲ. ಅಂತಹ ಕಾವ್ಯ ಅವನಿಗೆ ಹೇಸಿಗೆ ಸಹ.

ಈ ನಿಟ್ಟಿನಲ್ಲಿ ನಮಗೆ ಮೊದಲು ಎದುರಾಗುವುದು ಅವನು ಹುಟ್ಟಿ ಬೆಳೆದ ಔಗ್ಸ್‌ಬರ್ಗ್‌ನಲ್ಲಿ ರಚಿಸಿದ ಹಳ್ಳಿವಾಸದ ಕವಿತೆಗಳು. ಔಗ್ಸ್‌ಬರ್ಗ್ ದಕ್ಷಿಣ ಜರ್ಮನಿಯ ಬವೇರಿಯಾ ಪ್ರಾಂತದ ಒಂದು ಊರು. ಮ್ಯೂನಿಚ್ ನಗರಕ್ಕೆ ನಲವತ್ತು ಮೈಲಿ ದೂರವಿರುವ ಈ ಊರು ಆಗ ಬೆಳವಣಿಗೆಯಲ್ಲಿ ಪಟ್ಟಣದ ದಾರಿ ಹಿಡಿದಿದ್ದರೂ ಸ್ವಭಾವದಿಂದ ಒಂದು ಹಳ್ಳಿಯೇ. ಕಾಡುಮೇಡು, ಮರಗಿಡ, ಹೊಳೆಕೆರೆಗಳ ನಡುವೆ ಇದ್ದ ಆ ಊರು ಬ್ರೆಷ್ಟ್‌ನ ಎಳೆ ಮನಸ್ಸನ್ನು ಸಮರ್ಥವಾಗಿ ರೂಪಿಸಿತು. ಅಲ್ಲೇ ಶಿಕ್ಷಣ ಪಡೆದ ಬ್ರೆಷ್ಟ್ ತನ್ನ ಹದಿನೈದನೆ ವಯಸ್ಸಿನಲ್ಲಿಯೇ ಕವಿತೆ ಬರೆಯಲು ಶುರು ಮಾಡಿದ. ಮೊದಮೊದಲಿನ ಕೆಲವೊಂದು ಕವಿತೆಗಳು ಆಗಿನ್ನೂ ಪ್ರಚಾರಕ್ಕೆ ಬರುತ್ತಿದ್ದ ಜರ್ಮನ್ ಎಕ್ಸ್‌ಪ್ರೆಷನಿಸ್ಟ್ ಮಾದರಿಯಲ್ಲಿದ್ದವು. ಆ ಅಭಿವ್ಯಕ್ತಿಮಾರ್ಗವಾಗಲಿ ಅಥವಾ ಆ ಕಾಲದಲ್ಲಿ ಹೆಚ್ಚಿನವರು ಬರೆಯುತ್ತಿದ್ದ ವಾಸ್ತವದೂರವಾದ ದಾರ್ಶನಿಕ ಇಲ್ಲವೇ ರೊಮ್ಯಾಂಟಿಕ್ ಮಾರ್ಗವಾಗಲಿ ಬ್ರೆಷ್ಟ್‌ನಿಗೆ ಹಿಡಿಸಲಿಲ್ಲ. ಬದಲು ಅವನು ತನ್ನದೇ ಸ್ವಂತದ ದಾರಿಗಾಗಿ ತಡಕತೊಡಗಿದ.

ಬ್ರೆಷ್ಟ್ ಬಾಲ್ಯದಿಂದಲೇ ಹೃದ್ರೋಗಿಯಾದರೂ ಆತ್ಮವಿಶ್ವಾಸದಿಂದ ಕೂಡಿದ ಜೀವಂತ ಯುವಕ. ಗೆಳೆಯರ ಗುಂಪೊಂದನ್ನು ಕಟ್ಟಿ ಅದಕ್ಕೆ ತಾನೇ ನಾಯಕನಾಗಿದ್ದ. ಕೈಯಲ್ಲಿ ಗಿತಾರು ಹಿಡಿದು, ತನ್ನವೇ ಹಾಡುಗಳನ್ನು ಕಟ್ಟಿ, ಊರ ಮಧ್ಯದ ಮನೆಗಳಲ್ಲಿ ಕುಡಿಯುತ್ತ, ಹಾಡುತ್ತ, ಎಲ್ಲರ ಮನರಂಜಿಸುತ್ತ, ತನ್ನ ಹಾಡುಗಾರಿಕೆಯಿಂದ ಹುಡುಗಿಯ ರನ್ನು ಬುಟ್ಟಿಗೆ ಹಾಕಿಕೊಳ್ಳುತ್ತ 'ಚೈನಿ' ಹೊಡೆಯುವುದು ಬ್ರೆಷ್ಟ್‌ನಿಗೆ ಮಾಮೂಲಾಯಿತು. ಅವನ ಮೊದಮೊದಲ ಕವಿತೆಗಳಲ್ಲಿ ಈ ಮನೋಭಾವ – ಹುಡುಗರ ಸಂಗ, ಹಾಡು–ಕುಣಿತ, ಕೂಟ–ಕುಡಿತ, ಆನಂದ ಸಂಭ್ರಮಗಳಿಂದ ಕೂಡಿದ ಯೌವನದ ನಿಶ್ಚಿಂತೆ – ಎದ್ದುಕಾಣುತ್ತದೆ (ಕ. ೧).

ಔಗ್ಸ್‌ಬರ್ಗ್‌ನಲ್ಲಿ ಬ್ರೆಷ್ಟ್ ಹಾಡುತ್ತಿದ್ದುದು ತಾನೇ ಬರೆದ 'ಬ್ಯಾಲಡ್' ಅಥವಾ, ಲಾವಣಿ ಮಾದರಿಯ ಕಥನಕವನಗಳನ್ನು. ಇವುಗಳ ರಚನೆಯಲ್ಲಿ ಅವನಿಗೆ ಸ್ಫೂರ್ತಿ ದೊರೆತದ್ದು ಜರ್ಮನ್ ಸಾಹಿತ್ಯದಿಂದಲ್ಲ. ಹಾಗೆ ನೋಡಿದರೆ ಅವನ ಕಾವ್ಯಕರ್ಮದಲ್ಲಿ ಯಾವ ಜರ್ಮನ್ ಕವಿಯ ಅಥವಾ ಕಾವ್ಯಮಾರ್ಗದ ಪ್ರಭಾವವೂ ಕಾಣುವುದಿಲ್ಲ. ಶಾಲಾ ಕಾಲೇಜುಗಳಲ್ಲಿ ಅವನು ಓದುತ್ತಿದ್ದುದು ಜರ್ಮನ್ ಸಾಹಿತ್ಯದ ಜತೆಗೆ ಫ್ರೆಂಚ್, ಇಂಗ್ಲಿಷ್‌ಗಳನ್ನು. ಬ್ರೆಷ್ಟ್‌ಗೆ ಓದಿನ ಷೋಕಿ ಬಹಳ. ಜರ್ಮನ್ ಭಾಷೆಯಲ್ಲಿ ದೊರೆಯುತ್ತಿದ್ದ ಫ್ರೆಂಚ್, ಇಂಗ್ಲಿಷ್ ಸಾಹಿತ್ಯಕೃತಿಗಳ ಅನುವಾದಗಳನ್ನು ಓದಿಕೊಂಡಿದ್ದ. ಫ್ರೆಂಚ್ ಸಾಹಿತ್ಯದಲ್ಲಿ ಅವನಿಗೆ ತುಂಬ ಹಿಡಿಸಿದ್ದ ಕವಿಗಳೆಂದರೆ ಮಧ್ಯಯುಗದ ಮಹಾಕವಿಯೆನಿಸಿಕೊಂಡಿದ್ದ ಹದಿನೈದನೆ ಶತಮಾನದ ಫ್ರಾನ್ಸುವಾ ವಿಯೊ (Francois Villon) ಮತ್ತು ಹತ್ತೊಂಬತ್ತನೆ ಶತಮಾನದ ಪ್ರತೀಕವಾದಿ ಆರ್ತರ್ ರ್‍ಯಾಂಬೊ (Rimbaud). ಇಂಗ್ಲಿಷ್ ಸಾಹಿತ್ಯದಲ್ಲಿ, ಭಾರತದಲ್ಲಿ ಹುಟ್ಟಿ, ಭಾರತೀಯ ವಸ್ತುವಿಷಯಗಳನ್ನು ಬಳಸಿ, ಬ್ರಿಟಿಷ್ ಸಾಮ್ರಾಜ್ಯವಾದೀ ವಕ್ರದೃಷ್ಟಿಯಿಂದ ಬರೆದ ರಡ್ಯರ್ಡ್ ಕಿಪ್ಲಿಂಗ್‌ನ ಬ್ಯಾಲಡ್‌ಗಳು ಬ್ರೆಷ್ಟ್‌ನ ಮನಸೆಳೆದವು.

ಬ್ರೆಷ್ಟ್ ಹುಟ್ಟಾ ವಿದ್ರೋಹಿ, ದೈಹಿಕವಾಗಿ ಅಲ್ಲವಾದರೂ ಮಾನಸಿಕವಾಗಿ, ಚರ್ಯೆಯಿಂದಲ್ಲವಾದರೂ ಸ್ವಭಾವದಿಂದ. ಮಧ್ಯಮವರ್ಗೀಯ ಬೂರ್ಜ್ವಾ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವನಿಗೆ ಆ ವರ್ಗದ ಧಾರ್ಮಿಕ ನಂಬಿಕೆಗಳು, ಕೃತಕ ಸಾಮಾಜಿಕ, ನೈತಿಕ ಮೌಲ್ಯಗಳೂ ನಡವಳಿಕೆಗಳೂ ಹಿಡಿಸುತ್ತಿರಲಿಲ್ಲ. ಅವನ ಬಂಡಾಯ ಮನೋಭಾವಕ್ಕೆ ವಿಯೊ ಮತ್ತು ರ್‍ಯಾಂಬೊರು ತಮ್ಮ ಬದುಕು ಮತ್ತು ಕೃತಿಗಳಿಂದ ಮಾಡಿಟ್ಟ ಮಾದರಿಗಳಂತಿದ್ದರು.

ಇವರಲ್ಲಿ ವಿಯೊ ಕಳ್ಳ, ಕೊಲೆಗಾರ. ಅವನು ಮೊದಲು ಕೊಲೆಮಾಡಿ ಊರು ಬಿಟ್ಟು ಓಡಿಹೋದ. ವಾಪಸು ಬಂದು ಮತ್ತೆ ಮತ್ತೆ ಕಳ್ಳತನ ಮಾಡಿ ಜೈಲು ಕಂಡು, ಮುಂದೆ ಗಲ್ಲಿನ ಶಿಕ್ಷೆಗೂ ಗುರಿಯಾಗಿ, ಕೊನೆಗೆ ಕ್ಷಮಾದಾನ ಪಡೆದು ತಾನು ಹುಟ್ಟಿ ಬೆಳೆದ ಪ್ಯಾರಿಸಿನಿಂದ ಗಡೀಪಾರಾಗಿ ದೂರ ಸತ್ತ. ಐನೂರು ವರ್ಷಗಳಷ್ಟು ಹಿಂದೆಯೇ ಮತಧರ್ಮಗಳ ಬಗ್ಗೆ ವಾಸ್ತವಿಕ ದೃಷ್ಟಿ ಬೆಳಸಿಕೊಂಡಿದ್ದ. ಕ್ರೈಸ್ತ ಧರ್ಮದ ಚೌಕಟ್ಟಿನಲ್ಲಿದ್ದುಕೊಂಡೇ ಅದರ ಬಗ್ಗೆ ಅಣಕವಾಡಿದ ಧೈರ್ಯಶಾಲಿ ಅವನು. ಕ್ರಿಸ್‌ಮಸ್ ಹಬ್ಬದ ಪವಿತ್ರ ದಿನಗಳು ಅವನ ಕಣ್ಣಲ್ಲಿ "ಇದು ಸತ್ತ ಕಾಲ. ಈಗ ತೋಳಗಳು ಭೋರ್ಗರೆವ ಚಳಿಗಾಳಿಯುಂಡು ಬೆಳೆಯುತ್ತವೆ. ಬೆಂಕಿಯ ಬದಿ ಮೈ ಮರಗಟ್ಟುತ್ತದೆ".

ರ್‍ಯಾಂಬೊ ಮಹಾ ಪ್ರತಿಭಾಶಾಲಿ. ಚಿಕ್ಕಂದಿನಲ್ಲಿ ತಾಯಿಯ ದಬ್ಬಾಳಿಕೆ ತಡೆಯಲಾಗದೆ ಮನೆ ಬಿಟ್ಟು ಹೋಗಿ, ಎಲ್ಲ ಸ್ವೀಕೃತ ನಡವಳಿಕೆಗಳ ವಿರುದ್ಧ ತಿರುಗಿ ಬಿದ್ದು, ಇತಿಹಾಸ ನೆನಪಿಟ್ಟುಕೊಳ್ಳುವಷ್ಟು ಸ್ವೇಚ್ಛೆಯಿಂದ ಬಾಳಿದ. ಬಾದ್ಲೇರ್‌ನ ಪ್ರತೀಕವಾದದ ಮಾರ್ಗದಲ್ಲಿ ಮುನ್ನಡೆದು, ಇಂದ್ರಿಯಾನುಭವಗಳನ್ನು ಒಂದಕ್ಕೊಂದು ಬೆರಸಿ, ತಿರುಚಿ, ಗದ್ಯದ ಧಾಟಿಯಲ್ಲಿ ಪದ್ಯ ಬರೆಯುವ ಅಭಿವ್ಯಕ್ತಿ ಮಾರ್ಗವನ್ನು ಸಾಧಿಸಿದ. ಅವನ 'ಬ್ಯಾತೊ ಈವ್ರ್' (ಮದಮತ್ತ ನಾವೆ) ಮತ್ತು 'ಊನ್ ಸೇಯ್‌ಸಾನ್ ಅನ್ ಅನ್‌ಫೇರ್' (ನರಕದಲ್ಲಿ ಒಂದು ಋತುಗಾಲ) ಕಾವ್ಯಸಾಧನೆಯಲ್ಲಿ 'ಹಿಂದಿಲ್ಲ, ಮುಂದಿಲ್ಲ' ಅನ್ನುವ ಮಟ್ಟಿನ ಉತ್ತುಂಗ ಶೃಂಗಗಳು. ಆದರೂ ಹತ್ತೊಂಬತ್ತನೆ ವಯಸ್ಸಿಗೆಲ್ಲ ಇನ್ನು ಬರೆದದ್ದು

ಮುಗಿಯಿತು ಎಂದು ಘೋಷಿಸಿ, ಬರೆದಿಟ್ಟದ್ದನ್ನೆಲ್ಲ ಬೆಂಕಿಯಲ್ಲಿ ಸುಟ್ಟು, ತಾನು ಅರಸಿದ್ದ ಸತ್ಯವನ್ನು ಮೌನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ ಆ ಕವಿಸಂತ. ದೂರದ ಆಫ್ರಿಕಾದಲ್ಲಿ ಕೆಲಕಾಲ ವ್ಯಾಪಾರದಲ್ಲಿ ತೊಡಗಿದ್ದು, ಮೂವತ್ತೇಳನೆ ವಯಸ್ಸಿಗೆಲ್ಲ ಸತ್ತು ಅಮರನಾದ.

ಕಿಪ್ಲಿಂಗ್‌ನ ಕಾವ್ಯಪ್ರತಿಭೆ ಹೇಳಿಕೊಳ್ಳುವಂತಹದೇನಲ್ಲ. ಆದರೆ ಅವನ ಕೃತಿಗಳು ಮಾನವನ ಕ್ರಿಯಾಶಕ್ತಿ, ಪೌರುಷಗಳ ಆರಾಧನೆಗೆ, ಬ್ಯಾಲಡ್‌ಗಳು ದನಿಯೆತ್ತಿ ಹಾಡಿಸಿಕೊಳ್ಳುವ ಗತ್ತಿಗೆ ಹೆಸರಾದವು.

ಈ ಎಲ್ಲ ಲೇಖಕರು ಬ್ರೆಷ್ಟ್‌ನ ಮೇಲೆ ಬೇರೆ ಬೇರೆ ರೀತಿಯಲ್ಲಿ ಪ್ರಭಾವ ಬೀರಿದರು. ಇಂತಹ ಇನ್ನೂ ಒಂದು ಪ್ರಬಲ ಪ್ರಭಾವವೆಂದರೆ ಬೈಬಲಿನದು. ಮಾರ್ಟಿನ್ ಲೂಥರ್‌ನ ಜರ್ಮನ್ ಅನುವಾದ ಬ್ರೆಷ್ಟ್‌ನ ಪ್ರಿಯಗ್ರಂಥ. ಧರ್ಮಬೋಧನೆಗಲ್ಲ, ನೀತಿಪಾಠಕ್ಕಲ್ಲ, ಬದಲು ಅದರ ನೇರ, ಸರಳ, ಪ್ರಭಾವಕಾರೀ ಭಾಷೆಗೆ. ಹೇಳುವುದನ್ನು ದೃಷ್ಟಾಂತರೂಪದಲ್ಲಿ ದಡ್ಡರಿಗೂ ಮನಮುಟ್ಟುವಂತೆ ಹೇಳುವ ಕಥನಶೈಲಿಗೆ.

ಬ್ರೆಷ್ಟ್‌ನ ಬ್ಯಾಲಡ್‌ಗಳ ನಾಯಕರು ಪುರಾಣ ಇತಿಹಾಸಗಳ ಮಹಾಪುರುಷರಲ್ಲ, ಸಾಧಾರಣ ಸಮಾಜವಿಸರ್ಜಿತ ಮಂದಿ. ಅವನು ದಿನವೂ ಪತ್ರಿಕೆಗಳಲ್ಲಿ ಓದುತ್ತಿದ್ದ ಅಂತಹ ಜನರ ಬದುಕಿಗೆ ಸಂಬಂಧಿಸಿದ ರುಚಿಕಟ್ಟಾದ ನಾಟಕೀಯ ಘಟನೆಗಳನ್ನು ಸ್ವಂತದ ದೃಷ್ಟಿಕೋನದಿಂದ ನೋಡಿ ಅವಕ್ಕೆ ಕತೆಯ ರೂಪ ಕೊಟ್ಟು ಹಾಡಿದ : ಯುದ್ಧೋತ್ತರ ದಿನಗಳಲ್ಲಿ ರಸ್ತೆಯಲ್ಲಿ ಕಾಲು ಮುರಿದು ಬಿದ್ದ ಸೈನ್ಯದ ಕುದುರೆಯೊಂದನ್ನು ಹೊಟ್ಟೆಗಿಲ್ಲದ ಜನ ಕೊಂದು ಅದರ ಮಾಂಸ ಸುಲಿದುಕೊಂಡು ಹೋಗುವುದು; ತಂದೆ ತಾಯಿಗಳನ್ನು ಕೊಂದು ಅವರ ಹೆಣವನ್ನು ಕೊಳೆತು ನಾರುವವರೆಗೂ ಮನೆಯಲ್ಲಿ ಬಚ್ಚಿಟ್ಟ ಮಗ ತಾನು ಕೊಲೆ ಮಾಡಿದ್ದೇಕೆಂದು ಗೊತ್ತಿಲ್ಲ ಅನ್ನುವುದು; ಪ್ರೇಮದ ಪರಮಾನುಭವದ ಸ್ಥಿತಿ ಮುಟ್ಟುತ್ತೇವೆಂದು ಪ್ರೇಮಿಗಳಿಬ್ಬರು ಕಪಾಟಿನಲ್ಲಿ ತಬ್ಬಿ ಕುಳಿತು ಸತ್ತು, ಅವರ ಹೆಣ ಕೊಳೆಯುವುದು ಮುಂತಾದ ವಿಲಕ್ಷಣ, ಭೀಷಣ, ಆದರೂ ಸತ್ಯ ಸಂಗತಿಗಳು.

ಬ್ರೆಷ್ಟ್ ಇಂತಹ ಹಾಡುಗಬ್ಬಗಳನ್ನು ಬರೆಯುವ ಕಾಲಕ್ಕೆ ಜರ್ಮನಿ ತಾನೇ ಹೂಡಿದ ಮೊದಲ ಮಹಾಯುದ್ಧದಲ್ಲಿ ಸೋತು ಮುಖ ಪರಚಿಸಿಕೊಂಡಿತ್ತು. ಬ್ರೆಷ್ಟ್‌ನಂತಹ ಬುದ್ಧಿಜೀವಿಗಳ ಮೇಲೆ ಅದರ ಪ್ರಭಾವ ಬೀಳದೆ ಇರುವುದು ಸಾಧ್ಯವಿರಲಿಲ್ಲ. ಕೆಲಕಾಲ ಯುದ್ಧದಲ್ಲಿ ಸಹಾಯಕ ವೈದ್ಯನಾಗಿ ಬಲಾತ್ಕಾರ ಸೇವೆ ಮಾಡಿದ್ದ ಬ್ರೆಷ್ಟ್ ಆಜೀವಪೂರ್ತಿ ಯುದ್ಧದ್ವೇಷಿಯಾದ. ಉತ್ಕಟ ಶಾಂತಿಪ್ರಿಯತೆ ಕೊನೆಯವರೆಗೂ ಅವನ ಸಾಹಿತ್ಯದ ಒಂದು ಸ್ಥಾಯೀ ಕಾಳಜಿಯಾಯಿತು. ಪ್ರಥಮ ಮಹಾಯುದ್ಧ ಮುಗಿದ ವರ್ಷವೇ ಬರೆದ 'ಮೃತಯೋಧನ ಜೀವನ ವೃತ್ತಾಂತ' ಅದರ ಮೊದಲ ನಮೂನೆ. ಹಾಸ್ಯ, ಕಟುವ್ಯಂಗ್ಯ, ವಿಡಂಬನೆಗಳು ಬೆರೆತ ಈ ಹಾಡಿನಲ್ಲಿ ಸತ್ತು ಗೋರಿ ಕಂಡ ಸೈನಿಕನೊಬ್ಬನ ಹೆಣವನ್ನು ಕೈಸರನ ಸೇನಾಧಿಕಾರಿಗಳು ಅಗೆದು ತೆಗೆದು, ಬಾಯಿಗೆ ಮದ್ಯ ಹುಯಿದು, ಆ ಅಸ್ಥಿಪಂಜರ ಮತ್ತೆ ಕಾದಾಡಲು ಯೋಗ್ಯವೆಂದು ಶಿಫಾರಸು ಬರೆದು, ಯುದ್ಧದ 'ಐದನೆ ವರ್ಷ'(!) ರಣರಂಗಕ್ಕೆ ಅಟ್ಟುವ ವಿಕಟ ಚಿತ್ರಣವಿದೆ. (ಬ್ಯಾಲಡ್‌ಗಳು ತುಂಬ ದೊಡ್ಡವೆಂಬ ಕಾರಣ ಈ ಸಂಪುಟದಲ್ಲಿ ಯಾವದರ ಅನುವಾದವನ್ನೂ ಪ್ರಯತ್ನಿಸಿಲ್ಲ.)

ಬ್ರೆಷ್ಟ್ ಇಂತಹವನ್ನು ಮೊದಲು ಕವಿತೆಯಾಗಿ ಬರೆದು, ಆಮೇಲೆ ಹಾಡಾಗಿ ಹಾಡುತ್ತಿರಲಿಲ್ಲ. ಬದಲು ಹಾಡಿನ ಮಟ್ಟುಗಳು ಮನಸ್ಸಿನಲ್ಲಿ ಮೂಡಿಬಂದಂತೆ ಅವಕ್ಕೆ ಪದ ಕೂಡಿಸಿ ಕವಿತೆ ಕಟ್ಟುತ್ತಿದ್ದ. ಹೀಗೆ ಅವನ ಈ ಕೃತಿಗಳಿಗೆ ಹಾಡಾಗಿಯೂ ಕವಿತೆಯಾಗಿಯೂ ಸ್ವತಂತ್ರ ಅಸ್ತಿತ್ವವಿದೆ.

ಇದೇ ಸುಮಾರಿಗೆ ಬ್ರೆಷ್ಟ್ ಬರೆದ ಒಂದು ಹಾಡು– 'ಕೆಂಪು ಸೈನ್ಯದ ಯೋಧನ ಹಾಡು'–ವಿರೋಧಾಭಾಸಗಳಿಂದ ಕೂಡಿದ ಅವನ ಸಿಕ್ಕುಗಂಟಿನ ಸಂಕೀರ್ಣ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆಂಬ ಕಾರಣದಿಂದಾಗಿ ಉಲ್ಲೇಖನಾರ್ಹ. ಅದನ್ನು ಬರೆದಾಗ, ೧೯೧೯ರಲ್ಲಿ, ಬ್ರೆಷ್ಟ್‌ನಿಗೆ ಮಾರ್ಕ್ಸ್‌ವಾದದ ಬಗ್ಗೆ ಯಾವ ವ್ಯಾಮೋಹವೂ ಇರಲಿಲ್ಲ. ಪತ್ರಿಕೆಗಳಲ್ಲಿ ಬರುತ್ತಿದ್ದ ರಷ್ಯದ ಜನಕ್ರಾಂತಿಯನ್ನು ಕುರಿತ ವರದಿಗಳನ್ನು ಓದಿ, ಅವಕ್ಕೆ ತನ್ನ ಸ್ವಂತದ ತೀರ್ಮಾನಗಳನ್ನೂ ಸೇರಿಸಿ, ಅದರ ನಿಷ್ಫಲತೆಯನ್ನು ಎತ್ತಿ ತೋರಿಸಲೆಂದು "ಕೆಂಬೆಳಗೇನೊ ಬಂತು, ಮಕ್ಕಳೇ. ಆದರೆ ಸ್ವಾತಂತ್ರ್ಯ ಬರಲಿಲ್ಲ" ಎಂದು ಲೇವಡಿ ಮಾಡಿ ಹಾಡಿದ. ಮುಂದೆ ಮಾರ್ಕ್ಸ್‌ವಾದಕ್ಕೆ ಒಲಿದು 'ಇವನೊಬ್ಬ ಪಕ್ಕಾ ಕಮ್ಯುನಿಸ್ಟ್' ಎಂದಾದ ಮೇಲೆ ಮಾಸ್ಕೋದ ವಿಶ್ವಾಸ ಗಳಿಸುವಲ್ಲಿ ಆ ಹಾಡು ಮತ್ತೆ ಮತ್ತೆ ತೊಡರಾಗುತ್ತಿತ್ತು. ಅದು ರಷ್ಯದ ಕ್ರಾಂತಿಯನ್ನು ಕುರಿತು ಬರೆದದ್ದಲ್ಲ ಎಂದು ಸಾಧಿಸಹೊರಟ ಸುಳ್ಳಿನಲ್ಲಿ ಹುರುಳಿರಲಿಲ್ಲ. ಕೊನೆಗೆ ಬ್ರೆಷ್ಟ್ ಅದನ್ನು ಬರೆದದ್ದಕ್ಕೆ ವಿಷಾದ ಸೂಚಿಸಿದ್ದೇ ಅಲ್ಲದೆ ತಾನು ಬದುಕಿರುವವರೆಗೂ ಪುನರ್ಮುದ್ರಣ ಮಾಡಗೊಡಲಿಲ್ಲ!

ಬರಿಯ ಯೌವನೋತ್ಸಾಹದ ಗೀತೆಗಳು, ಬ್ಯಾಲಡ್‌ಗಳು ಇಂತಹವನ್ನೇ ಬರೆದಿದ್ದರೆ ಬ್ರೆಷ್ಟ್ ಕಿಪ್ಲಿಂಗ್ ಮಟ್ಟದ ಒಬ್ಬ ಸಾಧಾರಣ ಕವಿಯಾಗಿಬಿಡುತ್ತಿದ್ದ. ಅವು ಮುಂದಿನ ಮಹಾಕವಿಯೊಬ್ಬನಿಗೆ ತಕ್ಕ ಅಸ್ತಿಭಾರ ಒದಗಿಸುವ ಯೋಗ್ಯತೆಯವಲ್ಲ. ಅಂತಹ ಆಧಾರ ದೊರೆಯುವುದು ಅವನ ಪ್ರೇಮಸಂಬಂಧೀ ಕವಿತೆ ಮತ್ತು ಹಾಡುಗಳಿಂದ ಹಾಗೂ ಪ್ರಕೃತಿವಿಷಯಕ ಸ್ತುತಿಗಾನಗಳಿಂದ.

ಬ್ರೆಷ್ಟ್‌ನ ಪ್ರೇಮಸಂಬಂಧೀ ಗೀತೆಗಳು ಸಾಂಪ್ರದಾಯಿಕ ಅರ್ಥದಲ್ಲಿ ಪ್ರೇಮಗೀತೆಗಳಲ್ಲ. ಇತರರ ಪ್ರೇಮಗೀತೆಗಳಲ್ಲಿ ನಾವು ಕಾಣುವ ಉದ್ಭಾವ, ಆದರ್ಶ, ಪವಿತ್ರ ಪ್ರೇಮದ ಹಾಡಿಕೆ–ಹೊಗಳಿಕೆಗಳು ಇಲ್ಲಿಲ್ಲ. ಪ್ರೇಮಕ್ಕಿಂತ ಹೆಚ್ಚಾಗಿ ಪ್ರೇಮಾನಂತರ ಪ್ರೇಮಿಗಳನ್ನು ಕಾಡುವ ಪಾಪ–ಅಪರಾಧಗಳ ಭಾವನೆ, ಅದರಿಂದಾಗುವ ದುರಂತ, ಇಲ್ಲವೇ ಪ್ರೇಮ–ಮೋಹಭಂಗ–ವಿಶ್ವಾಸಘಾತ–ಒಡಕು–ಹಿನ್ನೆನಪು–ವ್ಯಥೆಗಳಂತಹ ಕಠೋರ ವಾಸ್ತವತೆ ಅವುಗಳ ವಸ್ತು. ಎಲ್ಲವೂ ಸ್ವಂತ ಅನುಭವಗಳನ್ನು ಆಧರಿಸಿ, ತನಗೆ ತಾನೆ ತಪ್ಪೊಪ್ಪಿಕೊಂಡಂತೆ ನೋವಿನ ಕಿರುದನಿಯಲ್ಲಿ ಹೇಳಿಕೊಂಡವು (ಉದಾಹರಣೆ: ಕ.೩).

ಪ್ರಕೃತಿ ವಿಷಯಕ ಸ್ತುತಿಗಾನಗಳ ಮೂಲದಲ್ಲಿ ಬ್ರೆಷ್ಟ್ ತಾನೇ ರೂಪಿಸಿಕೊಂಡ ಒಂದು ದರ್ಶನವಿಶೇಷವಿದೆ. ಔಗ್ಸ್‌ಬರ್ಗ್‌ನಲ್ಲಿ ಮರಗಿಡಗಳ ನಡುವೆ ಬೆಳೆದ ಬ್ರೆಷ್ಟ್ ದಿನವೂ ಅವು, ಅವುಗಳಂತೆಯೇ ಮನುಷ್ಯರೂ, ಪ್ರಾಣಿಗಳೂ ಹುಟ್ಟಿ ಸತ್ತು ಕೊಳೆಯುವುದನ್ನು ನೋಡುತ್ತ ಬಂದಂತೆ, ಇವುಗಳ ಅರ್ಥವೇನು, ಬೈಬಲ್ ಹೇಳುವ ದೇವರು–ಸ್ವರ್ಗಗಳಿದ್ದಲ್ಲಿ ಹೀಗೇಕಾಗುತ್ತದೆ ಎಂದು ಅವನ ಮನಸ್ಸಿನಲ್ಲಿ ಪ್ರಶ್ನೆಗಳೇಳುವುದು ಸ್ವಾಭಾವಿಕವಾಯಿತು. ಉತ್ತರವಾಗಿ ಒಂದು ಬಗೆಯ 'ವ್ಯರ್ಥವಾದ'ದ ದರ್ಶನವಾಯಿತು (ಕ. ೬ ಮತ್ತು೮). ಈ

ವ್ಯರ್ಥವಾದ ವಾಸ್ತವಿಕ ದೃಷ್ಟಿಕೋನದ ಫಲ, ಜರ್ಮನ್ ದಾರ್ಶನಿಕ ನೀತ್ಸೆಯ 'ಶೂನ್ಯವಾದ' (ನಿಹಿಲಿಸಂ)ದಂತೆ ಪೂರ್ಣ ನಿಷೇಧಾತ್ಮಕವಲ್ಲ. ಏನೇ ಬರಲಿ, ಸುಖಸಂತೋಷಗಳನ್ನು ಬಯಸುವ, ಸವಿಯುವ ನಮ್ಮ ಸಹಜಪ್ರವೃತ್ತಿಗೆ ಧಕ್ಕೆ ಬರದಂತೆ ಕಾದುಕೊಳ್ಳುವುದು ಅಗತ್ಯ ಎಂಬ ಮಾನಸಿಕ ಸ್ವಾಸ್ಥ್ಯವನ್ನು ಉಳಿಸಿಕೊಂಡು ಮಜವಾಗಿ ಬದುಕಬಯಸಿದ ಆಶಾವಾದಿ ಬ್ರೆಷ್ಟ್ ನೀತ್ಸೆಯ ಶೂನ್ಯವಾದದ ಪ್ರತಿಪಾದಕನಾಗುವುದು ಸಾಧ್ಯವಿರಲಿಲ್ಲ (ಕ. ೯, ಚರಣ ೯: "ಮುಂಬರುವ ಭೂಕಂಪಗಳಲ್ಲಿ ಕಹಿ ಮನಸ್ಸಿನಿಂದಾಗಿ / ನನ್ನ ವರ್ಜಿನಿಯಾ ಚುಟ್ಟವನ್ನು ಆರಗೊಡುವುದಿಲ್ಲವೆಂದು ನಂಬಿದ್ದೇನೆ").

ಬೈಬಲ್ಲಿನ ನಂಬಿಕೆಗಳನ್ನು ವಿರೋಧಿಸುವ ಈ ಸ್ತುತಿಗಾನಗಳನ್ನು ಬೈಬಲ್ಲಿಗೆ ಉತ್ತರವೆಂಬಂತೆ ಅದರ ಭಾಷೆಯಲ್ಲಿಯೇ ಅದರ ಧಾಟಿಯಲ್ಲಿಯೇ ಬರೆದಿರುವುದು ಅವುಗಳ ಇನ್ನೊಂದು ವಿಶೇಷ.

೩

ಬ್ರೆಷ್ಟ್‌ನ ಕಾವ್ಯವಿಕಾಸ ದಾರಿ ತಿರುವಿ ಮುಂದಿನ ಮಜಲು ಮುಟ್ಟುವುದು ಅವನು ಹಳ್ಳಿವಾಸ ಮುಗಿಸಿ ಮ್ಯೂನಿಚ್, ಬರ್ಲಿನ್ ನಗರಗಳಿಗೆ ಬಂದ ಮೇಲೆ. ಔಗ್ಸ್‌ಬರ್ಗ್‌ನಲ್ಲಿ ಹೈಸ್ಕೂಲು ಶಿಕ್ಷಣ ಮುಗಿಸುವ ಹೊತ್ತಿಗಾಗಲೇ ಅವನ ಮನಸ್ಸು ಕವಿತೆ–ಹಾಡುಗಳ ಜತೆಗೇ ನಾಟಕದ ಕಡೆಗೂ ಹರಿದಿತ್ತು. ಮ್ಯೂನಿಚ್ ಮಧ್ಯಮ ವರ್ಗದ ಒಂದು ಸಣ್ಣ ಪಟ್ಟಣ. ಅಲ್ಲಿ ವೈದ್ಯಶಾಸ್ತ್ರ–ಜೀವಶಾಸ್ತ್ರಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಬಂದ ಬ್ರೆಷ್ಟ್‌ಗೆ ಭಾಗ್ಯದ ಬಾಗಿಲು ತೆರೆದದ್ದು ಅವಕ್ಕೆ ತೀರಾ ಬೇರೆಯಾದ ನಾಟಕ– ರಂಗಭೂಮಿಗಳ ಕ್ಷೇತ್ರದಲ್ಲಿ. ತನ್ನ ಸ್ವಾರ್ಥಕ್ಕಾದರೆ ಎಲ್ಲೆಂದರಲ್ಲಿ ಮುನ್ನುಗ್ಗುವ ಮೊಂಡಗೂಳಿತನ ಅವನದ್ದು. ಮೊದಲು ಒಂದು ಪತ್ರಿಕೆಯಲ್ಲಿ ರಂಗವಿಮರ್ಶಕನಾಗಿ ಕೆಲಸ ಗಿಟ್ಟಿಸಿಕೊಂಡ. ಅಂದಿನ ನಾಟಕಗಳನ್ನು ಕಟುವಾಗಿ ಟೀಕಿಸುತ್ತ ಜನರ ಗಮನ ಸೆಳೆಯತೊಡಗಿದ. ಮೊತ್ತ ಮೊದಲಿನ ಪ್ರಮುಖ ನಾಟಕಗಳಾದ 'ಬಾಲ್' ಮತ್ತು 'ಡ್ರಮ್ಸ್ ಇನ್ ದಿ ನೈಟ್'ಗಳನ್ನು ಪೂರೈಸಿದ. 'ಡ್ರಮ್ಸ್' ನಾಟಕವನ್ನು ರಂಗಕ್ಕೆ ತರಲು ಮ್ಯೂನಿಚ್‌ನ ಒಂದು ನಾಟಕದ ಕಂಪನಿಯನ್ನು ಒಪ್ಪಿಸಿದ. ಈಗ ದಾರಿ ಸಲೀಸಾಯಿತು. ಅವನ ನಾಟಕಗಳ ವಾಸ್ತವತೆ, ನವೀನತೆಗಳಿಗೆ ದೊಡ್ಡ ದೊಡ್ಡ ವಿಮರ್ಶಕರು ಸಹ ತಲೆದೂಗಿದರು. 'ಡ್ರಮ್ಸ್' ನಾಟಕದ ಪ್ರಥಮ ಪ್ರದರ್ಶನವನ್ನು ನೋಡಲೆಂದು ಅದಕ್ಕಾಗಿಯೇ ಬರ್ಲಿನ್‌ನಿಂದ ಬಂದಿದ್ದ ಒಬ್ಬ ವಿಖ್ಯಾತ ರಂಗವಿಮರ್ಶಕ "ಈ ನಾಟಕದೊಂದಿಗೆ ಜರ್ಮನ್ ನಾಟಕದ ಭೂಪಟವೇ ಬದಲಾಗಿದೆ. ಇದು ನಮ್ಮ ಕಾಲಕ್ಕೆ ಒಂದು ಹೊಸ ದೃಷ್ಟಿಕೋನ, ಹೊಸ ಧ್ವನಿಗಳನ್ನು ನೀಡುತ್ತದೆ" ಎಂದು ಹೊಗಳಿದ. ಜರ್ಮನಿಯ ಅತ್ಯಂತ ದೊಡ್ಡ ಕ್ಲೀಸ್ಟ್ ಪುರಸ್ಕಾರ ಬ್ರೆಷ್ಟ್‌ನಿಗೆ ಕಾದಿತ್ತು.

ಬ್ರೆಷ್ಟ್‌ನ ಪ್ರತಿಭೆ, ಕ್ರಿಯಾಶಕ್ತಿಗಳಿಗೆ ಮ್ಯೂನಿಚ್‌ನ ರಂಗಪ್ರಪಂಚ ತೀರಾ ಸೀಮಿತವಾಯಿತು. ತಲೆತುಂಬ ನಾಟಕಗಳನ್ನು ತುಂಬಿಕೊಂಡು ಬರ್ಲಿನ್‌ಗೆ ಬಂದ. ಅವನಿಗೂ ಹುಟ್ಟೂರಿಗೂ ಇದ್ದ ಒಂದೇ ಒಂದು ಕರುಳಿನ ತಂತುವೆಂದರೆ ಅವನ ತಾಯಿ.

ಈಗ ಅವಳು ತೀರಿಕೊಂಡಿದ್ದಳು (ಕ. ೨). ಹಳ್ಳಿ ಹಿಂದೆ ಉಳಿಯಿತು. ಬರ್ಲಿನ್ ನೆಲೆಯಾಯಿತು, ನಾಟಕ–ರಂಗಭೂಮಿಗಳು ಜೀವನೋಪಾಯ ಒದಗಿಸಿದವು.

ಮಹಾನಗರ ಬರ್ಲಿನ್ ಬ್ರೆಷ್ಟ್‌ನ ಮಹತ್ವಾಕಾಂಕ್ಷೆಗೆ ಹೇಳಿಟ್ಟ ಜಾಗ, ನಿಜ. ಜತೆಗೇ ಅಂತಹ ಎಲ್ಲ ನಗರಗಳಂತೆ ಅದು ಕ್ರೂರ, ಕಠೋರ. ಅಲ್ಲಿ ಹಳ್ಳಿಯ ಎತ್ತರದ ಮರಗಳ ಬದಲು ಎತ್ತರದ ಕಾಂಕ್ರೀಟ್ ಪರ್ವತಗಳು, ಹೊಳೆಯ ದುಂಡುಕಲ್ಲಿನಂತಹ ಮುಖಭಾವಗಳು, ಪರಸ್ಪರ ಸಂಬಂಧ ಸ್ಥಾಪಿಸಲಾಗದ ಕಲ್ಲುಹೃದಯಗಳು. ಬರ್ಲಿನ್‌ನಲ್ಲಿ ನೆಲಸುವ ಮೊದಲು ಮ್ಯೂನಿಚ್‌ನಿಂದ ಆಗಾಗ ಅಲ್ಲಿಗೆ ಹೋಗಿಬರುತ್ತಿದ್ದ ಕಾಲದಲ್ಲಿಯೇ ಬ್ರೆಷ್ಟ್‌ಗೆ ಆ 'ಡಾಂಬರು ನಗರ'ದ ಅನುಭವವಾಗಿತ್ತು. ಆ ಮೊದಲ ಅನುಭವದ ಒಂದು ಹೊಳಹು ೧೯೨೨ರ 'ಬಡಪಾಯಿ ಬಿ. ಬಿ.' ಕವಿತೆಯಲ್ಲಿ ಕಾಣಸಿಗುತ್ತದೆ (ಕ. ೯). ಬ್ರೆಷ್ಟ್‌ನ ಸುಪ್ರಸಿದ್ಧ ಕವಿತೆಗಳಲ್ಲಿ ಒಂದಾದ ಇದು ಅನೇಕ ದೃಷ್ಟಿಗಳಿಂದ ಮಹತ್ವಪೂರ್ಣ. ಅವನ ಬದುಕಿನ ಮೊದಲೆರಡು ಮಜಲುಗಳ ನಡುವಿನ ಈ ಮೆಟ್ಟಿಲು–ಕವಿತೆಯ ಭಾಷೆ, ಅಭಿವ್ಯಕ್ತಿಮಾರ್ಗಗಳು ಹಿಂದಿನ ಔಗ್ಸ್‌ಬರ್ಗ್ ಕವಿತೆಗಳಿಗಿಂತ ಭಿನ್ನವಾಗಿ ಸಾದಾ, ಭಾವರಹಿತ, ಅನೌಪಚಾರಿಕ ಭಾಷೆಯಲ್ಲಿ, ಕೆಳದನಿಯಲ್ಲಿ, ಮಹಾನಗರದ ಜೀವನವನ್ನು ವರದಿ ಮಾಡಿದಂತಿದೆ.

ಬರ್ಲಿನ್ ಹಾಗೂ ಮುಂದೆ ಅಮೆರಿಕಾಗಳಲ್ಲಿದ್ದು ಬ್ರೆಷ್ಟ್ ತನ್ನದೇ ವಿಶಿಷ್ಟ ನಗರ ಮೀಮಾಂಸೆಯನ್ನು ರೂಪಿಸಿಕೊಂಡ, ಹಿಂದೆ ಔಗ್ಸ್‌ಬರ್ಗ್‌ನಲ್ಲಿದ್ದು ಪ್ರಕೃತಿ ಮೀಮಾಂಸೆಯನ್ನು ರೂಪಿಸಿಕೊಂಡಂತೆ. ಪ್ರೇಮ, ಪ್ರಕೃತಿಗಳ ಚಿಂತನೆ, ಯುದ್ಧದ್ವೇಷಗಳಂತೆ ನಗರ ಜೀವನ ಸಹ ಅವನ ಕಾವ್ಯದ ಒಂದು ಕಾಳಜಿಯಾಯಿತು.

ಬ್ರೆಷ್ಟ್‌ನಿಗೆ ಹಿಂದೆಯೂ ಬಾದ್ಲೇರ್, ವಿಟ್‌ಮನ್ ಮುಂತಾಗಿ ಜಗತ್ತಿನ ಅನೇಕ ಮಹಾಕವಿಗಳಿಗೆ ನಗರ ಕಾವ್ಯವಿಷಯವಾದದ್ದುಂಟು. ಆದರೆ ಅವರು ಅದನ್ನು ಕಂಡಿದ್ದುದು ಒಂದು ಬಗೆಯ ಅಮೂರ್ತದೃಷ್ಟಿಯಿಂದ, ಸೈದ್ಧಾಂತಿಕವಾಗಿ. ಬ್ರೆಷ್ಟ್‌ನ ದಾರಿ ಅದಲ್ಲ. ಅವನು ಅದನ್ನು ಸಮೂಹದ ದೃಷ್ಟಿಯಿಂದ ನೋಡುವುದಿಲ್ಲ, ಚಾರಿತ್ರಿಕವಾಗಿ ಅವುಗಳ ಉಗಮ, ಅನಿವಾರ್ಯತೆಗಳನ್ನು ಕುರಿತು ಚಿಂತಿಸುವುದಿಲ್ಲ, ಬದಲು ಅಲ್ಲಿ ವಾಸಿಸ ಬಂದ ಸಾಧಾರಣ ಜನರ ದೃಷ್ಟಿಯಿಂದ ನೋಡಿ, ಅವರ ಪರಸ್ಪರ ನಡವಳಿಕೆಯನ್ನು ಚಿತ್ರವತ್ತಾಗಿ ಕಣ್ಣಿಗೆ ಕಟ್ಟಿಸುತ್ತಾನೆ. ನಗರಕ್ಕೆ ಎಲ್ಲರೂ ವಲಸೆ ಬಂದವರೇ, ಎಲ್ಲರೂ ಪರಕೀಯರೇ, ಎಲ್ಲರೂ ಏಕಾಕಿಗಳೇ. ಪ್ರತಿಯೊಬ್ಬರೂ ದುಡಿದು ದುಡಿಸಿಕೊಳ್ಳಲು ಮಾಡಿದ ಯಂತ್ರ, ಆ ಯಂತ್ರಕ್ಕೊದಗುವ ಸರಕು. ಅಲ್ಲಿ ಯಾವ ಹಾರ್ದಿಕ ಸಂಬಂಧಗಳೂ ಸಾಧ್ಯವಿಲ್ಲ, ನೈತಿಕ ಬಂಧನಗಳೂ ಪವಿತ್ರವಲ್ಲ. ಸ್ವಂತ ತಂದೆತಾಯಿಗಳಾಗಲಿ, ಜತೆ ಮಲಗುವ ಹೆಣ್ಣು ಗಂಡುಗಳಾಗಲಿ ಒಬ್ಬರಿಗೊಬ್ಬರಿಗೆ ಹೊಸಬರು, ಗಂಡಾಂತರಕಾರಿಗಳು, ಆದಷ್ಟು ಬೇಗ ಕಳೆದುಕೊಳ್ಳಬೇಕಾದ ಭಾರಗಳು. ಹೊಲಸು–ಕೊಳಕು, ಹಸಿವು–ಬಡತನ–ಇಕ್ಕಟ್ಟು, ಸ್ವಾರ್ಥ–ಮೋಹ, ದುರಾಸೆ–ಮೋಸ ಮುಂತಾದ ಎಲ್ಲ ಕೆಡಕುಗಳಿಂದ ತುಂಬಿದ ಆ ಪಾಪಕೂಪ ಎಷ್ಟು ಭೀಕರವೋ ಅಷ್ಟೇ ಅದರ ಬಣ್ಣ ಬೆಳಕುಗಳ ಬೆಡಗಿನಿಂದಾಗಿ ಭವ್ಯ (ಕ. ೫೬). ಎಲ್ಲರಿಗೂ ಅಲ್ಲೇ ಮನೆ ಕಟ್ಟಿಕೊಂಡು ಇದ್ದು ಸಾಯುವ ಆಸೆ. ಕೈಯಲ್ಲಿ ಕಾಸಿಲ್ಲದಿರುವುದೊಂದೇ ಅಲ್ಲಿನ ಮಹಾಪಾತಕ.

ನಗರದ ಬೆಳವಣಿಗೆಯಲ್ಲಿ ಕಾರ್ಖಾನೆಗಳ ಪಾತ್ರ ತಿಳಿದದ್ದೇ. ಆ ಕಾರ್ಖಾನೆಗಳಿಂದ ಹೊರಡುವ ಶಬ್ದವನ್ನು ಬ್ರೆಷ್ಟ್ ವರ್ಣಿಸುವುದು ಹೀಗೆ :

ಮೇಪಲ್ ಮರಗಳ ನಡುವೆ ಹಾಯುವ ಗಾಳಿಯ ಶಬ್ದವಿದಲ್ಲ, ಮಗು
ಏಕಾಕಿ ಚಂದ್ರನನ್ನು ಕುರಿತು ಹಾಡಿದ ಹಾಡಲ್ಲ
ಇದು ನಮ್ಮ ದಿನದಿನದ ದುಡಿಮೆಯ ಘೋರ ಗರ್ಜನೆ
ಇದನ್ನು ಶಪಿಸುತ್ತೇವೆ, ಮತ್ತೆ ನಮ್ಮ ಪಾಲಿನ ವರವೆಂದು ಕೊಳ್ಳುತ್ತೇವೆ.
ಏಕೆಂದರೆ ಇದು ನಮ್ಮ ನಗರಗಳ ಕಂಠಧ್ವನಿ
ನಮ್ಮ ಪ್ರಿಯಗೀತೆ
ನಮಗೆಲ್ಲ ತಿಳಿಯುವ ಭಾಷೆ
ಬೇಗನೆ ಇದು ಜಗತ್ತಿನ ಮಾತೃಭಾಷೆಯಾಗಲಿದೆ.

ನಗರದ ನಾನಾ ರೂಪಗಳನ್ನು ಬ್ರೆಷ್ಟ್ ಅನೇಕ ಬಿಡಿಗವನಗಳಲ್ಲಿ (ಉದಾ : ಕ. ೧೬) ಹಾಗೂ 'ನಗರವಾಸಿಗಳಿಗೆ ಪಾಠವಾಗಿ ಬರೆದ ಕವಿತೆಗಳು' (ಕ. ೧೪, ೧೫) ಎಂಬ ಹತ್ತು ಮತ್ತು ಹನ್ನೆರಡು ಕವಿತೆಗಳ ಎರಡು ಗುಚ್ಛಗಳಲ್ಲಿ ನಮ್ಮ ಮುಂದಿಟ್ಟಿದ್ದಾನೆ. ಈ ನಗರಾನುಭವದ ಇನ್ನೂ ಅನೇಕ ಮುಖಗಳು ಮುಂದೆ ಅಮೇರಿಕಾದಲ್ಲಿ ಬರೆದ ಕವಿತೆಗಳಲ್ಲಿವೆ. ಯಾವ ಮಹಾಕವಿಯ ಪಾಲಿಗಾದರೂ ಇವು ಹೆಮ್ಮೆಯ ಗಳಿಕೆ.

ನಗರಕವಿತೆಗಳನ್ನು ಬರೆಯುವ ಕಾಲಕ್ಕಾಗಲೇ ಬ್ರೆಷ್ಟ್ ಕವಿಯಾಗಿ ಹೆಸರು ಗಳಿಸಿದ್ದ. ಅವನ ಕವಿತೆಗಳಲ್ಲಿನ ವ್ಯಕ್ತಿವಾದಕ್ಕೆ ಪ್ರತಿಯಾದ ಸಮಷ್ಟಿದೃಷ್ಟಿಗೆ ಹಾಗೂ ಅವುಗಳ ಚೇತನ, ಬಿರುಸು, ಬೇರೆತನಗಳಿಂದಾಗಿ ಜರ್ಮನ್ ಕಾವ್ಯದಲ್ಲಿ ಅವನದ್ದೊಂದು ಹೊಸ ಧ್ವನಿಯೆಂದು ಜನ ಗುರುತಿಸತೊಡಗಿದರು. ಆಗಿನ ರೊಮ್ಯಾಂಟಿಕ್ ಸಂಪ್ರದಾಯದ ಹಿರಿಯ ಕವಿ ಹಾಫ್‌ಮನ್‌ಸ್ತಾಲ್ ಅವನ ವಿಲಕ್ಷಣ ಪ್ರತಿಭೆಯನ್ನು 'ಈ ಕಾಲಕ್ಕೆ ಇದು ಅನಿವಾರ್ಯ'ವೆಂದು ಸ್ವಾಗತಿಸಿದ.

ಈ ನಡುವೆ ಎಲಿಜ್ಹಬೆತ್ ಹೌಪ್ಟ್‌ಮನ್ ಎಂಬಾಕೆ ಅವನ ಬಳಗಕ್ಕೆ ಸೇರಿಕೊಂಡಳು. ಆಕೆ ಸ್ವತಃ ಲೇಖನಸಾಮರ್ಥ್ಯವಿದ್ದವಳು. ತನ್ನ ವ್ಯಕ್ತಿತ್ವವನ್ನು ಹಿಂದೊತ್ತಿ ಬ್ರೆಷ್ಟ್‌ನ ಜತೆ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತ ಅವನ ಅಸ್ತವ್ಯಸ್ತ ವ್ಯವಹಾರಕ್ಕೆ ಒಂದು ವ್ಯವಸ್ಥೆ ತಂದುಕೊಟ್ಟಳು. ಚೆಲ್ಲಾಪಿಲ್ಲಿಯಾಗಿ ಹತ್ತುಕಡೆ ಹರಡಿದ್ದ ಅವನ ಕವಿತೆಗಳನ್ನು ಒಟ್ಟುಗೂಡಿಸಿದಳು. ಅವಳಿಂದಾಗಿ ಅವನ ಮೊದಲ ಕಾವ್ಯ ಸಂಪುಟ ಪ್ರಕಟವಾಯಿತು (ವಿವರಗಳಿಗೆ ಅನುಬಂಧ ೨ ನೋಡಿ). ರಕ್ಷಾಪುಟದಲ್ಲಿ ಕೇವಲ ಬ್ರೆಷ್ಟ್‌ನ ಹೆಸರಿದ್ದರೂ ಸಂಪುಟದಲ್ಲಿ ಅವಳ ಒಂದೆರಡು ಕವಿತೆಗಳೂ ಸೇರಿದ್ದವು. ಮುಂದೆ ಅವನ ಕೆಲವಾರು ಕವಿತೆಗಳಿಗೂ ನಾಟಕಗಳಿಗೂ ಮೂಲಕಲ್ಪನೆ, ಮೊದಲ ಪ್ರಾರೂಪಗಳನ್ನು ಒದಗಿಸಿದಳು. ಅವುಗಳ ಸುಧಾರಣೆ, ಅಂತಿಮ ರೂಪ, ಹೆಸರು, ಹಕ್ಕು ಬ್ರೆಷ್ಟ್‌ನದು! ಮೊದಲ ಕಾವ್ಯಸಂಪುಟವಲ್ಲದೆ 'ವೇಸೂರ್ಖೆ' (ಪ್ರಯೋಗಗಳು) ಎಂಬ ಹೆಸರಿನಲ್ಲಿ ಕವಿತೆ, ನಾಟಕಗಳನ್ನೊಳಗೊಂಡ ಎಂಟು ಹೊತ್ತಿಗೆಗಳು ಬಂದವು. ಎಲಿಜ್ಹಬೆತ್ ಹೌಪ್ಟ್‌ಮನ್ ಜೀವನಪರ್ಯಂತ ಬ್ರೆಷ್ಟ್‌ನ ಜತೆ ಇದ್ದದ್ದೇ ಅಲ್ಲದೆ, ಅವನು ಸತ್ತ ಮೇಲೆಯೂ ಅವನೆಲ್ಲ

ಬರಹಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಸಮಗ್ರದ ಸಂಪುಟಗಳನ್ನು ಹೊರತರುವುದರಲ್ಲಿ ಜೀವ ತೇದಳು. ಅವಳಿಲ್ಲದೇ ಹೋಗಿದ್ದರೆ ಬ್ರೆಷ್ಟ್‌ನ ನಂತರ ಅವನ ಹೆಸರು ಭವಿಷ್ಯದಲ್ಲಿ ಒಬ್ಬ ಮಹಾಕವಿಯದಾಗಿ ಬೆಳಗುತ್ತಿರಲಿಲ್ಲ. ಕಾಲದ ಕಸದ ಗುಡ್ಡೆಯಲ್ಲಿ ಮರೆಯಾಗಿ ಬಿಡುತ್ತಿತ್ತೇನೊ!

ಜರ್ಮನಿಯ ಅಂದಿನ ವೈಮಾರ್ ಜನತಂತ್ರದಲ್ಲಿ ರಾಜಕೀಯ–ಆರ್ಥಿಕ ಸ್ಥಿತಿ ದಿನದಿನಕ್ಕೆ ಹದಗೆಡುತ್ತ ಮುಂದುವರಿದಿತ್ತು. ಮೊದಲ ಮಹಾಯುದ್ಧ ಮುಗಿದು ಹತ್ತು–ಹನ್ನೆರಡು ವರ್ಷಗಳಾಗಿದ್ದರೂ ಅದರ ದುಷ್ಪರಿಣಾಮವಿನ್ನೂ ಕಾಡುತ್ತಿತ್ತು: ನೈತಿಕ ಅಧಃಪತನ, ಅಶಾಂತಿ. ಆರ್ಥಿಕವಾಗಿ ಗೆದ್ದ ರಾಷ್ಟ್ರಗಳಿಗೆ ತುಂಬಿಕೊಡುತ್ತಿದ್ದ ಯುದ್ಧದ ನಷ್ಟದಿಂದಾಗಿ ಭಯಂಕರ ಹಣದುಬ್ಬರ, ಸಮಾಜದಲ್ಲಿ ನಿರುದ್ಯೋಗ ಸ್ಥಿತಿ, ಉತ್ಕಟ ಬಡತನ. ಬರ್ಲಿನ್‌ನ ಹಾದಿಬೀದಿಗಳು ಯುದ್ಧದಲ್ಲಿ ಕೈಕಾಲು ಕಳೆದುಕೊಂಡ ವಿಕಲಾಂಗರಿಂದ, ತಿರುಕರಿಂದ, ಪುಂಡಪೋಕರಿಗಳಿಂದ ಕಿಕ್ಕಿರಿದಿದ್ದವು. ರಾಜಕೀಯ ಕ್ಷೇತ್ರದಲ್ಲಿ ದಿಶಾಹೀನತೆ, ಅಸ್ಥಿರತೆ, ಪಕ್ಷಗಳ ಮೇಲೆ ಪಕ್ಷಗಳು, ಪೈಪೋಟಿ, ಒಳಜಗಳ. ಕೆಲವೊಂದು ಪಕ್ಷಗಳಿಗೆ ಅವುಗಳದೇ ದಂಗೆಕೋರ ಪಡೆಗಳು. ಈ ಪಕ್ಷಗಳಲ್ಲಿ ಒಂದು ಗೊತ್ತಾದ ಕಾರ್ಯಕ್ರಮವಿದ್ದು ಜನರನ್ನು ಮೋಹಗೊಳಿಸಿದ್ದುದೆಂದರೆ ಕಮ್ಯುನಿಸ್ಟ್ ಪಾರ್ಟಿಯೊಂದೇ. ರಷ್ಯದ ಯಶಸ್ವೀ ಕ್ರಾಂತಿಯ ನಂತರ ಜಗತ್ತಿನಲ್ಲಿ ಎಲ್ಲೆಲ್ಲೂ ಬುದ್ಧಿಜೀವಿ ಯುವಕರು ಕಮ್ಯುನಿಸಂ ಕಡೆಗೆ ಒಲಿಯುತ್ತಿದ್ದುದು ಈ ಕಾಲದಲ್ಲಿಯೇ. ಇತಿಹಾಸದ ಒಂದು ದೊಡ್ಡ ಅಸಂಗತವೆಂದರೆ ಈ ಬುದ್ಧಿಜೀವಿಗಳಲ್ಲಿ ಹೆಚ್ಚಿನವರು ಸಾಮಾಜಿಕವಾಗಿಯಾಗಲಿ, ಆರ್ಥಿಕವಾಗಿಯಾಗಲಿ ಅಷ್ಟಾಗಿ ಕಮ್ಯುನಿಸಂನ ಅಗತ್ಯವಿಲ್ಲದಿದ್ದ ಮಧ್ಯಮವರ್ಗದಿಂದ ಬಂದವರು. ಸಮಾಜದ ಇತರ ವರ್ಗಗಳಿಗಿಂತ ಇವರು ಹೆಚ್ಚು ಚಿಂತನಶೀಲರೂ ಸಂವೇದನಾಶೀಲರೂ ಆಗಿರುವುದೇ ಇದಕ್ಕೆ ಕಾರಣವಿರಬಹುದು. ಮನಃಶಾಸ್ತ್ರೀಯವಾಗಿ ಕಾರಣ ಹುಡುಕುವುದಾದರೆ ತಮ್ಮ ವರ್ಗದ ಬೂರ್ಜ್ವಾ ವಿಚಾರ, ನಡವಳಿಕೆಗಳ ವಿರುದ್ಧ ಅತೃಪ್ತಿ ತೋರಿಸುವುದೊ, ಇಡೀ ಸಮಾಜದ ಪಾಪಕ್ಕೆ ತಾವೇ ಬಾಧ್ಯರೆಂದುಕೊಂಡು ಅದನ್ನು ತೊಳೆದುಕೊಳ್ಳುವ ಆತಂಕವೊ ಇರಬಹುದು.

ಬ್ರೆಷ್ಟ್‌ನಲ್ಲಿ ಚಿಕ್ಕಂದಿನಿಂದಲೂ ಸಮಾಜದಲ್ಲಿ ಹಿಂದುಳಿದವರ ಬಗ್ಗೆ ಮಾನವೀಯ ಅನುಕಂಪವಿತ್ತು. ಈಗ ಅವನ ಮನಸ್ಸು ಕೊಂಚಕೊಂಚವಾಗಿ ಮಾರ್ಕ್ಸ್‌ವಾದದ ಕಡೆಗೆ ಎಳೆಯತೊಡಗಿತು. ಬ್ರೆಷ್ಟ್‌ನ ಕವಿತೆ–ನಾಟಕಗಳ ವಿಷಯ ಅಂದಿನ ಜನಜೀವನದ ಗಂಭೀರ ಸಮಸ್ಯೆಗಳು. ಅವುಗಳ ವಿಶ್ಲೇಷಣೆ ದೋಷಾತೀತವಾಗಿದ್ದು ಸರಿಯಾದ ತೀರ್ಮಾನಗಳನ್ನು ಮುಟ್ಟಬೇಕಾದರೆ ಮಾರ್ಕ್ಸ್‌ವಾದದ ಶಾಸ್ತ್ರೀಯ ಅಧ್ಯಯನ ಅಗತ್ಯ ಎಂದು ಅವನಿಗೆ ಅನಿಸಿರಬೇಕು. ಇದರಲ್ಲಿ ಆ ಕಾಲಕ್ಕೆ ಜರ್ಮನಿಯಲ್ಲಿ ಮಾರ್ಕ್ಸಿಸಂನ ತಜ್ಞನೆನಿಸಿಕೊಂಡಿದ್ದ ಕಾರ್ಲ್ ಕೋರ್ಷ್‌ನ ಮಾರ್ಗದರ್ಶನ ದೊರೆಯಿತು. ಮಾರ್ಕ್ಸ್‌ನ 'ಡಾಸ್ ಕಾಪಿಟಲ್' ಅನ್ನು ಅಭ್ಯಾಸ ಮಾಡಿದ. ಕೊಂಚ ಕಾಲ ಕಮ್ಯುನಿಸ್ಟ್ ಪಕ್ಷ ನಡೆಸುತ್ತಿದ್ದ ಶ್ರಮಜೀವೀ ತರಗತಿಗಳಿಗೂ ಹೋಗಿ ಕೂರುತ್ತಿದ್ದ, ಅವನ ಹೆಸರಿಗೆ 'ಕಮ್ಯುನಿಸ್ಟ್' ವಿಶೇಷಣ ಗಟ್ಟಿಯಾಗಿ ಅಂಟಿಕೊಂಡಿತು. ಬ್ರೆಷ್ಟ್‌ನ ಈ ಕಮ್ಯುನಿಸಂನ

ಒಲವು ಕವಿತೆಗಳಲ್ಲಿ ಕಾಣಿಸಿಕೊಂಡು, ಅವನ ಕಾವ್ಯದ ಕಾಳಜಿಗಳ ಪಟ್ಟಿಗೆ ಸೇರಿಕೊಂಡಿತು. ಆದರೆ ಅಂತಹ ಕವಿತೆಗಳಲ್ಲಿ ಮುಪ್ಪಾಗ ಪ್ರಚಾರದ ಮಟ್ಟ ಬಿಟ್ಟು ಮೇಲೇರುವುದಿಲ್ಲ. ಆ ಜಾತಿಯ ಎಲ್ಲ ದೇಶಗಳ ಎಲ್ಲ ಭಾಷೆಗಳ ಕವಿತೆಗಳಂತೆ ಕಾವ್ಯಗುಣ ಸಾಲದೆ, ಸೂಕ್ಷ್ಮ ಧ್ವನಿ ಸಾಧಿಸದೆ, ಅನುಭವ ತೀರಾ ಸರಳವಾಗಿ ಮಾತು ಅಬ್ಬರವಾಗುತ್ತದೆ. ಉದಾಹರಣೆಗೆ, ಅಂತಹ ಒಂದು ಕವಿತೆಯಲ್ಲಿ ಬ್ರೆಷ್ಟ್‌ನ ಶ್ರಮಿಕ ತನ್ನ ಹಕ್ಕಿನ ಅನ್ನ ಕೊಡದವರಿಗೆ ಹೇಳುತ್ತಾನೆ : "ನಾನು ಮತ್ತೆ ಬರುವುದು ಟ್ಯಾಂಕ್ ಹತ್ತಿ, ಬಂದೂಕು ಹಿಡಿದು. ಟ್ಯಾಂಕ್ ನಡೆದದ್ದೇ ದಾರಿ, ಬಂದೂಕದ ಸದ್ದೇ ನನ್ನ ಅಭಿಪ್ರಾಯ" (ಇಂತಹವೇ ಬೇರೆ ಬೇರೆ ಕೆಲವು ನಮೂನೆಗಳು ಕ. ೧೮ ರಿಂದ ೨೧ರಲ್ಲಿವೆ).

೫

೧೯೩೦ರ ದಶಕ ಜರ್ಮನಿಯಿಂದಾಗಿ ಜಗತ್ತಿನ ಇತಿಹಾಸದಲ್ಲೇ ಒಂದು ನಿರ್ಣಾಯಕ ಕಾಲ. ಜರ್ಮನಿಯ ರಾಜಕೀಯ ಗೊಂದಲದ ನಡುವೆ ಹಿಟ್ಲರ್ ರಭಸದಿಂದ ಮೇಲೇರುತ್ತಿದ್ದ. ದಿಕ್ಕೆಟ್ಟ ಜನತೆಯ ಕಣ್ಣಮುಂದೆ ಅವನು ಕಟ್ಟಿದ್ದು ಕನಸಿನ ಭವಿಷ್ಯವನ್ನು. ಶುದ್ಧ ಆರ್ಯನ್ ರಕ್ತವಿದ್ದವರಷ್ಟೇ ಜರ್ಮನ್ ಜನರೆಂದ. ಉಳಿದ ಯೆಹೂದಿಗಳೂ ರೋಮನಿಗಳೂ ಜರ್ಮನಿಯ ರಕ್ತ ಹೀರುವ ಜಿಗಣೆಗಳೆಂದ. ದೇಶದ ದುಸ್ಥಿತಿಗೆಲ್ಲ ಬ್ಯಾಂಕ್ ಇತ್ಯಾದಿ ಆರ್ಥಿಕ ಸಂಸ್ಥೆಗಳನ್ನು ದೊಡ್ಡ ದೊಡ್ಡ ವ್ಯಾಪಾರೋದ್ಯೋಗಗಳನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಯೆಹೂದಿಗಳೇ ಕಾರಣರು, ಅವರನ್ನು ಮಟ್ಟಹಾಕಬೇಕು ಅಂದ. ಜರ್ಮನ್ ಜನ ಹೆಚ್ಚಿನ ಸಂಖ್ಯೆಯಲ್ಲಿದ್ದ ಸುತ್ತಮುತ್ತಣ ರಾಷ್ಟ್ರಗಳ ಸರಹದ್ದಿನ ಪ್ರಾಂತಗಳು ಜರ್ಮನಿಗೆ ಸೇರಬೇಕೆಂದ. ಇದ್ದ ಪರಿಸ್ಥಿತಿಯನ್ನು ಬದಲಾಯಿಸಲು ಯಾವ ಪ್ರಜಾಸತ್ತಾತ್ಮಕ ಉಪಾಯಗಳೂ ಫಲಿಸಿರಲಿಲ್ಲ. ಜನ ಬುದ್ಧಿಗೆಟ್ಟಿದ್ದರು. ಅನೇಕರಿಗೆ ಹಿಟ್ಲರ್‌ನೇ ಏಕೈಕ ಆಪದ್ರಕ್ಷಕನಾಗಿ ಕಾಣತೊಡಗಿದ. ಅವನಿಗೆ ಆ ಜನರ ಬೆಂಬಲ ದೊರೆಯಿತು. ಮೇಲೆ, ನಾಜ್ಜಿಪಕ್ಷದ ಪುಂಡಾಟ ಅವನ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳಲು ದಾರಿ ಮಾಡಿಕೊಟ್ಟಿತು. ಬ್ರೆಷ್ಟ್‌ನಂತಹ ಬುದ್ಧಿಜೀವಿಗಳಿಗೆ ಹಿಟ್ಲರ್‌ನ ಹಾರಾಟಗಳೆಲ್ಲವೂ ಅಶುಭಸೂಚಕವಾಗಿ, ಇನ್ನೊಂದು ಯುದ್ಧದ ಮುಂಗುರುತಾಗಿ ಕಾಣತೊಡಗಿದವು. ಹಿಟ್ಲರ್ ಮತ್ತು ಅವನ ನಾಜ್ಜಿ ಪಡೆ ಬಲಗೊಳ್ಳುತ್ತ ಹೋದಂತೆ ಬ್ರೆಷ್ಟ್‌ನ ಆತಂಕವೂ ತೀವ್ರವಾಯಿತು. ಅವನು ಕಮ್ಯುನಿಸಂ ಕಡೆಗೆ ಹೆಚ್ಚು ಹೆಚ್ಚು ಒಲಿದಿದ್ದಕ್ಕೆ ಇದೂ ಒಂದು ಕಾರಣ. 'ಮೃತಯೋಧನ ಜೀವನ ವೃತ್ತಾಂತ'ದಂತಹ ಕವಿತೆಗಳಲ್ಲಿನ ಯುದ್ಧವಿರೋಧೀ ನಿಲುವು ಹಾಗೂ ಕಟು ವಿಡಂಬನೆಗಳಿಂದಾಗಿ ಅವನು ನಾಜ್ಜಿಗಳ ಕೋಪಕ್ಕೆ ಗುರಿಯಾಗಿ ಅವರ 'ಕೊಲೆ–ಪಟ್ಟಿ' ಸೇರಿದ್ದ. ಅದಕ್ಕಿದ್ದ ಇನ್ನೂ ಎರಡು ಕಾರಣಗಳೆಂದರೆ ಅವನು ಹಿಟ್ಲರ್ ಅತಿಯಾಗಿ ದ್ವೇಷಿಸಿದ್ದ ಪ್ರತಿದ್ವಂದ್ವೀ ಪಕ್ಷವಾದ ಕಮ್ಯುನಿಸ್ಟ್ ಪಾರ್ಟಿಯ ಬೆಂಬಲಿಗ; ಅವನ ಹೆಂಡತಿ ಹೆಲೆನ್ ವೀಗಲ್ ಯೆಹೂದೀ ಹೆಂಗಸು.

ಯುದ್ಧದ್ವೇಷ ಬ್ರೆಷ್ಟ್‌ನ ಕಾವ್ಯನಾಟಕಗಳಲ್ಲಿ ಸಾಧಾರಣ ಕಾಳಜಿಗೂ ಮೀರಿದ ಜೀವನಬದ್ಧತೆಯಾಗಿ ಯುದ್ಧಪೂರ್ವ ದಿನಗಳಿಂದ ಹಿಡಿದು ಯುದ್ಧಕಾಲದವರೆಗೆ, ಮತ್ತೆ ಮುಂದೆಯೂ ಯುದ್ಧೋತ್ತರ ದಿನಗಳಲ್ಲಿ ಹಿನ್ನೆನವಾಗಿ ಉಳಿದುಬಂದಿತು. ಮುಂಬರುವ

ಯುದ್ಧದ ದಿನಗಳನ್ನು ಅವನು 'ಕಗ್ಗತ್ತಲಕಾಲ'ವೆಂದು ಕರೆದ. ಅದರ ಬಗ್ಗೆ ಜನರಿಗೆ ಎಚ್ಚರಿಕೆ ಕೊಡುವುದು ಲೇಖಕನಾಗಿ ತನ್ನ ಆದ್ಯಕರ್ತವ್ಯವೆಂದುಕೊಂಡು, ಅದನ್ನು ತನ್ನ ರಚನೆಗಳಲ್ಲಿ ಸಮರ್ಥವಾಗಿ ನೆರವೇರಿಸಿದ. ಹಿಟ್ಲರ್ ಮತ್ತು ನಾಜ್ಹಿಪಡೆಯ ದುಷ್ಟ ತಂತ್ರಗಳ ಒಂದೊಂದು ಮುಖವನ್ನೂ ಕುರಿತು ಜನರ ಕಣ್ಣು ತೆರೆಸುವಂತಹ ಕವಿತೆಗಳನ್ನು ಬರೆದ. (ಈ ಸಂಪುಟದ ಮೂರನೆ ವಿಭಾಗದ ಕವಿತೆಗಳಲ್ಲಿ ಹೆಚ್ಚಿನವು ಆ ಗುಂಪಿಗೆ ಸೇರಿದವು.)

ಅಂದಿನ ವಾಸ್ತವಿಕತೆಯನ್ನು ಬ್ರೆಷ್ಟ್ ಕಂಡಷ್ಟು ಸ್ಪಷ್ಟವಾಗಿ ಅನೇಕ ಕವಿಗಳೂ ಲೇಖಕರೂ ಕಾಣಲಾಗದೆ ಹೋಗಿದ್ದರು. ಉದಾಸೀನ, ಹೇಡಿತನ ಅಥವಾ ಭಯಭೀತಿಗಳ ಕಾರಣ ಹಿಟ್ಲರ್‌ನನ್ನು ತಾಳಿಕೊಂಡು ತಮ್ಮ ಮೌನದಿಂದ ಅಪ್ರತ್ಯಕ್ಷವಾಗಿ ಅವನ ದುರುತ್ಥಾನಕ್ಕೆ ಆಸ್ಪದ ಕೊಟ್ಟಿದ್ದವರೇ ಹೆಚ್ಚು. ಅಂಥವರೆಲ್ಲರನ್ನೂ ಟೀಕಿಸಿ, ಹೆಸರಾಂತರಾದರೆ ಅವರ ಹೆಸರೆತ್ತಿ ಹಿಡಿದು ಬ್ರೆಷ್ಟ್ ವ್ಯಂಗ್ಯವಾಡಿದ. ಹೆಸರಾಂತರಲ್ಲಿ ಕೆಲವರು ಮುಂದೆ ಹಿಟ್ಲರ್‌ನಿಗೆ ಹಿಡಿಸದ ಸಾಹಿತ್ಯವನ್ನು ರಚಿಸಿದಾಗ ದೇಶಬಿಟ್ಟು ಹೋಗಬೇಕಾಯಿತು. ಇಲ್ಲವೇ ಚಿತ್ರಹಿಂಸೆ ಅನುಭವಿಸಬೇಕಾಯಿತು.

ಬ್ರೆಷ್ಟ್‌ನ ಅನೇಕ ಕವಿತೆಗಳಲ್ಲಿ ಮಾತು ಚತುರವಾಗುವುದುಂಟು. ಆದರೆ ಹಿಟ್ಲರ್ ಮತ್ತು ನಾಜ್ಹಿಗಳನ್ನು ಕುರಿತು ಬರೆಯುವಾಗ ಅವನ ಧಾಟಿ ಸ್ಪಷ್ಟ, ನೇರ, ಖಡಾಖಂಡಿತ. ತನ್ನ ಜೀವಕ್ಕೆ ಅಪಾಯವಿದೆಯೆಂದು ಗೊತ್ತಿದ್ದೂ ಅವರನ್ನು ಸಿಟ್ಟಿಗೆಬ್ಬಿಸುವ ಮಟ್ಟಿನ ವ್ಯಂಗ್ಯ, ವಿಡಂಬನೆಗಳಿಗೆ ತೊಡಗಿದಾಗ ಬ್ರೆಷ್ಟ್ ತನ್ನ ವ್ಯವಹಾರಸ್ಥ ಸ್ವಭಾವಕ್ಕೆ ವಿರುದ್ಧವಾದ ದಿಟ್ಟತನ ತೋರಿಸುತ್ತಾನೆ.

ವೈಯಕ್ತಿಕವಾಗಿ ಬ್ರೆಷ್ಟ್‌ನ ನಂಬಿಕೆ ಮತ್ತು ವ್ಯವಹಾರಗಳ ನಡುವೆ ವಿರೋಧಾಭಾಸಗಳನ್ನು ಕಂಡು, ಕಾವ್ಯನಾಟಕಗಳಲ್ಲಿ ಅವನ ಬದ್ಧತೆಗಳ ಪೂರ್ಣ ಪ್ರಾಮಾಣಿಕತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದವರಿದ್ದಾರೆ. ಆದರೆ ಹಿಟ್ಲರ್–ನಾಜ್ಹಿ–ಯುದ್ಧ ಇವುಗಳ ವಿರೋಧದ ವಿಷಯದಲ್ಲಿ ಅವನ ನಂಬಿಕೆ ಉನ್ಮಾದವೊ ಮತಾಂಧತೆಯೊ ಅನ್ನುವಷ್ಟು ಉತ್ಕಟವಾಗಿದ್ದು ಪ್ರಶ್ನಾತೀತವಾಗುತ್ತದೆ. ಅವನ ಒಂದು ಕವನದಲ್ಲಿ ತನ್ನ ಬದುಕನ್ನು ವಿವರಿಸುತ್ತ 'ಗದ್ದುಗೆಯೇರಿದವರು/ನಾನಿಲ್ಲದೆ ಹೋಗಿದ್ದರೆ ಹೆಚ್ಚು ಭದ್ರವಾಗಿ ಕೂರುತ್ತಿದ್ದರೆಂದು ನನ್ನ ನಂಬಿಕೆ' (ಕ. ೪೧) ಅಂದದ್ದು ಒಣಜಂಬವಲ್ಲ, ಅಕ್ಷರಶಃ ಸತ್ಯ.

ಜರ್ಮನಿಯಲ್ಲಾಗಲಿ, ಇಡೀ ಜಗತ್ತಿನಲ್ಲಾಗಲಿ, ಬ್ರೆಷ್ಟ್‌ನಂತೆ, ಬ್ರೆಷ್ಟ್‌ನಷ್ಟು ಯುದ್ಧವಿಷಯಕ ಕವಿತೆಗಳನ್ನು ಬರೆದವರು ಬೇರೊಬ್ಬರಿಲ್ಲ. ಆ ಕವಿತೆಗಳ ಸಂಖ್ಯೆ ಅವನ ಒಟ್ಟು ಬೆಳಸಿನ ಮೂರನೆ ಒಂದು ಭಾಗದಷ್ಟಾಗುತ್ತದೆ.

ಹಿಟ್ಲರ್ ಜರ್ಮನಿಯ ಚಾನ್ಸೆಲರ್ ಆದ ಒಂದೇ ತಿಂಗಳೊಳಗೆ ಬರ್ಲಿನ್‌ನ ಶಾಸನ ಭವನಕ್ಕೆ ಬೆಂಕಿ ಬಿದ್ದಿತು. ಹಾಗೆ ಬೆಂಕಿ ಹಾಕಿದ್ದವರು ಸ್ವತಃ ಹಿಟ್ಲರ್‌ನ ಕಡೆಯವರೇ, ಅವನ ಪ್ರೇರಣೆಯಿಂದಲೇ. ಅದರ ಉದ್ದೇಶ ತನ್ನ ಬದ್ಧದ್ವೇಷಿಗಳಾಗಿದ್ದ ಕಮ್ಯುನಿಸ್ಟರ ಮೇಲೆ ಅದರ ತಪ್ಪು ಹೊರಿಸಿ ಅವರ ದಮನ ಮಾಡುವುದು. (ಭಾರತದಲ್ಲಿ ಇದಕ್ಕೊಂದು ಸಾದೃಶ್ಯ ಸಿಗುತ್ತದೆ : ಎಮರ್ಜನ್ಸಿ ಕಾಲದಲ್ಲಿ ಸಂಜಯಗಾಂಧಿ ನಡುರಾತ್ರಿ ಗಾಳಿಯಲ್ಲಿ ಗುಂಡುಹಾರಿಸಿ, ಅದು ವಿರೋಧಪಕ್ಷದವರು ತನ್ನನ್ನು ಕೊಲ್ಲಲು ಮಾಡಿದ ಪ್ರಯತ್ನವೆಂದು

ಗುಲ್ಲು ಹಬ್ಬಿಸಿ, ಮುಂದೆ ಗುಟ್ಟು ರಟ್ಟಾದ ಪ್ರಸಂಗ ಅದು. ರಾಜಕೀಯದಲ್ಲಿ ದೇಶಕಾಲಗಳ ಕಟ್ಟಿನಾಚೆಯೂ ಒಬ್ಬರು ಇನ್ನೊಬ್ಬರಿಂದ ದುಷ್ಟಪಾಠಗಳನ್ನು ಕಲಿಯುತ್ತಾರೆನ್ನುವುದಕ್ಕೆ ಇದು ನಿದರ್ಶನ!)

ಶಾಂತಿವಾದಿ, ಕಮ್ಯುನಿಸ್ಟ್ ಬ್ರೆಷ್ಟ್‌ಗೆ ಇನ್ನು ಜರ್ಮನಿಯಲ್ಲಿ ಸ್ವತಂತ್ರವಾಗಿ ಬದುಕಿ ಉಳಿಯುವುದು ಅಸಾಧ್ಯವೆಂದು ಖಚಿತವಾಯಿತು. ನಿಂತ ಕಾಲಿನಲ್ಲಿ ಪಕ್ಕದ ಚೆಕೊಸ್ಲಾವಾಕಿಯಾದ ಪ್ರಾಗ್‌ಗೆ ಬಂದ. ಅಲ್ಲಿಂದ ಆಸ್ಟ್ರಿಯಾದ ವಿಯೆನ್ನಾ, ವಿಯೆನ್ನಾದಿಂದ ಸ್ವಿಟ್ಜರ್‌ಲ್ಯಾಂಡ್, ಫ್ರಾನ್ಸ್‌ಗಳ ಮೂಲಕ ಡೆನ್ಮಾರ್ಕ್ ತಲುಪಿದ. ಮುಂದಿನ ಹದಿನೈದು ವರ್ಷಕಾಲ ಅವನ ಪಾಲಿಗೆ ದೇಶಾಂತರವಾಸ ಕಾದಿತ್ತು. ಹೆಂಡತಿ ಹೆಲೆನ್ ವೀಗಲ್ ಮತ್ತು ಮಕ್ಕಳಾಗಲೇ ಅಲ್ಲಿದ್ದರು. ಗಂಡ ಹೆಂಡತಿ ತಮ್ಮಲ್ಲಿದ್ದ ಹಣ ಕೂಡಿಸಿ ಡೆನ್ಮಾರ್ಕಿನ ಸ್ವೆಂಡ್‌ಬೋರ್ಗ್ ಹತ್ತಿರ ಒಂದು ಮನೆ ಕೊಂಡರು. ಮುಂದಿನ ಐದು ವರ್ಷ ಅದು ಅವರ ಆವಾಸವಾಯಿತು. ಹೊರ ಭಾಷೆಯ ಆ ಹಳ್ಳಿಯಲ್ಲಿ ಬರ್ಲಿನ್‌ನಂತೆ ರಂಗಚಟುವಟಿಕೆಗಳಿಗೆ ಅವಕಾಶವಿರಲಿಲ್ಲ. ಬ್ರೆಷ್ಟ್ ಈಗ ಹೆಚ್ಚಾಗಿ ಕವಿತೆಯಲ್ಲಿ ತೊಡಗಿಕೊಂಡ. ಡೆನ್ಮಾರ್ಕಿನಲ್ಲಿದ್ದೇ ಜರ್ಮನಿಯ ರಾಜಕೀಯ ಗಡಿಬಿಡಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ. ಯುದ್ಧ ವಿಷಯಕ ಕವಿತೆಗಳು ಮುಂದುವರಿದವು. ಜತೆಗೆ ತಾನೂ ತನ್ನಂತಹ ಲಕ್ಷಾಂತರ ಮಂದಿ ಎದುರಿಸಬೇಕಾಗಿ ಬಂದಿದ್ದ ದೇಶಾಂತರವಾಸದ ದುರವಸ್ಥೆಯನ್ನು ತೀವ್ರವಾಗಿ ಅನುಭವಿಸಿ ಆ ವಿಷಯದ ಮೇಲೆಯೂ ಕವಿತೆ ಬರೆದ. ಅವನ ಅನೇಕ ಕಾಳಜಿಗಳಲ್ಲಿ ಅದೂ ಒಂದಾಯಿತು. (ಕ. ೩೮–೪೦)

ನಗರ ದೂರವಾಗಿ, ಹೇಳಿಕೊಳ್ಳುವ ಚಟುವಟಿಕೆಗಳೂ ಇಲ್ಲದೆ ಆ ಹಳ್ಳಿಗಾಡಿನಲ್ಲಿ ಪ್ರಕೃತಿಯ ನಡುವೆ ವಾಸಿಸುವಾಗ ಬ್ರೆಷ್ಟ್‌ನ ದೃಷ್ಟಿ ಸಹಜವಾಗಿ ಒಳಮುಖವಾಯಿತು. ತಾನು, ತನ್ನ ಬದುಕು ಮತ್ತು ತನ್ನ ಕಾಲಗಳ ಬಗ್ಗೆ ಆಳವಾಗಿ ಚಿಂತಿಸಿ ಸ್ವಂತದ ಅನಿಸಿಕೆಗಳಿಗೆ ಬ್ರೆಷ್ಟ್ ಕವಿತೆಯಲ್ಲಿ ಆಕಾರ ಕೊಡತೊಡಗಿದ. ಈ ಗುಂಪಿನ ಕವಿತೆಗಳಿಗೆ ಉತ್ತಮ ಉದಾಹರಣೆಯೆಂದರೆ ಅವನ ಅತ್ಯಂತ ಸುಪ್ರಸಿದ್ಧ 'ನನ್ನ ನಂತರ ಹುಟ್ಟಿದವರಿಗೆ' (ಕ. ೪೧). ಅದರಲ್ಲಿ ಅಂದಿನ ಕಾಲಸ್ಥಿತಿ ಇನಿತೂ ವ್ಯಂಗ್ಯ, ಅತಿಶಯೋಕ್ತಿಗಳಿಲ್ಲದೆ ಯಥಾವತ್ತಾಗಿ ಅಭಿವ್ಯಕ್ತಿ ಪಡೆದಿದೆ. ಅದರ ಇನ್ನೊಂದು ವಿಶೇಷವೆಂದರೆ ವಿಷಯ ಖಂಡಿತವಾಗಿ ಭಾವಗೀತೆಯದಲ್ಲವಾದರೂ ಹೇಳುವ ರೀತಿಯಲ್ಲಿ ಗೀತಗುಣ ತುಂಬಿದ್ದು, ಬ್ರೆಷ್ಟ್‌ನ ಕಾವ್ಯೋದ್ದೇಶಕ್ಕೆ ವ್ಯತಿರಿಕ್ತವಾಗಿ ಓದುಗರ ಭಾವ ಕಲಕುತ್ತದೆ. ಬ್ರೆಷ್ಟ್‌ನ ಕಾವ್ಯರಾಶಿಯಲ್ಲಿ ಇಂತಹ ಇನ್ನೂ ಅನೇಕ ನಮೂನೆಗಳು ಸಿಗುತ್ತವೆ.

ಬ್ರೆಷ್ಟ್ ಯುರೋಪಿನಲ್ಲಿ ದೇಶಾಂತರವಾಸಿಯಾಗಿದ್ದಾಗ ಅವನ ಎರಡು ಕವಿತಾ ಸಂಗ್ರಹಗಳು, 'ಕವಿತೆಗಳು, ಹಾಡುಗಳು, ವೃಂದಗಾನಗಳು' ಮತ್ತು 'ಸ್ವೆಂಡ್‌ಬೋರ್ಗ್ ಕವಿತೆಗಳು', ಪ್ಯಾರಿಸ್ ಮತ್ತು ಲಂಡನ್‌ನಿಂದ ಪ್ರಕಟವಾದವು.

೧೯೩೯ರಲ್ಲಿ ಯುದ್ಧ ಅಧಿಕೃತವಾಗಿ ಘೋಷಿತವಾದಾಗ ಬ್ರೆಷ್ಟ್ ಇಡೀ ಯುರೋಪ್ ಹಿಟ್ಲರ್‌ನ ಬಾಯಿಗೆ ತುತ್ತಾಗಲಿರುವುದನ್ನು ಮುಂಗಂಡ. ಅವನು ಯುರೋಪಿನಲ್ಲೆಲ್ಲೂ ಜೀವಂತ ಉಳಿಯುವ ಸಾಧ್ಯತೆಯಿರಲಿಲ್ಲ. ಡೆನ್ಮಾರ್ಕಿನಿಂದ ಸ್ವೀಡನ್ನಿಗೆ, ಸ್ವೀಡನ್ನಿನಿಂದ ಫಿನ್‌ಲ್ಯಾಂಡಿಗೆ ಬಂದು; ಎರಡೂ ದೇಶಗಳಲ್ಲಿ ಒಂದೊಂದು

ವರ್ಷವಿದ್ದ. ಈ ಅವಧಿಯಲ್ಲಿ ಅವನ ಮನಸ್ಸು ಮತ್ತೆ ನಾಟಕದ ಕಡೆ ಒಲಿದು, 'ಗೆಲಿಲಿಯೊ', 'ಮದರ್ ಕರೇಜ್', 'ಚಾಕ್ ಸರ್ಕಲ್'ಗಳಂತಹ ಐದು ಅತ್ಯುತ್ತಮ ಕೃತಿಗಳು ರೂಪಗೊಂಡವು. ಜರ್ಮನಿಯ ಪೂರ್ವದಿಕ್ಕಿನಿಂದ ಮೊದಲು ಮಾಡಿ ಮೇಲೆ ಉತ್ತರದ ಅಂಚಿನವರೆಗಿನ ಬ್ರೆಷ್ಟ್‌ನ ಯೂರೋಪ್ ಪ್ರದಕ್ಷಿಣೆಯನ್ನು ಗಮನಿಸಿದರೆ ಹಿಟ್ಲರ್ ಅವನನ್ನೇ ಬೆನ್ನಟ್ಟಿ ಬರಲು ಯುದ್ಧ ಹೂಡಿದನೇನೊ ಎಂದನಿಸದೆ ಇರದು!

ಕೊನೆಗೆ ಬ್ರೆಷ್ಟ್ ಯೂರೋಪ್ ಬಿಟ್ಟು ಸಂಸಾರ ಸಮೇತ ಮಾಸ್ಕೋ ಮೂಲಕ ಅಮೆರಿಕಾಕ್ಕೆ ಗುಳೆಹೊರಟ. ಅಮೆರಿಕಾಕ್ಕೆ ತೆರಳುವ ಹಿಂದಿನ ಒಂದು ಸಣ್ಣ ಘಟನೆ ಜರ್ಮನಿಯಲ್ಲಿ ನಾಜ್ಹಿ ಶತ್ರುಶಿಬಿರದಲ್ಲಿಯೂ ಬ್ರೆಷ್ಟ್‌ನ ಪ್ರಭಾವ, ಜನಪ್ರಿಯತೆ ಎಷ್ಟಿತ್ತೆಂದು ತೋರಿಸುತ್ತದೆ. ಅಮೆರಿಕಾಕ್ಕೆ ಹೋಗುವ ಮೊದಲು ಫಿನ್‌ಲ್ಯಾಂಡಿನ ಅಮೆರಿಕಾದ ರಾಯಭಾರಿ ಕಚೇರಿಯಲ್ಲಿ ಪ್ರವೇಶಪತ್ರ (ವೀಸಾ) ದೊರಕಿಸಿಕೊಳ್ಳುವುದು ಮೊದಲ ಅವಶ್ಯಕತೆ. ಬ್ರೆಷ್ಟ್ ಅರ್ಜಿ ಸಲ್ಲಿಸಿದ. ಅಲ್ಲಿನ ಅಧಿಕಾರಿಗಳು 'ನಿಮ್ಮ ಸ್ವದೇಶದಿಂದ ನೀವೊಬ್ಬ ಒಳ್ಳೆಯ ಪೌರರೆಂದು ಶಿಫಾರಸು ಪತ್ರಬೇಕು. ಅದಕ್ಕೆ ಬರೆಯುತ್ತೇವೆ' ಅಂದರು. ಹಿಟ್ಲರ್ ಸರಕಾರ ಬ್ರೆಷ್ಟ್‌ಗೆ ಅಂತಹ ಪತ್ರ ಕೊಡುವುದುಂಟೆ? ಯುದ್ಧದ ಭರಾಟೆಯಲ್ಲಿ ಇಂತಹ ಕ್ಷುಲ್ಲಕ ವಿಷಯಗಳಿಗೆ ಗಮನ ಕೊಡಲು ಯಾರಿಗೆ ಬಿಡುವಿರುತ್ತದೆ? ಆ ಹೊತ್ತಿಗಾಗಲೇ ಹಿಟ್ಲರ್‌ನ ಸರಕಾರ ಬ್ರೆಷ್ಟ್‌ನ ಜರ್ಮನ್ ಪೌರತ್ವವನ್ನು ರದ್ದು ಮಾಡಿತ್ತು. ಕೆಲವೇ ದಿನಗಳಲ್ಲಿ ಯುದ್ಧ ಬಾಲ್ಕನ್ ಕ್ಷೇತ್ರಕ್ಕೆ ಹರಡಿ, ಪಕ್ಕದ ನಾರ್ವೆಯ ದಾಳಿಯಾಗುವುದರಲ್ಲಿತ್ತು. ಎಂತಹ ಇಕ್ಕಟ್ಟಿನಲ್ಲಿಯೂ ನುಣುಚಿಕೊಂಡು ಪಾರಾಗುತ್ತಿದ್ದ ಬ್ರೆಷ್ಟ್ ಇನ್ನು ತನ್ನ ಕತೆ ಮುಗಿಯಿತೆಂದುಕೊಂಡು ಚಿಂತೆಗೆ ಒಳಗಾದ. ಆದರೆ ಅವನೇ ಹೇಳುತ್ತಿದ್ದಂತೆ ಅದೃಷ್ಟ ಅವನ ಜತೆಗಿತ್ತು (ಕ. ೬೪). ಶಿಫಾರಸು ಪತ್ರ ಬಂದೇ ಬಂತು. ಜರ್ಮನಿಯ ಗೃಹ ಸಚಿವಾಲಯದ ಅಜ್ಞಾತ ಅಧಿಕಾರಿಯೊಬ್ಬ ಅದನ್ನು ಖಾಸಗಿಯಾಗಿ ರವಾನೆ ಮಾಡಿದ್ದ! ಅವನು ಯಾವನೊ ಬ್ರೆಷ್ಟ್‌ನ ಪ್ರತಿಭೆಗೆ ಮರುಳುಹೋಗಿದ್ದವನೇ ಇರಬೇಕು. ಬ್ರೆಷ್ಟ್ ಬದುಕಿಕೊಂಡ. ಆ ಸಂದರ್ಭವನ್ನು ಕುರಿತು ಒಂದು ಹಾಸ್ಯಕವಿತೆಯನ್ನೂ ಬರೆದ.

೬

ಬ್ರೆಷ್ಟ್ ಅಮೆರಿಕಾಕ್ಕೆ ಬಂದು ಪಶ್ಚಿಮ ದಂಡೆಯ ಕ್ಯಾಲಿಫೋರ್ನಿಯಾ ಪ್ರಾಂತದಲ್ಲಿ ಲಾಸ್ ಏಂಜಲೀಸ್ ನಗರದ ಹತ್ತಿರ ಬೀಡುಹೂಡಿದ. ಅಲ್ಲಿನ ಹಾಲಿವುಡ್ ಕಾರ್ಯಕ್ಷೇತ್ರವಾಯಿತು. ನಾಟಕದ ಜತೆಗೆ ಚಲನಚಿತ್ರದಲ್ಲೂ ತೊಡಗಿಕೊಂಡ. ಆಡೆನ್‌ನಂತಹ ಖ್ಯಾತಲೇಖಕರ ಪರಿಚಯವಾಯಿತು. ಇಂಗ್ಲಿಷ್ ಅನುವಾದದಲ್ಲಿ ಮೂರು ನಾಲ್ಕು ನಾಟಕಗಳು ಅಲ್ಲಲ್ಲಿ ನಡೆದವು. ಚಾರ್ಲ್ಸ್ ಲಾಫ್ಟನ್ ಅವನ 'ಗೆಲಿಲಿಯೊ'ದಲ್ಲಿ ಮುಖ್ಯ ಪಾತ್ರ ವಹಿಸಿದ. ಆದರೂ ಒಟ್ಟಿನಲ್ಲಿ ಅಮೆರಿಕಾ, ಹಾಲಿವುಡ್ ಬ್ರೆಷ್ಟ್‌ಗೆ ಮಾಡಿದ್ದಲ್ಲ. ತನ್ನ ಒಂದು ಕವಿತೆಯಲ್ಲಿ ಹೇಳಿಕೊಂಡಂತೆ ಏಳು ದೇಶಗಳನ್ನು ಸುತ್ತಿ ಬಂದಿದ್ದ ಬ್ರೆಷ್ಟ್‌ಗೆ ಅಮೆರಿಕಾದಲ್ಲಿ ಕಂಡದ್ದೂ ಅದೇ ಮೂರ್ಖತನವೆ! ಅವನೊಬ್ಬ ಹಿಟ್ಲರ್–ವಿರೋಧೀ ದೇಶಭ್ರಷ್ಟನೆಂದು ಅಲ್ಲಿ ಸ್ವಾಗತ ದೊರೆತಿತ್ತೇ ಹೊರತು ಪ್ರತಿಭಾವಂತ ಲೇಖಕನೆಂದಲ್ಲ. ಅವನಂತಹ ದೇಶಭ್ರಷ್ಟರು ಅಲ್ಲಿ ಸಾವಿರಗಟ್ಟಲೆ. ಸಿನಿಮಾ–ನಾಟಕ ಕ್ಷೇತ್ರಗಳಲ್ಲಿ ಅವಕಾಶ ಕಡಿಮೆ,

ಪೈಪೋಟಿ ತೀವ್ರ. ಮೇಲೆ, ಅಲ್ಲಿನ ಜನ ಮೆಚ್ಚುತ್ತಿದ್ದ ನಾಟಕದ ಶೈಲಿ ಪಾರಂಪರಿಕ. ಬ್ರೆಷ್ಟ್‌ನ 'ಎಪಿಕ್ ಥಿಯೇಟರ್'ನ ನವೀನ ರಂಗತಂತ್ರ ಅವರಿಗೆ ಸೊಗಸದು. ಅಮೆರಿಕಾ ಹೆಮ್ಮೆಯ ಜನತಂತ್ರ, ಕಮ್ಯುನಿಸಂನ ಬದ್ಧದ್ವೇಷಿ. ರಷ್ಯಾದೊಂದಿಗೆ ಯಾವದೇ ಸಂಪರ್ಕವಿಟ್ಟು ಕೊಂಡವರು, ಕಮ್ಯುನಿಸ್ಟರು ಅಂದರೆ ಅಮೆರಿಕಾ ಸರಕಾರ ಅನುಮಾನದಿಂದ ನೋಡು ತ್ತಿತ್ತು. ಬ್ರೆಷ್ಟ್‌ನ ಅಸಂತೋಷಕ್ಕೆ ಇದೂ ಒಂದು ಕಾರಣ ಸೇರಿಕೊಂಡಿತು. ಅಂತೂ ಒಟ್ಟಿನಲ್ಲಿ ಅವನು ಅಲ್ಲಿ ಆರೇಳು ವರ್ಷಗಳ ಕಾಲ ಇದ್ದರೂ ಗಳಿಸಿದ ಯಶಸ್ಸು ಅಷ್ಟಕ್ಕಷ್ಟೇ.

ಅಮೆರಿಕಾದಲ್ಲಿ ಕವಿತೆ ಬರೆದದ್ದು ಕಡಿಮೆ, ಹೆಚ್ಚಿನವು ಸಾಧಾರಣ. ಗಣನೆಗೆ ತೆಗೆದುಕೊಳ್ಳಬಹುದಾದ ಗುಣವಿದ್ದವು ಅಂದರೆ ಅಲ್ಲಿನ ಆತ್ಮಘಾತಕ ಅತ್ಯಾಧುನಿಕ ನಾಗರಿಕತೆ, ಹಾಲಿವುಡ್‌ನ ಮಿರುಗುಜೀವನದ ದುರಂತಗಳನ್ನು ಕುರಿತು ಬರೆದ ಕೆಲವು ಮಾತ್ರ (ಕ. ೫೩–೫೭).

೧೯೪೫ರಲ್ಲಿ ಯುದ್ಧ ಮುಗಿಯಿತು. ಹಿಟ್ಲರ್ ಹೇಡಿಯಂತೆ ಆತ್ಮಹತ್ಯೆ ಮಾಡಿಕೊಂಡಿದ್ದ. ಜರ್ಮನಿ ಸೋತು ಶರಣಾಗತವಾಯಿತು. ಗೆದ್ದ ಮಿತ್ರರಾಷ್ಟ್ರಗಳು ಅದನ್ನು ಪೂರ್ವ–ಪಶ್ಚಿಮವಾಗಿ ಒಡೆದು ಹಂಚಿಕೊಂಡವು. ದೇಶಾಂತರವಾಸಿಗಳಲ್ಲಿ ಹಿಂದಿರುಗ ಬಯಸಿದವರು ತಮ್ಮ ತಮ್ಮ ಎಡ–ಬಲಗಳ ನಂಬಿಕೆ, ಅವಕಾಶ–ಸಾಧ್ಯತೆಗಳನ್ನು ಅನುಸರಿಸಿ ಸ್ವದೇಶಕ್ಕೆ ಮರಳುತ್ತಿದ್ದರು. ಬ್ರೆಷ್ಟ್‌ನದು ಬೆಕ್ಕಿನ ಜಾಗರೂಕತೆ. ಇನ್ನೂ ಕೆಲಕಾಲ ಅಮೆರಿಕಾದಲ್ಲಿಯೇ ಉಳಿದು ಕಾದುನೋಡಿದ. ಯುದ್ಧಾನಂತರ ಅಲ್ಲಿ ಮೆಕಾರ್ಥಿಯ ಮುಂದಾಳುತನದಲ್ಲಿ ಕಮ್ಯುನಿಸ್ಟರ ಪಶುಬೇಟೆ ಷುರುವಾಯಿತು. ಅಮೆರಿಕಾ–ವಿರೋಧೀ ಚಟುವಟಿಕೆಗಳ ಹೆಸರಿನಲ್ಲಿ ಕಮ್ಯುನಿಸಂನೊಂದಿಗೆ ಸಂಬಂಧವಿಟ್ಟುಕೊಂಡವರೆಲ್ಲರೂ ವಿಚಾರಣೆಗೆ ಗುರಿಯಾದರು. ಅವರಲ್ಲಿ ಬ್ರೆಷ್ಟ್‌ನೂ ಇದ್ದ. ತನ್ನನ್ನು ತಾನು ರಕ್ಷಿಸಿಕೊಳ್ಳಲು ಆ ಸಮಿತಿಯ ಮುಂದೆ ಅದರ ಸದಸ್ಯರನ್ನು ಗೊಂದಲಕ್ಕೀಡುಮಾಡುವಂತೆ ಅವನು ಕೊಟ್ಟ ಚತುರ ಉತ್ತರಗಳು ಈಗ ಇತಿಹಾಸವಾಗಿದೆ. ಅಮೆರಿಕಾದಲ್ಲಿ ಇನ್ನು ತನಗೆ ಉಳಿಗಾಲವಿಲ್ಲವೆಂದು ಗೊತ್ತಾಯಿತು. ವಿಚಾರಣೆ ಮುಗಿಯುವುದಕ್ಕಿಲ್ಲ, ಅಲ್ಲಿಂದ ಹೇಳದೆ ಕೇಳದೆ ಕಂತೆಕಟ್ಟಿ ಹೊರಟ. ಜರ್ಮನಿಗಲ್ಲ, ಸ್ವಿಟ್ಜರ್‌ಲ್ಯಾಂಡಿಗೆ. ವರ್ಷಕಾಲ ಅಲ್ಲಿದ್ದು ಪೂರ್ವ ಜರ್ಮನಿಯಲ್ಲಿ ತನಗೆ ಸ್ವಾಗತವಿದೆ, ಅಲ್ಲಿ ತನ್ನ ಭವಿಷ್ಯ ಹೆಚ್ಚು ಭದ್ರ ಎಂದು ಖಚಿತ ಮಾಡಿಕೊಂಡು ಅಲ್ಲಿಗೆ ಹಿಂತಿರುಗಿದ.

೭

ಪೂರ್ವ ಜರ್ಮನಿಯ ವಾಸ ಬ್ರೆಷ್ಟ್‌ನ ಬದುಕಿನ ಕೊನೆಯ ಪರ್ವ. ಅವನ ಅನೇಕ ಸ್ನೇಹಿತರು, 'ಹೋಗು, ಬಾ' ಅನ್ನುವಷ್ಟು ಸಲಿಗೆಯಿದ್ದವರು, ಸರಕಾರದಲ್ಲಿ ಉಚ್ಚಸ್ಥಾನದಲ್ಲಿದ್ದರು. ಆ ಹೊಸದೇಶದ ದೊಡ್ಡಸ್ತಿಕೆಯನ್ನು ಮೆರೆಯಲು ಅದಕ್ಕೂ ಬ್ರೆಷ್ಟ್‌ನ ದರ್ಜೆಯ ಒಬ್ಬ ಲೇಖಕನ ಅಗತ್ಯವಿತ್ತು. ಅವನ ಎತ್ತರದ ಕವಿ–ನಾಟಕಕಾರರು ಯಾರೂ ಅಲ್ಲಿರಲಿಲ್ಲ. ಅವನು ಕೇಳಿದ್ದನ್ನೆಲ್ಲ ಕೊಡಲು ಸರಕಾರ ಸಿದ್ಧವಿತ್ತು. ಹಾಗೆ ಕೇಳಿದ್ದು ಸಿಗದಾದರೆ ಅವನು ಇರುವವನೂ ಅಲ್ಲ. 'ಬರ್ಲಿನರ್ ಆನ್‌ಸೆಂಬಲ್' ಎಂಬ ಹೊಸ ರಂಗಸಂಸ್ಥೆಯ ಸ್ಥಾಪನೆಯ ಏರ್ಪಾಡನ್ನು ಅವನ ಹಾಗೂ ಹೆಲೆನ್ ವೀಗಲ್‌ರ ಮೇಲ್ವಿಚಾರಣೆಗೆ ಬಿಟ್ಟು

ಕೊಟ್ಟಿತು. ಮೊದಲು ಬರ್ಲಿನ್ ನಗರದಲ್ಲಿ ಒಂದು ಮನೆಯಾಯಿತು. ನಂತರ ಹತ್ತಿರದ ಬುಕೋವ್ ಗ್ರಾಮದಲ್ಲಿ ಒಂದು ಬೇಸಿಗೆಯ ಮನೆಯಾಯಿತು. ಸರಕಾರ ಈ ಎಲ್ಲ ಉಪಕಾರಗಳಿಗೆ ಪ್ರತಿಯಾಗಿ ಬಾಯಿಬಿಟ್ಟು ಹೇಳದೆಯೂ ಬಯಸಿದ್ದು ಒಂದೇ: ಬ್ರೆಷ್ಟ್ ಒಬ್ಬ ಪ್ರಾಮಾಣಿಕ, ಪಕ್ಷನಿಷ್ಠ ಕಮ್ಯುನಿಸ್ಟ್ ಆಗಿದ್ದು ಸರಕಾರದ ರೀತಿ–ನೀತಿಗಳಿಗೆ ಬೆಂಬಲ ಕೊಡುತ್ತಿರಬೇಕು.

ಎಷ್ಟೇ ಆದರೂ ಕ್ರಿಯಾಶೀಲ ಲೇಖಕರು ಸ್ವತಂತ್ರಮನೋಭಾವದವರು. ಅವರ ನಿಷ್ಠೆ ಅವರ ಆಯಾ ಕ್ಷಣದ ಚಿಂತನೆ, ನಂಬಿಕೆಗಳಿಗಷ್ಟೇ. ಅನೇಕ ವೇಳೆ ಅವರ ನಂಬಿಕೆ, ವ್ಯವಹಾರಗಳ ನಡುವೆ ಕಂಡೂ ಕಾಣದ ಅಡ್ಡಗೋಡೆಯಿರುತ್ತದೆ. ಹೆಸರಿಗೆ ಪಕ್ಷ ಅಥವಾ ಸರಕಾರದಲ್ಲಿದ್ದರೂ ಅದರ ಎಲ್ಲ ಸಿದ್ಧಾಂತಸೂತ್ರಗಳನ್ನೂ ನೀತಿನಿಯಮಗಳನ್ನೂ ಅವರಿಂದ ಚಾಚೂತಪ್ಪದೆ ಕಟ್ಟುನಿಟ್ಟಾಗಿ ಪಾಲಿಸಲಾಗುವುದಿಲ್ಲ. ತಮಗೆ ಏನಾದರೂ ಒಪ್ಪಿಗೆಯಾಗದಿದ್ದಾಗ ಅವರಲ್ಲಿನ ವ್ಯಕ್ತಿತತ್ವ ಸಿಡಿದೆದ್ದು ನಿಲ್ಲುತ್ತದೆ. ಬ್ರೆಷ್ಟ್‌ನ ಕಮ್ಯುನಿಸಂ ಸಹ ಇದೇ ಮಾದರಿಯದು. ಅವನು ಯೂರೋಪಿನಲ್ಲಿ ದೇಶಾಂತರವಾಸದಲ್ಲಿದ್ದಾಗ ರಷ್ಯಾದಲ್ಲಿ ಸ್ಟಾಲಿನ್ ನಡೆಸಿದ್ದ 'ಭಾರೀ ಉಚ್ಚಾಟನೆ' ('ದಿ ಗ್ರೇಟ್ ಪರ್ಜ್') ಹಾಗೂ ಬುದ್ಧಿಜೀವಿಗಳ ದಮನದ ವಿಷಯ ಕಿವಿಗೆ ಬಿದ್ದಿತ್ತು. (ಈ ಬಗ್ಗೆ ಹೆಚ್ಚು ವಿವರಗಳಿಗೆ ಇದೇ ಅನುವಾದಕನ 'ಆನಾ ಆಹ್ಮತೋವಾ : ರಿಕ್ವಿಯಂ ಮತ್ತಿತರ ನೂರು ಕವಿತೆಗಳು' ಗ್ರಂಥದ ಪ್ರಸ್ತಾವನೆ ನೋಡಿ.) ಆ ದಮನದಲ್ಲಿ ಅವನ ಗುಂಪಿನ ಮೆಚ್ಚಿನ ನಟಿ ಕರೋಲಾ ನೆಹೆರ್, ಅವಳ ಗಂಡ ಬೆಕೆರ್, ನೆಚ್ಚಿನ ರಷ್ಯದ ಮಿತ್ರರಾದ ತ್ರೆತಿಯಕೋವ್, ಕೋಲ್‌ಜ್ತೋವ್‌ರು ಬಲಿಯಾಗಿದ್ದರು. ಅದರ ಬಗ್ಗೆ ಬಹಿರಂಗವಾಗಿ ಮಾತಾಡದಿದ್ದರೂ ಕಮ್ಯುನಿಸಂನ ಹೊರ ಚರ್ಮದಡಿ ಫಾಸಿಸಂನ ರೋಗಾಣು ಅವಿತು ಬಲಿಯುತ್ತಿದ್ದುದನ್ನು ಅವನು ಬಲ್ಲ. ಈ ಕಾರಣಕ್ಕಾಗಿಯೇ ಹಿಂದೆ ಯೂರೋಪ್ ಬಿಟ್ಟು ಅಮೆರಿಕಾಕ್ಕೆ ಹೋಗುವ ಮುನ್ನ ರಷ್ಯ ದಿಂದ ಅಲ್ಲಿ ನೆಲಸಿ ಮಾಸ್ಕೊ ರಂಗಮಂದಿರದಲ್ಲಿ ಕೆಲಸ ಮಾಡಲು ಆಹ್ವಾನ ಬಂದಾಗ ಜಾಣ್ಮೆಯಿಂದ ನುಣುಚಿಕೊಂಡಿದ್ದ. ಈಗ ಸಹ ಪೂರ್ವ ಜರ್ಮನಿಯಲ್ಲಿದ್ದುಕೊಂಡು ತನ್ನ ಕೃತಿಗಳ ಪ್ರಕಟಣೆಯ ಹಕ್ಕನ್ನು ಪಶ್ಚಿಮ ಜರ್ಮನಿಯ ಪ್ರಕಾಶಕರಿಗೆ ಕೊಟ್ಟಿದ್ದ. ಅವನೇ ಜಂಬದಿಂದ ಹೇಳಿಕೊಳ್ಳುತ್ತಿದ್ದಂತೆ ಅವನ ಪಾಸ್‌ಪೋರ್ಟ್ ಪೂರ್ವ ಜರ್ಮನ್ ಸರಕಾರದ್ದಲ್ಲ, ಆಸ್ಟ್ರಿಯಾದ್ದು. ಅಂದರೆ ಬೇಕಾದಾಗ ದೇಶಬಿಟ್ಟು ಹೋದರೆ ಯಾರೂ ತಡೆಯುವಂತಿರ ಲಿಲ್ಲ. ಅವನ ಬ್ಯಾಂಕ್ ಖಾತೆಯಿದ್ದುದು ಸ್ವಿಟ್ಜರ್‌ಲ್ಯಾಂಡಿನಲ್ಲಿ.

ಬ್ರೆಷ್ಟ್ ಮತ್ತು ಪೂರ್ವ ಜರ್ಮನ್ ಸರಕಾರ ಒಬ್ಬರಿಗೊಬ್ಬರಿಗೆ ನುಂಗಲಾರದ ತುತ್ತಾದರು. ಪೂರ್ವ ಜರ್ಮನಿಯ ಕಮ್ಯುನಿಸ್ಟ್ ವ್ಯವಸ್ಥೆಯಲ್ಲಿ ಎಲ್ಲವೂ ನೇರವಾಗಿರುತ್ತದೆ, ಜನ ಸುಖಸಂತೃಪ್ತಿ ಸ್ವಾತಂತ್ರ್ಯಗಳಿಂದ ಬದುಕುತ್ತಾರೆ ಎಂದು ಅವನು ಉದ್ದಕ್ಕೂ ಕಟ್ಟಿಕೊಂಡಿದ್ದ ಕನಸು ಒಡೆದು ಚೂರಾಗಿ ಭ್ರಮನಿರಸನವಾಯಿತು. ಸರಕಾರದ ಪ್ರಕಾರ ಬ್ರೆಷ್ಟ್ ಮಾರ್ಕ್ಸ್‌ವಾದವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ, ಅವನ ತಿಳಿವಳಿಕೆಯಲ್ಲಿ ವಿರೋಧಾಭಾಸಗಳಿವೆ. ಅವನು ಅಂತರ್–ವಿರೋಧಗಳನ್ನು ತೊರೆದು ಸರಿಯಾದ ಮಾರ್ಕ್ಸ್‌ವಾದೀ ನಾಟಕಗಳನ್ನು ಬರೆಯಬೇಕೆಂದು ಸರಕಾರದ ಸೂಕ್ಷ್ಮ ಸಲಹೆಗಳು. ಅವನ ಆಡಳಿತಕ್ಕೆ ಕೊಟ್ಟಿದ್ದ 'ಬರ್ಲಿನರ್ ಆನ್‌ಸೆಂಬಲ್' ರಂಗಮಂದಿರದಲ್ಲಿಯೇ ಅವನ

ನಾಟಕಗಳನ್ನು ಆಡಗೊಡುತ್ತಿರಲಿಲ್ಲ. ೧೯೫೩ರ ಜೂನ್ ೧೭ರಂದು ಪೂರ್ವ ಜರ್ಮನಿಯ ಜನತೆ ಸರಕಾರದ ರೀತಿನೀತಿಗಳ ವಿರುದ್ಧ ದಂಗೆಯೆದ್ದಾಗ ರಷ್ಯದ ಸೇನೆಯ ಸಹಾಯ ಪಡೆದು ಆ ದಂಗೆಯನ್ನು ಅಡಗಿಸಲಾಯಿತು. ಈ ದಮನ ಬ್ರೆಷ್ಟ್‌ನನ್ನು ಅತಿಯಾಗಿ ಕಲಕಿತು. ಅವನು ಜನರ ಪರವಾಗಿದ್ದ. ಸರಕಾರದ ಬಾಲಬಡಕರನ್ನು ಹಾಸ್ಯಮಾಡಿ ಒಂದು ದಿಟ್ಟ ಕವಿತೆಯನ್ನು ಬರೆದ (ಕ. ೭೫). ಮತ್ತೆ ತನ್ನ ಆಶ್ರಯದಾತ ಸರಕಾರವನ್ನು ಎದುರು ಹಾಕಿಕೊಳ್ಳಲು ಇಚ್ಛಿಸದೆ ತನ್ನ ನಿಲುವನ್ನು ವಿವರಿಸಿ ಒಂದು ಪತ್ರ ಬರೆದ. ಸರಕಾರ ಅದರಿಂದ ತನಗೆ ಅನುಕೂಲವಾದ ಒಂದು ಸಾಲನ್ನೆತ್ತಿ ಅದು ಬ್ರೆಷ್ಟ್ ತನ್ನ ದಮನನೀತಿಗೆ ಕೊಟ್ಟ ಬೆಂಬಲವೆಂಬಂತೆ ಪ್ರಕಟಿಸಿತು. ಬ್ರೆಷ್ಟ್‌ನಿಗೆ ಇಡೀ ಜೀವಮಾನದಲ್ಲಿ ಆಗದಿದ್ದಷ್ಟು ಕಸಿವಿಸಿಯಾಯಿತು.

ಬ್ರೆಷ್ಟ್ ಪೂರ್ವ ಜರ್ಮನಿಯಲ್ಲಿದ್ದ ಬದುಕಿನ ಕೊನೆಯ ಏಳು ವರ್ಷಗಳಲ್ಲಿ ಬರೆದ ಕವಿತೆಗಳ ಸಂಖ್ಯೆ ತೀರಾ ಕಡಿಮೆ. ಅವುಗಳ ತರಹವೇ ಬೇರೆ. ದೀರ್ಘವಾದವು ಇಲ್ಲವೇ ಇಲ್ಲ, ಅವುಗಳಲ್ಲಿ ಯಾವ ಗೊತ್ತಾದ ಬದ್ಧತೆಗಳೂ ಕಾಣುವುದಿಲ್ಲ. ಒಂದು ಮುಖ್ಯವಾದ ಕಟ್ಟು ಬುಕೋವ್ ಹಳ್ಳಿಯಲ್ಲಿ ಬರೆದ 'ಬುಕೋವ್ ಶೋಕಗೀತೆಗಳು' (ಕ. ೭೬–೭೭). ಆ ಕಾಲದ ಅವನ ಮನಃಸ್ಥಿತಿಯನ್ನು ವರ್ಣಿಸಲು 'ಶೋಕಗೀತೆಗಳು' ಎಂಬ ಶಬ್ದದ ಪ್ರಯೋಗವೇ ಸಾಕು. ಬುಕೋವ್ ಹಳ್ಳಿಯಲ್ಲಿ ಅವನಿಗೆ ಹಿಂದಿನ ಔಗ್ಸ್‌ಬರ್ಗ್‌ನ ನೆನಪು ಮರುಕಳಿಸಿ, ಕವಿತೆಗಳಲ್ಲಿ ಪ್ರಕೃತಿ ಮತ್ತೆ ಹರಡಿಕೊಳ್ಳುತ್ತದೆ. ಕ್ಷಣದ ಒಂದು ದೃಶ್ಯವೊ, ಮನಃಸ್ಥಿತಿಯೊ ಪುಟ್ಟಪುಟ್ಟ ಸುಂದರ ಶಬ್ದಚಿತ್ರಗಳಾಗಿ ಮೂಡಿಬರುತ್ತದೆ. ಒಂದೊಂದೂ ಎಷ್ಟು ಸ್ಪಷ್ಟವೊ ಅಷ್ಟೇ ಗೂಢ. ಅವನಿಗೂ ಸರಕಾರಕ್ಕೂ ನಡೆಯುತ್ತಿದ್ದ ತಿಕ್ಕಾಟದ ಹಿನ್ನೆಲೆಯಲ್ಲಿ ಓದಿದಾಗ ಒಂದೊಂದರಿಂದ ಹೊರಡುವ ಅರ್ಥವೇ ಬೇರೆ. ಅವುಗಳಲ್ಲಿ ಅವನ ಮನಸ್ಸಿನ ಅಶಾಂತಿ, ಅತೃಪ್ತಿ, ಅಂದಿನ ಸರಕಾರದ ಅಧಿಕಾರೀ ಮನೋಭಾವ, ಯುದ್ಧದಲ್ಲಿ ಸೋತೂ ಅದರಿಂದ ಪಾಠ ಕಲಿಯದ ಜನ ಫಾಸಿಸ್ಟ್ ವರ್ತನೆಯನ್ನೇ ಮುಂದುವರಿಸಿರುವುದು ಇಣಿಕಿಹಾಕುತ್ತವೆ. ಬ್ರೆಷ್ಟ್ ಹೇಳುತ್ತಾನೆ: "ನಾನೆಲ್ಲಿಂದ ಬಂದೆನೋ ಆ ಸ್ಥಳ ನನಗಿಷ್ಟವಿಲ್ಲ. ನಾನೆಲ್ಲಿಗೆ ಹೋಗುತ್ತೇನೋ ಆ ಸ್ಥಳವೂ ನನಗಿಷ್ಟವಿಲ್ಲ." (ಕ. ೭೩); "ಬಾಲ್ಯದಲ್ಲಿ ವ್ಯಥೆ ತುಂಬಿತ್ತು, ಮುಂದೆಯೂ ವ್ಯಥೆ ತುಂಬಿತ್ತು. ನಾನು ಸುಖಿಯಾಗಿರುವುದು ಯಾವಾಗ?" ಇನ್ನೊಂದು ಕವಿತೆಯಲ್ಲಿ ಯುದ್ಧದಲ್ಲಿ ಒಂದು ಕೈ ಕಳೆದುಕೊಂಡ ಒಬ್ಬ ಯೋಧ ಈಗ ಉಳಿದೊಂದು ಕೈಯಲ್ಲಿ ಉರುವಲಿಗಾಗಿ ಪುಳ್ಳೆ ಆರಿಸುತ್ತಿದ್ದಾನೆ. ನಡುನಡುವೆ ತಲೆ ಕೊಡವುತ್ತ ಮುತ್ತುವ ಸೊಳ್ಳೆಗಳನ್ನು ಅಟ್ಟುತ್ತಾನೆ. ಮಳೆ ಹನಿಯುತ್ತಿದೆಯೋ ಎಂದು ನೋಡಲು ಅವನು ಕೈ ಮೇಲೆತ್ತಿದಾಗ ಕವಿಗೆ ಆ ಎತ್ತಿದ ಕೈ ಹಿಂದೆ 'ಕಗ್ಗತ್ತಲಕಾಲ'ದಲ್ಲಿ ಭಯೋತ್ಪಾದಕ ನಾಜ್ಹೀ ಸೈನಿಕ 'ಹೇಲ್ ಹಿಟ್ಲರ್' ಎಂದು ಕೂಗಿದಾಗ ಕೈ ಎತ್ತಿದಂತೆ ಭಾಸವಾಗುತ್ತದೆ. ಏಳು ಸಾಲಿನ ಈ ಕವಿತೆಯಲ್ಲಿ ಆ 'ಸುಖೀ ರಾಜ್ಯ'ದ ದುಸ್ಥಿತಿ ಹಾಗೂ ಜನರ ಫಾಸಿಸ್ಟ್ ಮನೋಭಾವ ಪ್ರಭಾವಕಾರಿಯಾಗಿ ಚಿತ್ರಿತ ವಾಗಿದೆ. ಈಗ ಬ್ರೆಷ್ಟ್ "ತನಗಾದ ಆಶಾಭಂಗಗಳನ್ನು ನೆನೆಯುವ ಮಗು, ತನ್ನ ಹೆಸರನ್ನೇ ಮರೆಯುವ ಮುದುಕ". 'ಬುಕೋವ್ ಶೋಕಗೀತೆ'ಗಳಲ್ಲದೆ ಬ್ರೆಷ್ಟ್ ಹಿಂದೆ ಜರ್ಮನಿ ಬಿಟ್ಟುಹೋಗುವ ಮೊದಲು ಪ್ರಕಟಿಸುತ್ತಿದ್ದ 'ವೇಸ್ರೂಶೆ' ಹೊತ್ತಿಗೆಗಳನ್ನು ಮುಂದುವರಿಸಿ,

ಮತ್ತೆ ಏಳು ಸಂಚಿಕೆಗಳನ್ನು ಹೊರತಂದ. ಯುದ್ಧದ ಬಗ್ಗೆ ಬರೆದಿದ್ದ ಸಣ್ಣ ಸಣ್ಣ ಕವಿತೆಗಳ ಸಂಗ್ರಹವೊಂದು ನಿಜವಾದ ಘಟನಾಚಿತ್ರಗಳ ಸಮೇತ 'ಜರ್ಮನ್ ಯುದ್ಧದ ಬಾಲಬೋಧೆ' ('ಡ್ವಾಯ್‌ಷ್ ಕ್ರೀಗ್ಸ್‌ಫೀಬೆಲ್') ಎಂದು ಹೊರಬಂತು. ಆ ಏಳು ವರ್ಷಗಳಲ್ಲಿ ಇವುಗಳ ಹೊರತು ಮತ್ತೆ ಯಾವ ಹೇಳಿಕೊಳ್ಳಬಹುದಾದ ವಿಶೇಷಗಳೂ ಜರುಗಲಿಲ್ಲ. ದಾಖಲೆಗಾಗಿ ಹೇಳಬಹುದಾದದ್ದೊಂದು ೧೯೫೫ರಲ್ಲಿ ಸಿಕ್ಕಿದ ಸ್ಟಾಲಿನ್ ಪುರಸ್ಕಾರ. ಇದು ಬೇರೆ ಒಂದು ಕಾರಣಕ್ಕಾಗಿ ಉಲ್ಲೇಖನಾರ್ಹ. ಪುರಸ್ಕಾರ ಸ್ವೀಕಾರದ ಬ್ರೆಷ್ಟ್‌ನ ಭಾಷಣವನ್ನು ರಷ್ಯ ಭಾಷೆಗೆ ಅನುವಾದಿಸಿದವನು ಕವಿ ಬೋರಿಸ್ ಪಾಸ್ತರ್‌ನಾಕ್. ಅದು ಅವನ ಪಾಲಿಗೆ ಬಲವಂತ ಮಾಘಸ್ನಾನ. ಆಗ ಅವನು ಬ್ರೆಷ್ಟ್‌ನ ಕವಿತೆಗಳನ್ನು ಓದಿದ್ದುದು ಪೂರ್ವ ಜರ್ಮನಿಯ ವಾಮಪಂಥೀ ಸಂಸ್ಕರಣದಲ್ಲಿ. ಅದು ಅವನಿಗೆ ಹಿಡಿಸದೇ ಇದ್ದದ್ದು ಆಶ್ಚರ್ಯ ವಲ್ಲ. ಮುಂದೆ ಬ್ರೆಷ್ಟ್‌ನ ನಿಧನಾನಂತರ ಹೆಲೆನ್ ವೀಗಲ್ ಮಾಸ್ಕೋದಲ್ಲಿ ಆಡಿಸಿದ ಅವನ ನಾಟಕಗಳನ್ನು ನೋಡಿ ಪ್ರಭಾವಿತಗೊಂಡು, ಪಶ್ಚಿಮ ಜರ್ಮನಿಯ ಮುಕ್ತ ಸಂಸ್ಕರಣ ದಲ್ಲಿ ಅವನೆಲ್ಲ ಕವಿತೆಗಳನ್ನೂ ಓದಿದಾಗ ತನಗೆ ಇಷ್ಟವಿಲ್ಲದೆಯೇ ತಾನೊಬ್ಬ ಮಹಾಕವಿಯ ಭಾಷಣವನ್ನು ಅನುವಾದಿಸಿದ್ದನೆಂಬುದು ಪಾಸ್ತರ್‌ನಾಕ್‌ಗೆ ಮನವರಿಕೆಯಾಯಿತು.

ಶ್ವಾಸಕೋಶದ ರೋಗದಿಂದ ನರಳುತ್ತಿದ್ದ ಬ್ರೆಷ್ಟ್ ಅದು ಉಲ್ಬಣವಾದಾಗ ಆಸ್ಪತ್ರೆ ಸೇರಿ ೧೯೫೬ರ ಆಗಸ್ಟ್ ೧೪ರಂದು ಹೃದಯಸ್ತಂಭನದಿಂದ ತೀರಿಕೊಂಡ. ಐವತ್ತೆಂಟರ ವಯಸ್ಸಿಗೆಲ್ಲ ಎರಗಿ ಬಂದ ಅಕಾಲಮರಣ ಅದು. ಬರ್ಲಿನ್ ಮನೆಯ ಹಿಂಬದಿಗಿದ್ದ ಸ್ಮಶಾನಭೂಮಿಯಲ್ಲಿಯೇ ಶವಸಂಸ್ಕಾರವಾಯಿತು. ಅವನ ಸಾವು-ಶವಸಂಸ್ಕಾರಗಳು ಘಟನೆಗಳೇ ಅಲ್ಲವೇನೋ ಎಂಬಂತೆ ನಡೆದುಹೋದವು. ಬ್ರೆಷ್ಟ್ ಇಚ್ಛಿಸಿದ್ದುದೂ ಅದನ್ನೆ. ಅವನ ಜೀವನಚರಿತ್ರೆಗಳಲ್ಲಿ ಆ ಕುರಿತು ಓದಸಿಗುವುದು ಒಂದು ಪ್ಯಾರಾ ಮಾತ್ರ. ಸ್ವಾರಸ್ಯದ ಒಂದು ಸಂಗತಿಯೆಂದರೆ ಶವಸಂಸ್ಕಾರದ ವೇಳೆ ಅವನು ಬದುಕಿನಲ್ಲಿ ಕಟ್ಟಿಕೊಂಡಿದ್ದ ಐವರು ಹೆಂಡಂದಿರೂ ಅಲ್ಲಿ ಸೇರಿದ್ದರು. ಅವರಲ್ಲಿ ಕೆಲವರನ್ನು ವಿಧ್ಯುಕ್ತವಾಗಿ ಮದುವೆಯಾಗಿದ್ದ, ಕೆಲವರಿಂದ ಮಕ್ಕಳಾಗಿದ್ದವು. ಅವರನ್ನೆಲ್ಲ ಒಟ್ಟು ತಂದಿದ್ದುದು ಪತಿವಿಯೋಗದ ದುಃಖವೊ, ಬ್ರೆಷ್ಟ್‌ನ ಆಸ್ತಿಯಲ್ಲಿನ ಅವರವರ ಪಾಲಿನ ಆಸೆಯೊ ಯಾರು ಬಲ್ಲರು?

೮

ಜಗತ್ತಿನ ಹೆಚ್ಚು ಮಂದಿ ಕವಿಗಳು ಭಾವನಾಪರರು. ಅವರಿಗೆ ಕಾವ್ಯರಚನೆ ಒಳಮನಸ್ಸಿನ ಕ್ರಿಯೆ, ಕವಿತೆ ಸ್ಫೂರ್ತಿಫಲ. ಆದರೆ ಬ್ರೆಷ್ಟ್‌ನಿಗೆ ಹಾಗಲ್ಲ. ಅವನೊಬ್ಬ ಪ್ರಜ್ಞಾಪೂರ್ವಕ ವ್ಯಕ್ತಿ. ಕಾವ್ಯ ಅವನಿಗೆ ಬೌದ್ಧಿಕ, ತಾರ್ಕಿಕ. ಅವನ ಕವಿತೆಗಳಲ್ಲಿ ವಸ್ತುಧ್ವನಿ ಪ್ರಧಾನ. ರಸಧ್ವನಿ, ಅಲಂಕಾರ ಧ್ವನಿಗಳು ಅನಿಶ್ಚಿತ. ಅವನ ಪ್ರಕಾರ ಕವಿಗಳು ಕನಸಿಗರಾಗಬಾರದು. ಸಾಮಾಜಿಕ ವಿಷಯಗಳನ್ನು ಮುಟ್ಟಿದರೆ ಮನಸ್ಸು ಕೊಳಕಾಗುವುದೆಂಬ ಬೂರ್ಜ್ವಾ ಮನೋಭಾವ ಸಲ್ಲದು. ಎಂತಲೇ ತನ್ನ ಸಮಕಾಲೀನರಾದ ರಿಲ್ಕೆ, ಸ್ಟೆಫನ್ ಜಾರ್ಜ್‌ರಂತಹ ಕವಿಗಳ ಋಷಿತನ ಅವನಿಗೆ ಅಸಹ್ಯ ತರುತ್ತಿತ್ತು. ೧೯೨೭ರಷ್ಟು ಹಿಂದೆಯೇ ಬರ್ಲಿನ್‌ನ ಒಂದು ಪತ್ರಿಕೆ ಕವಿತೆಯ ಸ್ಪರ್ಧೆ ಏರ್ಪಡಿಸಿ, ಬ್ರೆಷ್ಟ್‌ನನ್ನು ತೀರ್ಪುಗಾರನನ್ನಾಗಿ ಮಾಡಿದಾಗ

ಅವನು ಕವಿತೆಯ ಬಗ್ಗೆ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದ. ಸ್ಪರ್ಧೆಗೆ ಸುಮಾರು ನಾನೂರು ಕವಿತೆಗಳು ಬಂದಿದ್ದವು. ಬ್ರೆಷ್ಟ್ ಅವುಗಳಲ್ಲಿ ಒಂದನ್ನೂ ಆರಿಸದೆ ಎಲ್ಲವನ್ನೂ ತಳ್ಳಿಹಾಕಿ ಗುಲ್ಲೆಬ್ಬಿಸಿದ. ಅವನು ಕೊಟ್ಟ ಕಾರಣ: "ಕವಿತೆ ವ್ಯಾವಹಾರಿಕವಾಗಿರಬೇಕು, ಪ್ರಯೋಜನಕಾರಿಯಾಗಿರಬೇಕು. ಮಹತ್ವದ ಕವಿತೆಗಳಿಗೆಲ್ಲ ದಾಖಲೆಯಾಗಿ ಬೆಲೆಯಿರುತ್ತದೆ. ಕವಿ ಒಬ್ಬ ಮನುಷ್ಯವಿಶೇಷ. ಅವನು ತನಗೆ ತಾನು ಹೇಗೆ ಅಭಿವ್ಯಕ್ತಿ ಕೊಟ್ಟನೆಂಬುದನ್ನು ಅವನ ಕೃತಿ ತೋರಿಸಬೇಕು."

ಬ್ರೆಷ್ಟ್ ವಸ್ತು, ಅಭಿವ್ಯಕ್ತಿ, ಭಾಷೆ, ಲಯ ಮುಂತಾಗಿ ಕಾವ್ಯದ ಒಂದೊಂದು ಅಂಗದ ಬಗ್ಗೆಯೂ ಆಳವಾಗಿ ಯೋಚಿಸಿ ತನ್ನದೇ ತೀರ್ಮಾನಗಳಿಗೆ ಬಂದು ಅವುಗಳ ಆಧಾರದ ಮೇಲೆ ಸ್ವಂತದ ಕಾವ್ಯಮೀಮಾಂಸೆಯನ್ನು ರೂಪಿಸಿಕೊಂಡಿದ್ದ. ಅವನು ಕವಿತೆಯ ಬಗ್ಗೆ ಬರೆದಿರುವುದೆಲ್ಲವೂ ಒಂದು ಇಡೀ ಸಂಪುಟವಾಗಿ ಬಂದಿದೆ. 'ಸಂದೇಹಗ್ರಸ್ತ' (ಡೆರ್ ಸ್ವಾಯ್‌ಫ್ಲರ್) ಎಂಬೊಂದು ಕವಿತೆ (ಕ. ೨೮) ಅವನ ಚಿಂತನ ವಿಧಾನ ಏನಿತ್ತೆಂಬುದನ್ನು ಅಡಕವಾಗಿ ಸೂತ್ರರೂಪದಲ್ಲಿ ತಿಳಿಸುತ್ತದೆ. ಕವಿತೆಯ ಬಗ್ಗೆ ಅವನ ವಿಚಾರಗಳನ್ನು ಹೀಗೆ ಸಂಕ್ಷೇಪಿಸಬಹುದು :

ಕವಿತೆ, ಅರ್ಥಾತ್ ಕಲೆ, ಬದುಕಿನ ಒಂದು ಅಂಗ. ನಮ್ಮ ಇತಿಹಾಸಪೀಡಿತ ಜಗತ್ತು ಅದರ ಅಂದಂದಿನ ಅನುಭವವನ್ನು ಅರ್ಥಮಾಡಿಕೊಳ್ಳಲು ಅದು ಒಂದು ಸಾಧನ. ಕವಿತೆ ಬರೆಯುವವರು ಒಂದೊಂದು ಸಂಗತಿಯನ್ನೂ ಅದರ ರಾಜಕೀಯ–ಸಾಮಾಜಿಕ ಸಂದರ್ಭದಲ್ಲಿ ನೋಡಿ, ಕಾರ್ಯ ಕಾರಣಗಳನ್ನು ಹೊಂದಿಸಿ, ದ್ವಂದ್ವಾತ್ಮಕವಾಗಿ ಯೋಚಿಸುವುದನ್ನು ಕಲಿಯಬೇಕು. ಕವಿತೆ ಬರಿಯ ಅಭಿವ್ಯಕ್ತಿಯಾದರೆ ಸಾಲದು, ಅನುಭವವಾಗಬೇಕು. ನೋಡುವುದು, ಕೇಳುವುದು ಇದ್ದ ಹಾಗೆ ಅದೊಂದು ಮಾನವೀಯ ಚಟುವಟಿಕೆ (ಬ್ರೆಷ್ಟ್‌ನ ಅನೇಕ ಕವಿತೆಗಳು 'ನಾನು ನೋಡುತ್ತಿದ್ದೇನೆ', 'ನನಗೆ ಕೇಳಿಸುತ್ತಿದೆ' ಎಂಬ ಕ್ರಿಯಾಸಂಕೇತಗಳಿಂದ ಶುರುವಾಗುತ್ತವೆ). ಅದೊಂದು ಸಾಮಾಜಿಕ ಕ್ರಿಯೆ ಕೂಡ. ಅದು ಇತಿಹಾಸನಿಯಂತ್ರಿತವಷ್ಟೇ ಅಲ್ಲ, ಇತಿಹಾಸನಿಯಂತ್ರಕವೂ ಹೌದು. ಅದು ಓದುಗರ ಸಾಮಾಜಿಕ ದೃಷ್ಟಿಕೋನ ನೇರಗೊಳ್ಳುವಂತೆ ಹುರಿದುಂಬಿಸಬೇಕು. ಕವಿಗಳು ಕವಿತೆಗೂ ಸಮಾಜಕ್ಕೂ ಇರುವ ಸಂಬಂಧವನ್ನು ತೋರಿಸಿಕೊಡುವುದರ ಜತೆಗೆ ಅವರಲ್ಲಿ ಸರಿಯಾದ ಸಮಾಜದ ಕಲ್ಪನೆಯನ್ನು ಮೂಡಿಸಬೇಕು. ಓದುಗರು ಒಂದು ಉತ್ತಮ ಉಪಮೆ, ಪ್ರತಿಮೆ, ಮೋಡಿಯ ಮಾತುಗಳಿಗೆ ತಲೆದೂಗಿದರಷ್ಟೇ ಸಾಲದು, ಕವಿತೆಯ ಆಳದಲ್ಲಿನ ಅನುಭವವನ್ನು ಗ್ರಹಿಸಲು ಕಲಿಯಬೇಕು.

ಸಾಮಾಜಿಕ ಪರಿವರ್ತನೆ ಬ್ರೆಷ್ಟ್‌ನ ಕಾವ್ಯದ ಮಹೋದ್ದೇಶವಾದ್ದರಿಂದಲೇ ಅವನು ತನ್ನ ಕವಿತಾಗುಚ್ಛಗಳಿಗೆ 'ಭಕ್ತಿಪಾಠಗಳು', (ಹೌಸ್‌ಪೋಸ್ಟಿಲ್), 'ಪಾಠರೂಪೀ ಕವಿತೆಗಳು' (ಲೇರ್ ಗೆಡಿಶ್ಟೆ), 'ಬಾಲಬೋಧೆ' (ಲೇಸ್‌ಬುಕ್) ಎಂದೆಲ್ಲ ತಮಾಷೆಯೆನಿಸುವ ಹೆಸರು ಕೊಟ್ಟು, ತನ್ನ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ.

ಕವಿತೆಗಳ ಇನ್ನೊಂದು ಗುಣ : ಸಾಧಾರಣವಾಗಿ ಅವನು ತನ್ನ ನಿರ್ಧಾರಗಳನ್ನು ಓದುಗರ ಮೇಲೆ ಹೊರಿಸುವುದಿಲ್ಲ. ತಾನು ಕಂಡದ್ದು, ಕೇಳಿದ್ದನ್ನು ಮನಮುಟ್ಟುವಂತೆ

ತಿಳಿಸಿ ತೀರ್ಪನ್ನು ಅವರಿಗೆ ಬಿಡುತ್ತಾನೆ (ಕ. ೨೧ ಈ ಮಾತಿಗೊಂದು ಉತ್ತಮ ಉದಾಹರಣೆ).

ಆ ಕಾಲದಲ್ಲಿ ಇಂಗ್ಲಂಡ್, ಅಮೆರಿಕಾಗಳಲ್ಲಿ ಪ್ರಚಾರಕ್ಕೆ ಬಂದಿದ್ದ ಪ್ರತಿಮಾ ವಿಧಾನ ಅವನ ಮಾರ್ಗವಲ್ಲ. ಹಾಗೆಂದು ಅವನ ಕವಿತೆಗಳಲ್ಲಿ ಪ್ರತಿಮೆ ಪ್ರತೀಕಗಳಿಲ್ಲದೇ ಇಲ್ಲ. ಪ್ರತಿಮೆಪ್ರತೀಕಗಳೇನೋ ಸುಂದರ. ಆದರೂ ಅವು ಸ್ವಯಂಸ್ಪಷ್ಟವಲ್ಲ, ಖಚಿತವಲ್ಲ. ಒಂದೇ ಪ್ರತಿಮೆಯನ್ನು ಒಬ್ಬೊಬ್ಬರು ಒಂದೊಂದು ಬಗೆಯಾಗಿ ವ್ಯಾಖ್ಯೆ ಮಾಡುವುದು ಸಹಜ. ಆಗ ಕವಿಯ ಉದ್ದೇಶಿತ ಸೂಚಿತಾರ್ಥದ ಗತಿಯೇನು! (ನನ್ನ ಕಲಾವಿದ ಮಿತ್ರ ದಿವಂಗತ ಆರ್. ಎಸ್. ನಾಯ್ಡು ಹೇಳುತ್ತಿದ್ದರು. ಕೆಂಗುಲಾಬಿ ಇತರರಿಗೆ ಸೌಂದರ್ಯ, ಪ್ರೇಮಗಳ ಸಂಕೇತವಾದರೆ ಅವರಿಗೆ ಮಗುವಾಗಿದ್ದಾಗ ತಾಯಿಯ ಶವದ ಮೇಲೆ ರಾಶಿ ರಾಶಿ ನೋಡಿದ್ದುದರ ಪರಿಣಾಮವಾಗಿ ಸಾವಿನ ದುಃಖವನ್ನು ತರುತ್ತಿತ್ತಂತೆ. ಹಾಗೆಯೇ ನಮ್ಮ ಕಡೆ ಮಾರಿಯ ಪೂಜೆಗೂ ಹೆಣದ ಅಲಂಕಾರಕ್ಕೂ ಒದಗುವ ಚೆಂಡೆ ಹೂವು ಉತ್ತರಭಾರತದಲ್ಲಿ ದೇವರಪೂಜೆ, ಮದುವೆಗಳಲ್ಲಿ ಸಲ್ಲುವ ಪವಿತ್ರ ಪುಷ್ಪ!)

ರಚನಾತಂತ್ರಗಳ ವಿಪುಲತೆ, ವೈವಿಧ್ಯ ಬ್ರೆಷ್ಟ್‌ನ ಶ್ರೀಮಂತಿಕೆ. ಹೆಚ್ಚಿನ ಕವಿಗಳಲ್ಲಿ ಅವರೆಷ್ಟೇ 'ಮಹಾನ್' ಎನಿಸಿಕೊಂಡಿದ್ದರೂ ಅವರ ಅನುಭವ ಸೀಮಿತವಾದಂತೆಯೇ ರಚನಾತಂತ್ರಗಳೂ ಸೀಮಿತ. ಅವು ಹೆಚ್ಚಾಗಿ ಸುತ್ತಾಡುವುದು ಸಾನೆಟ್, ಭಾವಗೀತೆ, ರಗಳೆ, ಚತುಷ್ಪದಿ ಇಲ್ಲವೇ ಮುಕ್ತಛಂದದ ಅನಾಮಧೇಯ ಬಂಧಗಳ ನಡುವೆ. ಆದರೆ ಬ್ರೆಷ್ಟ್ ಈ ವಿಷಯದಲ್ಲಿಯೂ ನಮ್ಮನ್ನು ಬೆರಗುಗೊಳಿಸುತ್ತಾನೆ. ಆ ಎಲ್ಲ ಪಾರಂಪರಿಕ ಬಂಧಗಳಲ್ಲಲ್ಲದೆ ಅವನ ಅನುಭವ ತನ್ನ ಉದ್ದೇಶಕ್ಕೆ ತಕ್ಕಂತೆ ಅನೇಕ ಹೊಸ ರೂಪಗಳಲ್ಲಿ ಹೊರಬರುತ್ತದೆ. ಉದಾಹರಣೆಗೆ, ಚಾರಿತ್ರಿಕ ಕಥನಗಳು, ಶೋಕಗೀತೆ, ಹುರುಳುನುಡಿ, ಚಾಟುಪದಗಳಂತೂ ಸರಿಯೇ ಸರಿ, ಜತೆಗೆ ಪತ್ರರೂಪೀ ಕವಿತೆಗಳು, ವರದಿಗಳು, ಕರಪತ್ರಗಳು, ಗೋಡೆಬರಹಗಳು, ಬೀದಿಕೂಗುಗಳು, ಸಾಲ್ನಡೆಯ ಹಾಡುಗಳು (ಮಾರ್ಚಿಂಗ್ ಸಾಂಗ್ಸ್) ಹಾಗೂ ಸುಲಭವಾಗಿ ವರ್ಗೀಕರಿಸಲಾಗದ ಅವೆಷ್ಟೊ – ಒಂದೊಂದಕ್ಕೂ ಅದರದೇ ಶಿಲ್ಪ, ನಡೆ, ಲಯ; ಬಳಸಿದ ಭಾಷೆ ಸಹ ಸಂದರ್ಭ, ಉದ್ದೇಶಗಳಿಗೆ ತಕ್ಕಂತೆ ಬೇರೆ ಬೇರೆ. [ಉದಾಹರಣೆಗೆ, ಈ ಸಂಪುಟದ 'ಮಹಾವಂದನಾಸ್ತೋತ್ರ' (ಕ. ೬), 'ಹೆಜ್ಜೆ–ಗುರುತನ್ನು ಅಳಿಸಿಹಾಕು' (ಕ. ೧೪), 'ಕಗ್ಗತ್ತಲಕಾಲದಲ್ಲಿ' (ಕ. ೨೫), 'ಒಳಗಾಣ್ಕೆಗಳು' (ಕ. ೪೩–೪೫) ಹಾಗೂ 'ಅಂತಿಗೊನೆ' (ಕ. ೬೯)ಗಳನ್ನು ಒಂದಕ್ಕೊಂದಕ್ಕೆ ಹೋಲಿಸಿದರೆ ಬ್ರೆಷ್ಟ್‌ನ ಭಾಷೆ, ಲಯಗಳ ವ್ಯತ್ಯಾಸ ಗೊತ್ತಾದೀತು.]

ಬ್ರೆಷ್ಟ್ ಏನನ್ನೇ ಆಗಲಿ, ಮನಸೋ ಇಚ್ಛೆ ಬರೆದು, ಮುಕ್ತಛಂದದ ಗುಂಪಿಗೆ ಸೇರಿಸಲಿಲ್ಲ. ಮುಕ್ತಛಂದದಷ್ಟೇ ಛಂದೋಬದ್ಧ ಹಾಗೂ ಪ್ರಾಸಬದ್ಧ ಕವಿತೆಗಳೂ ಅವನಲ್ಲಿ ವಿಪುಲ. ಛಂದ, ಪ್ರಾಸಗಳ ಬಳಕೆ ಹೆಚ್ಚಾಗಿ ಹಾಡಲೆಂದು ಬರೆದ ಕವಿತೆಗಳಲ್ಲಿ ಇಲ್ಲವೇ ಒಂದು ವಿಷಯದ ಅಥವಾ ಸಂದರ್ಭದ ಕೃತಕತೆ, ಅಸಹಜತೆಗಳನ್ನು ಎತ್ತಿ ತೋರಿಸಲು ಕಟುವಾಗಿ ಬರೆದಾಗ ಅಥವಾ ಅಣಕವಾಡಿದಾಗ. ಛಂದ, ಪ್ರಾಸಗಳನ್ನೇ ಅಸ್ತ್ರವನ್ನಾಗಿ ಉಪಯೋಗಿಸಿ ಕಟುತೆಗೆ, ವ್ಯಂಗ್ಯಕ್ಕೆ ಮೊನಚುಕೊಡುವುದು ಅವನ ಉದ್ದೇಶ (ಕಂಡಂತೆಯೇ ಛಂದ, ಪ್ರಾಸಗಳು ಅನುವಾದದಲ್ಲಿ ಬಂದಿಲ್ಲ, ಬರುವುದು ಸಾಧ್ಯವಿಲ್ಲ).

ವಸ್ತುವಿನ ಆಯ್ಕೆಯ ಬಗ್ಗೆ ಬ್ರೆಷ್ಟ್‌ಗೆ ಖಚಿತವಾದ ಅಭಿಪ್ರಾಯವಿದ್ದಂತೆಯೇ ಅದರ ಅಭಿವ್ಯಕ್ತಿಮೂಲವಾದ ಭಾಷೆಯ ಬಳಕೆಯ ಬಗ್ಗೆಯೂ ಅಷ್ಟೇ ಖಚಿತವಾದ ಅಭಿಪ್ರಾಯವಿತ್ತು. ಅನೇಕ ಕವಿಗಳು ಬರೆಯುವುದು ತಮಗೆ ತಾವೇ ಆಡಿಕೊಳ್ಳುವ ಸ್ವಗತದ ಏಕತಾನದ ಭಾಷೆಯಲ್ಲಿ. ವಿಷಯವನ್ನು ಇನ್ನೊಬ್ಬರಿಗೆ ಮಂದಟ್ಟು ಮಾಡಿಸುವ ಭಾಷೆಯಲ್ಲಲ್ಲ. ಹಾಗೆ ವಿಷಯವನ್ನು ಇನ್ನೊಬ್ಬರಿಗೆ ಮಂದಟ್ಟು ಮಾಡಿಸುವ ಕ್ರಿಯೆಯಲ್ಲಿ ವಿಷಯ, ಸಂದರ್ಭಗಳಿಗೆ ತಕ್ಕಂತೆ, ಯಾರಿಗೆ ಏನನ್ನು ಆಡುತ್ತಿದ್ದೇವೆ ಎಂಬುದರ ಮೇಲೆ ಭಾಷೆಯ ಬನಿ ಬದಲಾಗುತ್ತ ಹೋಗುತ್ತದೆ. ಬ್ರೆಷ್ಟ್‌ನದು ತಾನು ಆಡುವ, ಆಡಿದ್ದು ಕೇಳಿದವರಿಗೆ ಮನಮುಟ್ಟುವ ಭಾಷೆ. ಆ ಭಾಷೆಯನ್ನು ಅವನು 'ಅಭಿನಯ ಅಥವಾ ನಟನೆಯ ಭಾಷೆ' (ಗೆಸ್ಚರ್ ಲಾಂಗ್ವೇಜ್) ಎಂದು ಕರೆಯುತ್ತಾನೆ. ಆಡಿದ ಒಂದೊಂದು ಮಾತೂ ಅದಕ್ಕೆ ಅನುರೂಪವಾದ ಮನೋಭಾವವನ್ನೂ ಆ ಮನೋಭಾವಕ್ಕೆ ತಕ್ಕ ಅಂಗಾಭಿನಯ ಅಥವಾ ಆಂಗಿಕ ಚಲನೆಯನ್ನೂ ಪಡೆದಿದೆಯೊ ಎಂಬಂತೆ.

ಧ್ವನಿ* ಉತ್ಪನ್ನವಾಗುವುದು ಭಾಷೆಯ ಸರಿಯಾದ ಹೊಂದಾಣಿಕೆಯಿಂದ. ಭಾಷಾವ್ಯತ್ಯಯವಾದಂತೆ ಧ್ವನಿವ್ಯತ್ಯಯವಾಗುತ್ತದೆ. ಬ್ರೆಷ್ಟ್‌ನ ಕವಿತೆಗಳನ್ನು ಓದುವಾಗ ನಮಗೆ ಒಂದಲ್ಲ, ಹಲವು ತರದ ಧ್ವನಿಗಳ ಪರಿಚಯವಾಗುತ್ತದೆ : ವ್ಯಥೆಯ ಕಿರುದನಿ, ಎತ್ತರದ ವ್ಯಂಗ್ಯಧ್ವನಿ, ನಿರ್ಭಾವದ ಸೂಕ್ಷ್ಮ ಸಮತಳ ಧ್ವನಿ, ಹೀಗೆ ಎಷ್ಟೋ.

ಬ್ರೆಷ್ಟ್ ಬೇಕೆಂದೇ ಭಾವಗೀತೆಗಳನ್ನು ಬರೆದವನಲ್ಲ. ಆದರೂ ಅವನ ಸ್ವಭಾವದಲ್ಲಿ ಅವನಿಗೆ ತಿಳಿಯದೆಯೇ ಸಹಜವಾದ ಗೀತೆಯ ಗುಣ ಅಂಟಿಬಂದಿತ್ತು. ಪ್ರಾಯಶಃ ಈ ಗೀತಧ್ವನಿಯಿಂದಾಗಿಯೇ ಅವನು ಸಂಪ್ರದಾಯಸ್ಥರ ಪಾಲಿಗೆ ಕವಿಯಾಗಿ ಉಳಿದಿದ್ದಾನೆ! ಜರ್ಮನ್ ಕಾವ್ಯಜ್ಞರ ಪ್ರಕಾರ ಈ ಶತಮಾನದ ಏಳೆಂಟು ಮಹಾನ್ ಗೀತಕವಿಗಳಲ್ಲಿ ಬ್ರೆಷ್ಟ್ ಒಬ್ಬ ಪ್ರಮುಖ, ಅವನ ಸಮಕಾಲೀನರಲ್ಲಿ ಅಂತಹ ಇನ್ನೊಬ್ಬನೇ ಒಬ್ಬ ಕವಿ ಗಾಟ್‌ಫ್ರೆಡ್ ಬೆನ್. ಆದರೆ ಬ್ರೆಷ್ಟ್‌ನ ವೈಶಿಷ್ಟ್ಯ ಅವನ ವಸ್ತು, ವಿಷಯ, ಉದ್ದೇಶಗಳು ಗೀತೆಗೆ ಮಾಡಿದವಲ್ಲವಾದರೂ ಅವನು ನಿವೇದಿಸುವ ರೀತಿ ಉದ್ಭಾವ ತೊರೆದ ಸಾದಾ, ಅನೌಪಚಾರಿಕ ಭಾಷೆಯಲ್ಲಿಯೇ ಗೀತಗಂಧಿಯಾಗುತ್ತದೆ. 'ಭಾವಗೀತೆಗೆ ಕೆಟ್ಟ ಕಾಲ' (ಕ. ೪೭) ಎಂದು ಬರೆದ ಕವಿತೆಯೇ ಉತ್ತಮ ಗೀತೆಯಾಗುತ್ತದೆ. ಗದ್ಯದ ಪಂಕ್ತಿಗಳಲ್ಲಿ ಬರೆದ ಮೊತ್ತಮೊದಲಿನ 'ತಾಯಿ' ಮತ್ತು 'ಹೆಣ್ಣು'ಗಳನ್ನು ಕುರಿತ ಹಾಡುಗಳಲ್ಲಿಯೂ ಈ ಅಂಶ ವ್ಯಕ್ತ. ಅನುವಾದದ ಇನ್ನೊಂದು ಭಾಷೆಯಲ್ಲಿಯೂ ಈ ಸೂಕ್ಷ್ಮವನ್ನು ಗುರುತಿಸುವುದು ಕಷ್ಟವಾಗಲಾರದೇನೋ. ಈ ಸಂಪುಟದಲ್ಲಿ ಸೇರಿಸಿದ ಉತ್ತಮ ಗೀತೆಗಳೆನಿಸಿಕೊಂಡವನ್ನು ಟಿಪ್ಪಣಿಗಳಲ್ಲಿ ಸೂಚಿಸಿದೆ.

'ಕವಿತೆ ವ್ಯಾವಹಾರಿಕವಾಗಿರಬೇಕು' ಎಂಬಂತಹ ಬ್ರೆಷ್ಟ್‌ನ ಭಾವನಾದೂರವಾದ ಶುದ್ಧ ಬೌದ್ಧಿಕ ಕಾವ್ಯತತ್ವವನ್ನು ಎಲ್ಲರಿಗೂ ಒಪ್ಪಲಾಗುವುದಿಲ್ಲ. ಅದನ್ನು ಒಪ್ಪದೆಯೂ ಅವನ ಕವಿತೆಗಳನ್ನು ಓದಿ ಮೆಚ್ಚುವುದು ಸಾಧ್ಯ. ಒಂದೊಂದು ಭಾಷೆಯ ಜನರ ಮನಸ್ಸೂ ಆಯಾ ಭಾಷಾಸಾಹಿತ್ಯದ ಪರಂಪರೆಯನ್ನು ಅನುಸರಿಸಿ ಕೆಲವೊಂದು ಕಾವ್ಯಮಾರ್ಗಕ್ಕೆ

* Tone ಎಂಬ ಅರ್ಥದಲ್ಲಿ, Suggestion ಎಂಬ ಅರ್ಥದಲ್ಲಲ್ಲ.

ಹೊಂದಿಕೊಂಡಿರುತ್ತದೆ. ಅವರು ಆ ಪರಂಪರೆಯ ಕವಿತೆಗಳಿಗೆ ಸ್ಪಂದಿಸುವಷ್ಟು ಸುಲಭವಾಗಿ ಉಳಿದವಕ್ಕೆ ಸ್ಪಂದಿಸುವುದಿಲ್ಲ. ಎಲಿಯಟ್‌ನ 'ವೇಸ್ಟ್‌ಲ್ಯಾಂಡ್', ಫ್ರೆಂಚ್‌ನ ಸಿಂಬಲಿಸ್ಟ್, ಸುರ್‍ರಿಯಲಿಸ್ಟ್ ಕವಿತೆಗಳು, ಜಪಾನೀ ಹೈಕು ಮುಂತಾದವು ಒಡ್ಡುವಂತಹ ಸಮಸ್ಯೆಯನ್ನೇ ಬ್ರೆಷ್ಟ್‌ನ ಅನೇಕ ಕವಿತೆಗಳು ಒಡ್ಡಬಹುದು. ಆದರೆ ಕೆಲವಂತೂ ಅನುಮಾನವಿಲ್ಲದೆಯೇ ಸರ್ವಗ್ರಾಹ್ಯ, ಸದಾಗ್ರಾಹ್ಯ. ಏನೇ ಇರಲಿ, ಕಾವ್ಯದಲ್ಲಿ ಅವನದೂ ಒಂದು ಮಾರ್ಗವೆಂದು ಒಪ್ಪಿ, ಅದನ್ನು ಗಂಭೀರವಾಗಿ ಅಭ್ಯಸಿಸುವ ಪ್ರಯತ್ನ ನಮ್ಮ ಕಾವ್ಯಾಭಿರುಚಿಯನ್ನು ವಿಸ್ತರಿಸಿಕೊಳ್ಳಲು ಅಗತ್ಯ.

೬

ಬ್ರೆಷ್ಟ್‌ನದು ಅಪರೂಪದ ಮಹಾಚೇತನ. ಅವನು ಬರೆದದ್ದು ಅಪೂರ್ವವೆನ್ನುವಷ್ಟು ಅಪಾರ : ಸುಮಾರು ನಲವತ್ತೈದು ನಾಟಕಗಳು, ೧೨೦೦ ಕವಿತೆಗಳು, ಮೇಲೆ ನಾಟಕಗಳಲ್ಲಿನ ಹಾಡುಗಳು–ಕವಿತೆಗಳು, ಕ್ಯೂನರ್, ಕ್ಯಾಲಂಡರ್, ಮೇ–ತಿ ಮುಂತಾದ ರೂಪಕಗಳ ಸಂಗ್ರಹಗಳು, ಯೌವನದ ಎರಡು ವರ್ಷಗಳ ದಿನಚರಿ, ಮತ್ತೆ ಮುಂದಿನ ದಿನದಿನದ ಕೆಲಸದ ದಾಖಲೆಗಳು, ತನ್ನ ವಿಶಿಷ್ಟ 'ಎಪಿಕ್ ಥಿಯೇಟರ್' ಅಥವಾ 'ಏಲಿಯ ನೇಷನ್' ರಂಗವಿಧಾನವನ್ನು ವಿವರಿಸುವ 'ಶಾರ್ಟ್ ಆರ್ಗನನ್' ಕೈಪಿಡಿ ಮತ್ತು 'ಮೆಸಿಂಗ್‌ಕೌಫ್' ಸಂವಾದಗಳು, ಗೆಳೆಯರಿಗೂ ಗುರುತಿನವರಿಗೂ ಬರೆದ ಸುಮಾರು ೯೦೦ ಕಾಗದ ಪತ್ರಗಳು, ಇತ್ಯಾದಿ. ಇವಲ್ಲದೆ ಬರ್ಲಿನ್‌ನ ಬ್ರೆಷ್ಟ್ ಸಂಗ್ರಹಾಲಯದಲ್ಲಿ ಸಂಪಾದನೆ–ಪ್ರಕಟಣೆಗಳಿಗೆ ಕಾಯುತ್ತ ಕುಳಿತಿರುವ ಸಾಮಗ್ರಿ ಅದೆಷ್ಟೋ. ಈ ಎಲ್ಲದರಲ್ಲಿ ಇಂಗ್ಲಿಷಿಗೆ ಅನುವಾದವಾಗಿರುವುದು ತೀರಾ ಅಲ್ಪ.

ಅವನ ಪರಂಪರೆ ಸಹ ಜೀವಂತ. ಅವನ ಜಾಡು ಹಿಡಿದು ಕವಿತೆ ಬರೆಯತೊಡಗಿ ಮುಂದೆ ಸ್ವಂತ ಹಕ್ಕಿನ ಮೇಲೆ ದೊಡ್ಡ ಕವಿಗಳೆನಿಸಿಕೊಂಡ ಎನ್‌ಸ್ಟೆನ್ಸ್‌ಬರ್ಗರ್, ಎರಿಷ್ ಫ್ರೀಡ್, ಬಿಯರ್‌ಮನ್‌ರಿದ್ದಾರೆ. 'ಬರ್ಲಿನರ್ ಆನ್‌ಸೆಂಬಲ್'ನಲ್ಲಿ ಅವನ ಕೈ ಕೆಳಗೆ ಕೆಲಸ ಮಾಡಿ ನುರಿತ ಮಗಳು ಬಾರ್ಬರಾ ಮತ್ತು ಇತರ ರಂಗಕರ್ಮಿಗಳಿದ್ದಾರೆ. ಅವನ ನಾಟಕಗಳು ಜರ್ಮನಿಗಿಂತ ಹೆಚ್ಚಾಗಿ ಹೊರಗೆ ಭಾರತದಂತಹ ರಾಷ್ಟ್ರಗಳಲ್ಲಿ, ಅವುಗಳ ಮೂಲದ್ರವ್ಯಕ್ಕೂ ನಮ್ಮದಕ್ಕೂ ಇರುವ ಸಾಮ್ಯದಿಂದಾಗಿಯೋ ಏನೋ, ಪ್ರಚಾರದಲ್ಲಿವೆ. ಇಷ್ಟಾದರೂ ಅರವತ್ತು–ಎಪ್ಪತ್ತರ ದಶಕದಲ್ಲಿನ ಕಡಲುಬ್ಬರ ಎಂಬತ್ತರ ನಂತರ ಇಳಿಮುಖವಾಗುತ್ತ ಹೋಗುತ್ತದೆ. ಕಾಲದ ಗಾಳಿಯಾಟದಲ್ಲಿ ಯಾವ ಪಟ ಯಾವಾಗ ಮೇಲೇರುತ್ತದೆ, ಯಾವಾಗ ಗೋತ ಹೊಡೆಯುತ್ತದೆಂದು ಹೇಳಬರುವುದಿಲ್ಲ. ಹಿಂದಿನ ಪೂರ್ವ ಜರ್ಮನಿಯ ಆರ್ಥಿಕ ದುರವಸ್ಥೆ, ಅನಾಸ್ಥೆಗಳಿಂದಾಗಿ ಬ್ರೆಷ್ಟ್ ಸೆಂಟರ್ ಹದಿಮೂರು ವರ್ಷಗಳಿಂದ ನಡಸುತ್ತ ಬಂದಿದ್ದ 'ನೊಟೇಟ್' ಪತ್ರಿಕೆ ನಿಂತು ಹೋಯಿತು. 'ಬರ್ಲಿನರ್ ಆನ್‌ಸೆಂಬಲ್' ನಿಂದ ಅವನ ಕೈಕೆಳಗೆ ತಯಾರಾದ ದಿಗ್ದರ್ಶಕರನ್ನು ಹೊರಹಾಕುವ ಪ್ರಯತ್ನ ನಡೆಯಿತು. ಅತ್ತ ಅಮೆರಿಕಾ, ಇಂಗ್ಲಂಡ್‌ಗಳಲ್ಲಿ ಜಾನ್ ವ್ಹಿಲೆಟ್–ರಾಲ್ಫ್ ಮಾನ್‌ಹೈಮ್‌ರ ಇಪ್ಪತ್ತೆಂಟು ಸಂಪುಟಗಳ ಅನುವಾದಯೋಜನೆ ಪೋಷಕರಿಲ್ಲದೆ ನಡುವೆ ನಿಂತು, ಕೊನೆಯ ಒಂಬತ್ತು ಸಂಪುಟಗಳು ಹೊರಬರುವ ಸೂಚನೆಯಿಲ್ಲ.

ಇವೆಲ್ಲಕ್ಕಿಂತ ಹೆಚ್ಚು ವಿಷಾದದ ಸಂಗತಿ ಒಂದಿದೆ. ಜರ್ಮನಿಯ ಏಕೀಕರಣಕ್ಕಾಗಿ ಹಾತೊರೆಯುತ್ತಿದ್ದ ಪೂರ್ವ ಜರ್ಮನಿಯ ಜನ ಅದಕ್ಕೆ ಕೆಲವೇ ತಿಂಗಳ ಮೊದಲು ಬ್ರೆಷ್ಟ್‌ನ ಹಾಡುಗಳನ್ನು ಹಾಡುತ್ತ ಬರ್ಲಿನ್ ಗೋಡೆ ಕೆಡವಲು ಮುನ್ನುಗ್ಗುತ್ತಿದ್ದುದು ಸತ್ಯದ ಒಂದು ಮುಖವಾದರೆ, ಆರೇ ತಿಂಗಳ ನಂತರ ಏಕೀಕೃತ ಜರ್ಮನಿಯ ಆರ್ಥಿಕ–ಸಾಮಾಜಿಕ ವಿಷಮತೆಯ ಕಾರಣ ಹುಟ್ಟಿಕೊಂಡ 'ನಿಯೋ–ನಾಜ್ಜಿಗಳು' (ಹೊಸ ನಾಜ್ಜಿಗಳು) ಬರ್ಲಿನ್‌ನಲ್ಲಿರುವ ಬ್ರೆಷ್ಟ್ ಮತ್ತು ಹೆಲೆನ್ ವೀಗಲ್‌ರ ಸಮಾಧಿಗಳನ್ನು ಹೊಲೆಗೆಡಿಸಿ, ಅವುಗಳ ಮೇಲೆ ಫಾಸಿಸ್ಟ್ ಸ್ಲೋಗನ್‌ಗಳನ್ನು ಬರೆದದ್ದು ಇನ್ನೊಂದು ಮುಖ. ಬ್ರೆಷ್ಟ್ ಬದುಕಿದ್ದಾಗ ಯಾವದರ ವಿರುದ್ಧ ಹೋರಾಡಿದ್ದನೊ ಸತ್ತಮೇಲೆ ಅವನೇ ಅದಕ್ಕೆ ಬಲಿಯಾಗಬೇಕಾಗಿ ಬಂದ ಕಟುವ್ಯಂಗ್ಯ ಅವನ ಹೋರಾಟವಿನ್ನೂ ಮುಗಿದಿಲ್ಲವೆಂಬುದನ್ನು ಕೂಗಿ ಹೇಳುತ್ತದೆ.

೧೦

ನಾನು ಬ್ರೆಷ್ಟ್‌ನ ಹೆಸರನ್ನು ಮೊದಲು ಕೇಳಿದ್ದು ಅರವತ್ತರ ದಶಕದಲ್ಲಿ. ಹೈಸ್ಕೂಲು ದಿನಗಳಿಂದಲೂ, ಅರ್ಧಶತಮಾನಕ್ಕೂ ಹೆಚ್ಚು ಕಾಲ ನನ್ನ ಆತ್ಮೀಯ ಗೆಳೆಯನಾಗಿ ಉಳಿದಿರುವ ಎಂ. ಎಸ್. ಸತ್ಯು ೧೯೬೩ರಲ್ಲಿ ಇಲ್ಲಿನ ಹಿಂದೂಸ್ತಾನೀ ಥಿಯೇಟರ್‌ಗೆ ಬ್ರೆಷ್ಟ್‌ನ 'ಕಾಕೇಷಿಯನ್ ಚಾಕ್ ಸರ್ಕಲ್' ('ಸಫೇದ್ ಕುಂಡಲಿ') ನಾಟಕವನ್ನು ಆಡಿಸಿದ. ಬ್ರೆಷ್ಟ್ ಆಗ ಭಾರತಕ್ಕೆ ಹೊಸಬ. ಅದಕ್ಕೆ ಹಿಂದೆ ಅವನ ನಾಟಕ ಭಾರತದಲ್ಲಿ ಆಗಿದ್ದುದು ಎರಡೇ ಸಲ– ಒಮ್ಮೆ ಕಲಕತ್ತೆಯಲ್ಲಿ 'ಗೆಲಿಲಿಯೊ', ಇನ್ನೊಮ್ಮೆ ದಿಲ್ಲಿಯಲ್ಲಿ, ಇಂಗ್ಲಿಷಿನಲ್ಲಿ, 'ಚಾಕ್ ಸರ್ಕಲ್'. ದಿನವೂ ಸಂಜೆ ತಿಂಗಳ ಕಾಲ ಪ್ರೇಕ್ಷಕನಾಗಿ ಸತ್ಯುವಿನ ನಾಟಕದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಆ ನಾಟಕವಷ್ಟೇ ಅಲ್ಲ, ಅದರ ದಿಗ್ದರ್ಶನದ ಶೈಲಿ ಸಹ ಆ ಕಾಲದಲ್ಲಿ ಆಡುತ್ತಿದ್ದ ಡಬ್ಬದ ನಾಟಕಗಳದ್ದಕ್ಕಿಂತ ಭಿನ್ನವಾಗಿ ದಂಗುಬಡಿಸುತ್ತಿತ್ತು. ಸತ್ಯು ಹೇಗೊ ಏನೊ ಆ ಕಾಲಕ್ಕೆ ಎಲ್ಲರಿಗೂ ಎಟುಕದ ಬ್ರೆಷ್ಟ್‌ನ ಏಲಿಯನೇಷನ್–ಎಪಿಕ್ ಥಿಯೇಟರ್‌ನ ರಂಗತಂತ್ರವನ್ನು ಕರಗತ ಮಾಡಿಕೊಂಡು, ನಾಟಕವನ್ನು ಅಥೆಂಟಿಕ್ ಆಗಿ ಆ ಶೈಲಿಯಲ್ಲಿಯೇ ದಿಗ್ದರ್ಶಿಸಿದ್ದ. ಅದು ಬ್ರೆಷ್ಟ್‌ನ ಪ್ರಪಂಚಕ್ಕೆ ನನ್ನ ಪ್ರಥಮ ಪ್ರವೇಶ.

ಅಲ್ಲಿಂದೀಚೆಗೆ ದಿಲ್ಲಿಯಲ್ಲಿ ಆಗಾಗ ಆಗುತ್ತಿದ್ದ ಬ್ರೆಷ್ಟ್‌ನ ನಾಟಕಗಳೆಲ್ಲವನ್ನೂ ಬಿಡದೆ ನೋಡುತ್ತ ಬಂದೆ : ಕಲಕತ್ತೆಯ ಬಹುರೂಪಿ ಗುಂಪಿನ 'ಗೆಲಿಲಿಯೊ', ಎನ್.ಎಸ್.ಡಿಗೆ ಫ್ರಿಟ್ಸ್ ಬೆನೆವಿಟ್ಸ್ ಆಡಿಸಿದ 'ತ್ರೀ ಪೆನ್ನಿ ಆಪೆರಾ', 'ಹೆರ್ ಪುಂಟಿಲ', ಅಮಿತಾಭ ದಾಸಗುಪ್ತನ 'ಆರ್ಟುರೊ ಉಯೀ' ಮತ್ತು 'ಷ್ವಾಯ್‌ಕ್', ಇತ್ಯಾದಿ. ಮುಂದೆ ೧೯೮೬ರಲ್ಲಿ ಫ್ರಾಂಕ್‌ಫರ್ಟ್ ಬುಕ್‌ಫೇರ್‌ನಲ್ಲಿ ಭಾಗವಹಿಸಲು ಜರ್ಮನಿಯಲ್ಲಿದ್ದಾಗ ಬರ್ಲಿನ್‌ಗೂ ಹೋಗಿ ಬ್ರೆಷ್ಟ್ ನಾಟಕವಾಡಿಸುತ್ತಿದ್ದ ರಂಗಮಂದಿರಗಳ ಮುಂದೆ ಓಡಾಡಿ ಕಣ್ಣರಳಿಸಿಕೊಂಡು ಬಂದಿದ್ದೆ. ಅಲ್ಲಲ್ಲಿ ಓದಿದ್ದ ಬಿಡಿಗವನಗಳನ್ನು ಬಿಟ್ಟರೆ ಇಡಿಯಾಗಿ ಬ್ರೆಷ್ಟ್‌ನ ಕಾವ್ಯದ ಪರಿಚಯವಾದ್ದದು ೧೯೮೮ರಲ್ಲಿ, ದಿಲ್ಲಿಯ ರಾಧಾಕೃಷ್ಣ ಪ್ರಕಾಶನದವರು

ಪುನರ್‌ಪ್ರಕಟಿಸಿದ ವ್ಹಿಲೆಟ್–ಮಾನ್‌ಹೈಮ್ ಸಂಪಾದಿಸಿದ ಕವಿತಾಸಂಗ್ರಹ ಬಂದ ಮೇಲೆಯೇ.

ಸುಮಾರು ಆರುವರ್ಷಗಳ ಹಿಂದೆ ಆನಾ ಆಹ್ಮತೋವಾ ಕವಿತೆಗಳ ಅನುವಾದದಲ್ಲಿ ಮುಳುಗಿದ್ದಾಗ ಒಂದು ದಿನ ಮಿತ್ರ ಹಿಂದೀ ಕವಿ ಗಿರಿಧರ ರಾಠಿ ಭೇಟಿಯಾದರು. ಮಾಮೂಲಿನಂತೆ 'ಏನು ಓದುತ್ತಿದ್ದೇವೆ', 'ಏನು ಬರೆಯುತ್ತಿದ್ದೇವೆ' ಎಂಬ ಮಾತು ಬಂದಾಗ ಅವರು ಜರ್ಮನಿಯ ರಾಯ್‌ನರ್ ಲೋತ್ಸ್‌ರ ಜತೆಗೂಡಿ ಬ್ರೆಷ್ಟ್‌ನ ಕವಿತೆಗಳ ಅನುವಾದದಲ್ಲಿ ತೊಡಗಿರುವ ವಿಷಯ ತಿಳಿಯಿತು. ರಾಯ್‌ನರ್ ನನಗೂ ಪರಿಚಿತರೇ. ಅದಕ್ಕೆ ಮೂರು ನಾಲ್ಕು ವರ್ಷ ಹಿಂದೆ ಇಲ್ಲಿನ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯಕ್ಕೆ ಜರ್ಮನ್ ಪ್ರಾಧ್ಯಾಪಕರಾಗಿ ಬಂದಿದ್ದರು. ಭಾರತೀಯ ಸಾಹಿತ್ಯ ಸಂಸ್ಕೃತಿಗಳಲ್ಲಿ ಅವರಿಗೂ ಅವರ ಪತ್ನಿ ಬಾರ್ಬರಾ ಲೋತ್ಸ್‌ರಿಗೂ ತುಂಬ ಆಸಕ್ತಿ. (ಆಕೆ ಈಗ ಜರ್ಮನಿಯ ಹೈಡಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಹಿಂದೀ ಪ್ರಾಧ್ಯಾಪಕಿಯಾಗಿದ್ದಾರೆ.) ಅವರು ದಿಲ್ಲಿಗೆ ಬಂದ ಹೊಸದರಲ್ಲಿಯೇ ನಾನು ಸಾಹಿತ್ಯ ಅಕಾದೆಮಿಯ 'ಇಂಡಿಯನ್ ಲಿಟರೇಚರ್'ನ ಸಂಪಾದಕನಾಗಿದ್ದಾಗ ನನ್ನನ್ನು ಬಂದು ನೋಡಿ ಪರಿಚಯ ಮಾಡಿಕೊಂಡಿದ್ದರು. ಗಂಡಹೆಂಡತಿಯರಿಬ್ಬರೂ ಸ್ನೇಹಪರರು, ಸಾಧಾರಣ ಜರ್ಮನ್‌ರಂತೆ ಗಂಟುಮೋರೆಯವರಲ್ಲ. ಈಗ ಅವರ, ರಾಠಿಯ ಬ್ರೆಷ್ಟ್–ಅನುವಾದ ಯೋಜನೆಯಲ್ಲಿ ನಾನೂ ಸೇರಿಕೊಂಡೆ. ವಾರಕ್ಕೆರಡು ಬಾರಿ ನಾವು ಮೂವರಲ್ಲೊಬ್ಬರ ಮನೆಯಲ್ಲಿ ಸೇರುತ್ತಿದ್ದೆವು. ಸಂಜೆ ಐದಾರು ಗಂಟೆಗೆ ಷುರುವಾದ ನಮ್ಮ ಅನುವಾದಸಂಭ್ರಮ ರಾತ್ರಿ ಹತ್ತು ಹನ್ನೊಂದರವರೆಗೂ ಎಳೆಯುತ್ತಿತ್ತು. ರಾಯ್‌ನರ್ ಬ್ರೆಷ್ಟ್ ಪಂಡಿತ, ಅವರ ಎಳೆತ ಭಾಷಾಶಾಸ್ತ್ರದ ಕಡೆಗೆ. ಅವರ ಬೋಧನೆಯಲ್ಲಿ ಬ್ರೆಷ್ಟ್‌ನ ಕಾವ್ಯಧರ್ಮ, ಭಾಷೆಯ ಬಳಕೆ, ಮೂಲದ ಗತ್ತು, ಲಯ ಮುಂತಾದ ಸೂಕ್ಷ್ಮಮರ್ಮಗಳು ತಿಳಿಯುತ್ತ ಬಂದವು. ಎರಡು ವರ್ಷ ಕಾಲ ಎಳೆದ ಈ ಅನುವಾದಕರ್ಮದಲ್ಲಿ ನಾವು ಪ್ರಯತ್ನಿಸಿದ್ದು ಸುಮಾರು ಎಂಬತ್ತು ಕವಿತೆಗಳನ್ನು (ಮೇಲೆ ನನ್ನ ಸ್ವಪ್ರಯತ್ನದಿಂದ ಆದದ್ದು ಇನ್ನು ಇಪ್ಪತ್ತು). ಅಂತಿಮವಾಗಿ ನಾನು ಉಳಿಸಿಕೊಂಡ ಕವಿತೆಗಳಿಗೂ ರಾಠಿ–ರಾಯ್‌ನರ್‌ನವಕ್ಕೂ ಇರುವ ವ್ಯತ್ಯಾಸ ನಮ್ಮ ನಮ್ಮ ವೈಯಕ್ತಿಕ ಒಲವುಗಳನ್ನು ಎತ್ತಿತೋರಿಸುತ್ತದೆ. ಸಣ್ಣ ಸಣ್ಣ ಸರ್ವಪ್ರಿಯ ಕವಿತೆಗಳಿಗೆ ಅವರು ಹೆಚ್ಚು ಒಲಿದರೆ ನಾನು ಅಂಥವುಗಳ ಜತೆಗೇ ಪ್ರಾತಿನಿಧಿಕತೆಗೆ ಹೆಚ್ಚು ಒತ್ತುಕೊಟ್ಟು ದೊಡ್ಡಪುಟ್ಟವೆನ್ನದೆ, ಉತ್ತಮ–ಮಧ್ಯಮವೆನ್ನದೆ ಅವನ ಎಲ್ಲ ಕಾಲಾವಧಿಗಳ ಸಾಧನೆಯ ಏರುತಗ್ಗುಗಳೆರಡಕ್ಕೂ ಸಮಾನ ಗಮನ ಕೊಟ್ಟಿದ್ದೇನೆ. ಎರಡೂ ಅನುವಾದಗಳಲ್ಲಿ ಸುಮಾರು ನಲವತ್ತೈದು ಒಂದೇ ಇವೆ.

ಭಾಷೆಯ ವಿಷಯದಲ್ಲಿ ಸಹ ನಮ್ಮ ದೃಷ್ಟಿ ಭಿನ್ನ. ಅವರು ಮೂಲದ ಶಬ್ದಗಳನ್ನು ಓದುಗರ ತತ್‌ಕ್ಷಣದ ಗ್ರಹಿಕೆಗೆ ಬಾಹಿರವಾದರೂ ವ್ಯುತ್ಪತ್ತಿಯ ಛಾಯೆಯೂ ಮೂಡಿಬರುವಂತೆ ತದ್ವತ್ ಅನುವಾದ ಮಾಡಲು ಪ್ರಯತ್ನಿಸುತ್ತಿದ್ದರು. ನಾನು ಅದಕ್ಕೆ ವಿರುದ್ಧವಾಗಿ ಓದುಗರಿಗೆ ತಕ್ಷಣ ತಿಳಿಯುವ, ಕನ್ನಡದ ಜಾಯಮಾನಕ್ಕೆ ಹೊಂದುವ ಸಮಾನಪದಗಳಿಗೆ ತಡಕುತ್ತಿದ್ದೆ. ಉದಾಹರಣೆಗೆ, ಕ. ೪ರಲ್ಲಿ, ಮೂಲದ 'ನಿಷ್ಟ್ಸ್' (nothingness) ಅವರ ಅನುವಾದದಲ್ಲಿ ಹಿಂದಿಯಲ್ಲಿ ಬಳಕೆಯಲ್ಲಿಲ್ಲದ 'ಅ–ವಸ್ತುತ್ವ'



ಅನುವಾದ ಕರ್ಮದಲ್ಲಿ ಅನುವಾದಕ ಮತ್ತು ರಾಯ್‌ನರ್ ಲೋತ್ಸ್ (ಬಲಬದಿ).
ಚಿತ್ರ : ಬಾರ್ಬರಾ ಲೋತ್ಸ್.

ವಾಗುತ್ತದೆ, ನನಗೆ 'ಶೂನ್ಯ' ಸಾಕೆನಿಸಿತು. ಇನ್ನೊಂದೆಡೆ, ಕ. ೪ ಮತ್ತು ೪೧ರಲ್ಲಿ, 'ನಾಖ್–ಗೆಬೊರೆನೆನ್' (later-born) ಅವರಲ್ಲಿ 'ಅನು–ಜ' ಆದರೆ ನಾನು 'ನಂತರ ಹುಟ್ಟಿದವನು' ಎಂದಿದ್ದೇನೆ.

ಅನುವಾದ ಬರಿಯ ಸುಂದರ ಪ್ರತಿಕೃತಿಯಾಗಬಾರದು, ನಿಜ. ಸಾಧ್ಯವಾದಷ್ಟೂ ಪ್ರಾಮಾಣಿಕವಾಗಿ ಮೂಲದ ಸೊಬಗನ್ನು ಮೂಡಿಸುವಂತಿರಬೇಕು. ಆದರೆ ಮೂಲಕ್ಕೆ ಪ್ರಾಮಾಣಿಕವಾಗ ಹೊರಟು ಅನುವಾದಿತ ಭಾಷೆಯ ಜಾಯಮಾನಕ್ಕೆ ಒಗ್ಗದ ವಿಚಿತ್ರ ಸೃಷ್ಟಿಯೂ ಆಗಬಾರದು. ಈ ಮಾತು ಭಾಷೆ, ಲಯ, ಕಾವ್ಯಧ್ವನಿ ಮುಂತಾದ ಒಂದೊಂದು ಅಂಗಕ್ಕೂ, ಕೊನೆಗೆ ವಾಕ್ಯ ರಚನೆ, ಪಂಕ್ತಿ ರಚನೆಗಳಿಗೆ ಸಹ, ಅನ್ವಯಿಸುತ್ತದೆ. ಇವು ಅನುವಾದಕರ್ಮವನ್ನು ಗಂಭೀರವಾಗಿ ಹಚ್ಚಿಕೊಂಡವರ ಕುತೂಹಲ ಕೆರಳಿಸುವ ಸೂಕ್ಷ್ಮಾಂಶಗಳು ಎಂಬ ಕಾರಣದಿಂದಾಗಿ ಇಲ್ಲಿ ಕೊಂಚ ವಿವರವಾಗಿ ಬರೆಯ ಬೇಕಾಯಿತು.

ಬ್ರೆಷ್ಟ್‌ನ ಅನೇಕ ನಾಟಕಗಳಲ್ಲಿ ಹಾಡುಗಳೂ ಕವಿತೆಗಳೂ ಧಾರಾಳವಾಗಿ ಸೇರಿ ಕೊಂಡಿವೆ. ರಂಗಕರ್ಮಕ್ಕೆ ಸಂಬಂಧಿಸಿದಂತೆ ನಟರಿಗೆ ಉಪಯೋಗವಾಗುವ ಕವಿತೆಗಳದ್ದೇ ಇನ್ನೊಂದು ಗುಂಪು. ಅವುಗಳದ್ದು ಬೇರೆಯೇ ಒಂದು ಪ್ರಪಂಚ, ಅವುಗಳ ಉದ್ದೇಶ, ಪ್ರಯೋಜನ ಬೇರೆ. ಆ ಯಾವವನ್ನೂ ಈ ಸಂಪುಟದಲ್ಲಿ ಸೇರಿಸಿಲ್ಲ.


ಹಾಗೆಯೇ ಈ ಪ್ರಸ್ತಾವನೆಯಲ್ಲಿ, ತೀರಾ ಅವಶ್ಯವೆನಿಸಿದ ಕಡೆ ಬರುವ ಒಂದೊಂದು ಉಲ್ಲೇಖವನ್ನು ಬಿಟ್ಟರೆ ಅವನನ್ನು ನಾಟಕಕಾರನನ್ನಾಗಿ ನೋಡಿಲ್ಲ. ಅದು

ಈ ಸಂಪುಟದ ವ್ಯಾಪ್ತಿಗೆ ಹೊರತು ಎಂಬ ಕಾರಣದಿಂದಾಗಿ. ಪ್ರಸ್ತಾವನೆಯಲ್ಲಿ ಅಲ್ಲಲ್ಲಿ, ಬದುಕು ಮತ್ತು ಕಾವ್ಯದ ಬಗ್ಗೆ ಬ್ರೆಷ್ಟ್‌ನ ನಿಲುವನ್ನು ಸ್ಪಷ್ಟಪಡಿಸಲು ಅವನ ಕವಿತೆಗಳಿಂದ ಉದ್ಧರಿಸಲಾಗಿದೆ. ಆ ಕವಿತೆಗಳ ಅನುವಾದ ಈ ಸಂಪುಟದಲ್ಲಿದ್ದಲ್ಲಿ ಕಂಸಗಳಲ್ಲಿ ಕವಿತೆಯ ಸಂಖ್ಯೆಯನ್ನು ಕೊಟ್ಟಿದೆ. ಕವಿತೆಯ ಸಂಖ್ಯೆ ನಮೂದಿತವಾಗಿಲ್ಲವಾದರೆ ಅದು ಸಂಪುಟದಲ್ಲಿಲ್ಲ ಎಂದು ಅರ್ಥ.

ರಾಯ್‌ನರ್, ರಾಠಿ ಮತ್ತು ನಾನು – ಮೂವರೂ ಬೇರೆ ಬೇರೆ ನೆಲದವರು, ಬೇರೆ ಬೇರೆ ಭಾಷೆಗಳವರು. ಎರಡು ವರ್ಷಗಳ ಕಾಲ ಮತ್ತೆ ಮತ್ತೆ ಸೇರಿ, ಒಬ್ಬರು ಇನ್ನೊಬ್ಬರೊಂದಿಗೆ ಚುರುಕಾಗಿ ಪ್ರತಿಕ್ರಿಯಿಸಿ, ನಮ್ಮ ನಮ್ಮ ಬೇರೆ ಬೇರೆ ಬೆಳಸನ್ನು ತೆಗೆದ ಅನುಭವ ವಿಶಿಷ್ಟ. ಆಗಿನ ಅವರ ಸಹಯೋಗ, ಸಾಹಚರ್ಯ ಈಗ ಸವಿನೆನಪು. ಈಗ ರಾಯ್‌ನರ್ ಜರ್ಮನಿಗೆ ಹಿಂದಿರುಗಿದ್ದಾರೆ. ಅವರಿಗೂ ಗಿರಿಧರ ರಾಠಿಯವರಿಗೂ ನನ್ನ ಪ್ರೀತಿಯ ಕೃತಜ್ಞತೆ ಸಲ್ಲುತ್ತದೆ.

ರಾಠಿ–ರಾಯ್‌ನರ್‌ರ ಅನುವಾದ ೧೯೯೦ರಲ್ಲಿಯೇ ಪ್ರಕಟವಾಯಿತು. ಹಿಂದಿನ ಮೂರು ನಾಲ್ಕು ವರ್ಷಗಳಲ್ಲಿ ಪದೇ ಪದೇ ಎದುರಾದ ವೈಯಕ್ತಿಕ ತೊಂದರೆ ತಾಪತ್ರಯಗಳಿಂದಾಗಿ ನನ್ನ ಅನುವಾದಕ್ಕೆ ಅಂತಿಮರೂಪ ಕೊಡುವುದು ತಡವಾಯಿತು. ಗೆಳೆಯ ಕೆ. ವಿ. ಸುಬ್ಬಣ್ಣನವರು ಈ ವಿಳಂಬ ತಾಳಿಕೊಂಡು, ನಡುನಡುವೆ 'ಆಯಿತೆ?', 'ಯಾವಾಗ?' ಎಂದು ಹೆಗ್ಗೋಡಿನಿಂದ ದಿಲ್ಲಿಗೆ 'ದೂರ'ವಾಣಿಯಲ್ಲಿಯೇ ಮೃದುವಾಗಿ ನನ್ನ ಲೋಪದ ನೆನವರಿಕೆ ಮಾಡಿಕೊಡುತ್ತ, ನನ್ನಿಂದ ಈ ಕೆಲಸ ಮಾಡಿಸಿ ಒಪ್ಪುತಪ್ಪುಗಳೊಂದಿಗೆ ಒಪ್ಪಿ ಕೊಂಡಿದ್ದಾರೆ. ಅವರ ನಿರ್ವ್ಯಾಜ ಸ್ನೇಹ, ಕಾವ್ಯಪ್ರೇಮ ಹಾಗೂ ಕನ್ನಡದ ಸರ್ವತೋಮುಖ ಬೆಳವಣಿಗೆಯ ಕಾಳಜಿಗಳಿಂದಾಗಿ ಸುಭಾಷ್ ಮುಖೋಪಾಧ್ಯಾಯ, ಆನಾ ಆಹ್ಮತೋವಾ ಅನುವಾದಗಳ ನಂತರ ಸಾಧ್ಯವಾಗಿರುವ ಅಕ್ಷರ ಕವಿಸಂಧಾನ ಮಾಲೆಯ ಮೂರನೆಯ ಸಂಪುಟ ಇದು. ಕನ್ನಡ ಕಾವ್ಯಪ್ರೇಮಿಗಳಿಂದ ಮೊದಲೆರಡು ಸಂಪುಟಗಳಿಗೆ ಸಿಕ್ಕಿದ ಸ್ವಾಗತ, ಸ್ವೀಕಾರಗಳೇ ಇದಕ್ಕೂ ಸಿಗುವುದೆಂದು ಆಶಿಸುವೆ.

೨೫ ಮೇ ೧೯೯೪
(ವೈಶಾಖ ಶುಕ್ಲ ಪೂರ್ಣಿಮೆ) **ಶಾ. ಬಾಲುರಾವ್**
ಹೊಸದಿಲ್ಲಿ.



೧. ಹಳ್ಳಿವಾಸದ ಕವಿತೆಗಳು
(೧೯೨೨ರ ವರೆಗೆ)

೧. ವಸಂತದಲ್ಲೊಂದು ಸ್ತುತಿಗಾನ

೧. ಎಲೆ ಹುಡುಗರೆ, ನಾನೀಗ ಬಿಸಿಲುಗಾಲಕ್ಕೆ ಕಾಯುತ್ತಿದ್ದೇನೆ.

೨. ನಾವು ರಮ್ ಕೊಂಡಿಟ್ಟಿದ್ದೇವೆ, ಗಿತಾರುಗಳಿಗೆ ಹೊಸ ಹುರಿ ಕಟ್ಟಿಸಿದ್ದೇವೆ. ಬಿಳಿಯಂಗಿಗಳಿಗಿನ್ನೂ ಏರ್ಪಾಡು ಮಾಡಬೇಕಾಗಿದೆ.

೩. ನಮ್ಮ ಅಂಗಗಳು ಜೂನ್ ತಿಂಗಳ ಹುಲ್ಲಿನಂತೆ ಬೆಳೆದು ನಿಂತಿವೆ. ನಡು–ಆಗಸ್ಟ್ ಹೊತ್ತಿಗೆ ಹುಡುಗಿಯರು ಚದುರಿಹೋಗುತ್ತಾರೆ. ಸದ್ಯ: ಕಾಲದ ಕೈಹಿಡಿದು ಕುಣಿಸುತ್ತಿದೆ ಪರಮಖುಷಿ.

೪! ಈ ದಿನಗಳಲ್ಲಿ ಹಗಲ ಆಕಾಶ ಹಿತವಾಗಿ ಬೆಳಗುತ್ತಿರುತ್ತದೆ. ರಾತ್ರಿ ನಮ್ಮ ನಿದ್ದೆಯನ್ನು ಕದ್ದುಹಾಕುತ್ತದೆ.

೧೯೨೦

೨. ತಾಯಿಯನ್ನು ಕುರಿತು ಹಾಡಿದ್ದು

೧. ಮರಣ ಯಾತನೆ ಷುರುವಾಗುವ ಮೊದಲು ಅವಳ ಮುಖ ಹೇಗೆ ಕಾಣಿಸು ತ್ತಿತ್ತೆಂದು ನನಗೀಗ ನೆನಪಿಗೆ ಬರಲೊಲ್ಲದು. ಅವಳು ಆಯಾಸದಿಂದ ತನ್ನ ಬಡಕಲ ಹಣೆಯ ಮೇಲಿನ ಕಪ್ಪುಗೂದಲನ್ನು ಸರಿಪಡಿಸಿಕೊಳ್ಳುತ್ತಿದ್ದಾಗಿನ ಕೈಚಲನೆಯೊಂದು ಮಾತ್ರ ಈಗಲೂ ಕಣ್ಣಿಗೆ ಕಟ್ಟಿದೆ.

೨. ಇಪ್ಪತ್ತು ಚಳಿಗಾಲಗಳು ಅವಳನ್ನು ಪೀಡಿಸಿದ್ದವು. ಅವಳು ಅನುಭವಿಸಿದ ಕಷ್ಟಗಳು ಅಸಂಖ್ಯ. ಸಾವು ಅವಳ ಮುಂದೆ ಬರಲು ನಾಚುತ್ತಿತ್ತು. ಆಗ ಅವಳಲ್ಲಿ ಕಂಡದ್ದು ಒಂದು ಮಗುವಿನ ದೇಹ.

೩. ಅವಳು ಕಾಡಿನಲ್ಲಿ ಬೆಳೆದವಳು.

೪. ಅವಳು ಸಾಯುವುದನ್ನೇ ದೀರ್ಘಕಾಲ ನೋಡಿ ನೋಡಿ ಕಲ್ಲಾಗಿದ್ದ ಮುಖಗಳ ನಡುವೆ ಅವಳು ತೀರಿಕೊಂಡಳು. ಅವರು ಅವಳ ಯಾತನೆಗಳನ್ನು ಕ್ಷಮಿಸಿದರು. ಆದರೆ ಕುಸಿಯುವ ಮೊದಲು ಅವಳು ಆ ಮುಖಗಳ ನಡುವೆಯೇ ಅಲೆದಾಡುತ್ತಿದ್ದಳು.

೫. ಅನೇಕರು ನಾವು ಅವರನ್ನು ಉಳಿಸಿಕೊಳ್ಳಲಾರದ್ದಕ್ಕೆ ನಮ್ಮನ್ನು ತೊರೆದು ಹೋಗುತ್ತಾರೆ. ನಮ್ಮ ಅವರ ನಡುವೆ ಮತ್ತೇನೂ ಉಳಿದಿಲ್ಲವೆಂಬಂತೆ ಅವರಿಗೆ ಎಲ್ಲವನ್ನೂ ಹೇಳಿರುತ್ತೇವೆ. ಅವರು ಅಗಲುವಾಗ ನಮ್ಮ ಸುಖ ಕಲ್ಲಾಗುತ್ತದೆ. ಆದರೆ ಮುಖ್ಯವಾಗಿ ಅವರಿಗೆ ಹೇಳಬೇಕಾದ್ದನ್ನೇ ಹೇಳಿರುವುದಿಲ್ಲ, ಅಗತ್ಯವಾದದ್ದು ಉಳಿದುಹೋಗುತ್ತದೆ.

೬. ಓ, ಮುಖ್ಯವಾಗಿ ಹೇಳಬೇಕಾದ್ದನ್ನು ನಾವೇಕೆ ಹೇಳುವುದಿಲ್ಲ? ಹೇಳುವುದು ಅದೆಷ್ಟು ಸುಲಭವಾಗಿತ್ತು. ಹೇಳದೆಯೇ ನಾವು ಕೆಟ್ಟೆವು. ಸಲೀಸಾದ ಮಾತುಗಳು ಅವು. ದವಡೆಯಲ್ಲಿ ಒತ್ತುತ್ತ, ನಕ್ಕಾಗ ಹೊರಬೀಳುವಂತಹವು. ಈಗ ಗಂಟಲಲ್ಲಿ ಹೂತು ಉಸಿರುಗಟ್ಟಿಸುತ್ತಿವೆ.

೭. ಈಗ ನಮ್ಮಮ್ಮ ತೀರಿಕೊಂಡಿದ್ದಾಳೆ. ನಿನ್ನೆ ಸಂಜೆ, ಮೇ ಒಂದರಂದು. ಅವಳನ್ನೀಗ ಕೆದಕಿ ಮತ್ತೆ ಮೇಲೆತ್ತಿ ತರುವ ಹಾಗಿಲ್ಲ.

೧೯೨೦

೩. ಹೆಣ್ಣನ್ನು ಕುರಿತು ಹಾಡಿದ್ದು

೧. ಸಂಜೆಯ ಹೊತ್ತು ನದಿಯ ಬಳಿ ಗಿಡಗಂಟಿಗಳ ಕತ್ತಲಗರ್ಭದಲ್ಲಿ ಆಗಾಗ ಅವಳ ಮುಖ ಮತ್ತೆ ಕಾಣಿಸುತ್ತದೆ, ನಾನು ಪ್ರೀತಿಸಿದವಳದ್ದು, ಈಗ ಇನ್ನಿಲ್ಲದ ನನ್ನ ಹೆಣ್ಣಿನದು.

೨. ಅನೇಕ ವರ್ಷಗಳ ಹಿಂದಿನ ಸಂಗತಿ ಅದು. ಒಮ್ಮೊಮ್ಮೆ ನನಗೀಗ ಅವಳ ಬಗ್ಗೆ ಏನೊಂದೂ ಗೊತ್ತಿಲ್ಲವೆನಿಸುತ್ತದೆ, ಹಿಂದೊಮ್ಮೆ ನನ್ನ ಸರ್ವಸ್ವವಾಗಿದ್ದವಳದ್ದು. ಆದರೆ ಎಲ್ಲ ಆಗಿಹೋಗುತ್ತದೆ.

೩. ನಸುಹಳದಿ ಬಣ್ಣದ ಬಾನು, ಅತೀವ ವ್ಯಥೆ– ಇವುಗಳಿಂದಾಗಿ ಬಟ್ಟಲಂತೆ ತಳ ತಗ್ಗಿದ ಮಂಗೋಲಿಯಾದ ಬಯಲು ಪ್ರದೇಶಗಳಲ್ಲಿನ ಒಂದು ಪುಟ್ಟ ಜೂನಿಪರ್ ಮರದಂತೆ ಅವಳು ನನ್ನೊಳಗಿದ್ದಳು.

೪. ನದಿಯ ಬದಿ ಒಂದು ಕಪ್ಪು ಜೋಪಡಿಯಲ್ಲಿ ನಾವು ಕಾಲಹಾಕುತ್ತಿದ್ದೆವು. ಆಗಾಗ ಅವಳ ಬಿಳಿಯ ಮೈಕೈಯನ್ನೆಲ್ಲ ಕುದುರೆನೊಣಗಳು ಕಚ್ಚಿ ಹಾಕುತ್ತಿದ್ದವು. ಆಗ ನಾನು ಏಳನೆಯ ಆವರ್ತಿ ವೃತ್ತಪತ್ರಿಕೆ ಓದುತ್ತ ಕೂತಿರುತ್ತಿದ್ದೆ. ಅಥವಾ ನಿನ್ನ ಕೂದಲು ಹೊಲಸಿನ ಬಣ್ಣಕ್ಕಿದೆಯೆಂದೊ ಅಥವಾ ನಿನಗೆ ಹೃದಯವಿಲ್ಲವೆಂದೊ ಒದರುತ್ತಿರುತ್ತಿದ್ದೆ.

೫. ಆದರೆ ಒಂದು ದಿನ ಜೋಪಡಿಯಲ್ಲಿ ನಾನು ಅಂಗಿ ಕಸಕಿಕೊಳ್ಳುತ್ತಿದ್ದಾಗ ಅವಳು ಬಾಗಿಲ ಬಳಿ ನಿಂತು, ಹೊರಟುಹೋಗಬಯಸುವವಳಂತೆ ನನ್ನ ಕಡೆ ನೋಡಿದಳು.

೬. ಸುಸ್ತಾಗುವವರೆಗೂ ಅವಳನ್ನು ಹೊಡೆದಿದ್ದವನೇ ಆಗ ಅವಳಿಗೆ 'ನೀನು ನನ್ನ ಭಾಗ್ಯದೇವತೆ' ಎಂದಿದ್ದ.

೭. 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳಿದ್ದವನೇ ಅವಳನ್ನು ಬಾಗಿಲಾಚೆ ಎಳೆದುತಂದು, ಆಕಾಶದ ಕಡೆ ನೋಡಿ ನಗುತ್ತ 'ಹವಾ ಚೆನ್ನಾಗಿದೆ'ಯೆಂದು ಹೇಳಿ ಅವಳ ಕೈ ಕುಲುಕಿದ್ದ.

೮. ಅವಳೀಗ ಹೊರಗೆ ಗಾಳಿಯಲ್ಲಿ ನಿಂತಿದ್ದಳು, ಒಳಗೆ ಜೋಪಡಿಯಲ್ಲಿ ಹಾಳು ಸುರಿಯುತ್ತಿತ್ತು. ಅವನು ಹೊರಬಾಗಿಲ ಅಗಳಿ ಹಾಕಿಬಂದು ವೃತ್ತಪತ್ರಿಕೆಯ ಹಿಂದೆ ಕುಕ್ಕರಿಸಿದ.

೯. ಅಲ್ಲಿಂದೀಚೆಗೆ ನಾನವಳನ್ನು ಕಂಡಿಲ್ಲ. ಅವಳದ್ದಾಗಿ ಉಳಿದ ಒಂದೇ ಒಂದೆಂದರೆ ಮಾರನೆಯ ಬೆಳಗ್ಗೆ ಅವಳು ಹಿಂದಿರುಗಿಬಂದಾಗ ಮುಚ್ಚಿದ ಬಾಗಿಲನ್ನು ಕಂಡು ಅವಳಿಂದ ಹೊರಟ ಕಿರುಚೀತ್ಕಾರ.

೧೦. ಈಗ ಜೋಪಡಿ ಹಾಳುಬಿದ್ದಿದೆ, ಎದೆಯಲ್ಲಿ ವೃತ್ತಪತ್ರಿಕೆಗಳು ತುರುಕಿಕೊಂಡಿವೆ. ಸಂಜೆಯ ಹೊತ್ತು ನದಿಯ ಬದಿ ಗಿಡಗಂಟಿಗಳ ಕತ್ತಲಗರ್ಭದಲ್ಲಿ ನಾನು ಬಿದ್ದುಕೊಂಡಿರುತ್ತೇನೆ. ಆಗ ನನ್ನೊಳಗೆ ನೆನಪುಕ್ಕಿ ಬರುತ್ತದೆ.

೧೧. ಗಾಳಿಯ ಕೂದಲಿನಲ್ಲಿ ಹುಲ್ಲಿನ ವಾಸನೆಯಿದೆ. ನೀರು ನೆಮ್ಮದಿ ಬೇಡಿ ಎಡೆಬಿಡದೆ ದೇವರಿಗೆ ಮೊರೆಯಿಡುತ್ತದೆ. ನನ್ನ ನಾಲಿಗೆಯಲ್ಲಿ ಕಹಿ ತುಂಬಿದೆ.

೧೯೨೦

೪. ನಂತರ ಹುಟ್ಟಿದವನು

ಒಪ್ಪಿಕೊಂಡೆ : ನಾನು
ಆಸೆಬಿಟ್ಟವನು.
ಕುರುಡರು ಹೊರದಾರಿ ಕುರಿತು ಮಾತಾಡುತ್ತಾರೆ.
ನನಗೆ ಕಾಣಿಸುತ್ತಿದೆ

ತಪ್ಪೆಲ್ಲ ಮಾಡಿ ಮುಗಿದ ಮೇಲೆ
ನಮ್ಮ ಕೊನೆಯ ಸಂಗಾತಿಯಾಗಿ ಎದುರಿಗೆ ಕೂತಿರುತ್ತದೆ
ಶೂನ್ಯ.

೧೯೨೦?

೫. ನಾನು ಖಚಿತವಾಗಿ ಬಲ್ಲೆ

ನಾನು ಖಚಿತವಾಗಿ ಬಲ್ಲೆ
ಇಡೀ ಸ್ವರ್ಗವನ್ನು ದಾಟಿಕೊಂಡೇ
ಪಾಪಿಗಳು ನರಕಕ್ಕೆ ಪ್ರಯಾಣಮಾಡುವುದು.
ಅವರನ್ನು ಪಾರದರ್ಶಕ ಗಾಡಿಗಳಲ್ಲಿ ಕರೆದೊಯ್ಯಲಾಗುತ್ತದೆ.
ಅವರಿಗೆ ಹೇಳಲಾಗುತ್ತದೆ :
ನಿಮ್ಮ ಕೆಳಗೆ ಸ್ವರ್ಗವಿದೆ.
ಅವರಿಗೆ ಹೀಗೆ ಹೇಳಲಾಗುತ್ತದೆಂದು ನಾನು ಬಲ್ಲೆ
ಏಕೆಂದರೆ ನನಗನಿಸುವುದು
ಅವರಲ್ಲಿ ನಿಜವಾಗಿ
ಸ್ವರ್ಗವನ್ನು ಗುರುತಿಸಲಾಗದವರು ಅನೇಕರಿದ್ದಾರೆ
ಅವರು ನಿಜವಾಗಿ ಅದಿನ್ನೂ ಹೆಚ್ಚು ಥಳಥಳಿಸುತ್ತಿರುತ್ತದೆಂದು ಕಲ್ಪಿಸಿಕೊಂಡಿರುತ್ತಾರೆ.

೧೯೨೦

೬. ಮಹಾವಂದನಾಸ್ತೋತ್ರ

೧

ಜಯತು ರಾತ್ರಿಗೆ, ಜಯತು ಕತ್ತಲಿಗೆ – ನಿಮ್ಮನಾವರಿಸಿರುವ ಅವುಗಳಿಗೆ ಜಯತೆನ್ನಿ!
ಹಿಂಡುಹಿಂಡಾಗಿ ಬನ್ನಿ
ಕತ್ತೆತ್ತಿನೋಡಿ, ಅಂತರಿಕ್ಷದ ಕಡೆಗೆ :
ನಿಮ್ಮ ಪಾಲಿನ ದಿನವಾಗಲೇ ಕಳೆದಿಹುದು.

೨

ಜಯತು ಹುಲ್ಲಿಗೆ, ಜಯತು ಪಶುಜಾತಿಗೆ – ನಿಮ್ಮ ಬದಿಗೇ ಬದುಕಿ ಸಾಯುವ
    ಅವುಗಳಿಗೆ ಜಯತೆನ್ನಿ!
ನೋಡಿ, ನಿಮ್ಮಂತೆಯೇ
ಬಾಳುವವು ಹುಲ್ಲು, ಪಶುಜಾತಿ
ಮತ್ತೆ ಅಳಿಯಲೇಬೇಕು ಅವು ಸಹ.

೩

ಜಯತು ವೃಕ್ಷಕೆ – ಕೊಳೆತ ಹೆಣವುಣ್ಣುತ್ತ, ಹಿಗ್ಗುತ್ತ ಅಂತರಿಕ್ಷಕೆ ಬೆಳೆವ
    ಅದಕೆ ಜಯತೆನ್ನಿ!
ಜಯತು ಕೊಳೆತಕ್ಕೆ
ಕೊಳೆತನು ಮೇಯ್ವ ವೃಕ್ಷಕ್ಕೆ ಜಯತು
ಜತೆಗೆ ಜಯತೆನ್ನಿ ಅಂತರಿಕ್ಷಕ್ಕು.

೪

ಜಯತೆನ್ನಿ ಮನಸಾರೆ ಅಂತರಿಕ್ಷದ ಸ್ಮರಣಹೀನತೆಗೆ!
ನಿಮ್ಮ ಹೆಸರಾಗಲೀ ಮುಖವಾಗಲೀ
ಗುರುತಿಲ್ಲದದಕೆ
ಅದು ಬಲ್ಲದೇ ನೀವು ಬದುಕಿರುವಿರೆಂದು?

೫

ಜಯತು ಶೈತ್ಯಕ್ಕೆ, ಜಯತು ಕತ್ತಲಿಗೆ, ಜಯತು ಅಳಿವಿಗೆ!
ಕತ್ತೆತ್ತಿ ನೋಡಿ :

ಯಾವ ಲೆಕ್ಕಕ್ಕೂ ಇಲ್ಲ ನೀವು
ಸಾಯಬಹುದೀಗ ನಿರಾಳ.

೧೯೭೦

೭ ವರ್ಷ, ಪ್ರತಿವರ್ಷ

೧

ಈಗ ಈ ರಾತ್ರಿ ನಾನು ನಿನ್ನನ್ನು ಪ್ರೀತಿಸುತ್ತಿರುವಾಗ
ಆಕಾಶದಲ್ಲಿ ಬೆಳ್ಮೋಡಗಳು ಸದ್ದಿಲ್ಲದೆ ಕವಿದಿವೆ
ಕಲ್ಲುಬಂಡೆಗಳ ಮೇಲೆ ನೀರು ಗರ್ಜಿಸುತ್ತ ಹರಿದಿದೆ
ಒಣಪೊದೆಗಳ ಮೇಲೆ ಗಾಳಿ ನಡುಗುತ್ತ ಬೀಸಿದೆ.

೨

ಬೆಳ್ನೀರು ಕೆಳಕ್ಕೆ ಹರಿದುರುಳುತ್ತ
ವರ್ಷ, ಪ್ರತಿವರ್ಷ
ಮೇಲೆ ಆಕಾಶದಲ್ಲಿ
ಸದಾ ಮೋಡಗಳನ್ನುಂಟುಮಾಡುತ್ತಿರುತ್ತದೆ.

೩

ಮುಂದೆ ಕಾಲ ಏಕಾಕಿಯಾಗುತ್ತದೆ
ಬೆಳ್ಮೋಡಗಳು ಆಗಲೂ ಇರುತ್ತವೆ.
ಕಲ್ಲುಬಂಡೆಗಳ ಮೇಲೆ ನೀರು ಗರ್ಜಿಸುತ್ತ ಹರಿಯುತ್ತಿರುತ್ತದೆ.
ಒಣಪೊದೆಗಳ ಮೇಲೆ ಗಾಳಿ ನಡುಗುತ್ತ ಬೀಸುತ್ತಿರುತ್ತದೆ.

೧೯೨೧

೮ ಒಂದು ಸ್ತುತಿಗಾನ

೧. ಬೆಳ್ನೀರು ಕುತ್ತಿಗೆಯವರೆಗೆ ಏರಿಬಂದಾಗಲೂ ನಾವು ಕಣ್ಣರೆಪ್ಪೆ ಬಡಿಯಲಿಲ್ಲ;

೨. ದಟ್ಟ ಕಂದುಬಣ್ಣದ ಸಂಜೆ ನಮ್ಮನ್ನು ಕಚ್ಚಿ ತಿಂದು ಹಾಕುತ್ತಿದ್ದಾಗಲೂ ನಾವು ಚುಟ್ಟ ಸೇದುತ್ತ ಕುಳಿತಿದ್ದೆವು;

೩. ಆಕಾಶ ನಮ್ಮನ್ನು ಕುಡಿದು ಮುಗಿಸಿದಾಗಲೂ ನಾವು ಬೇಡವೆನ್ನಲಿಲ್ಲ;

೪. ನಮ್ಮ ಕುತ್ತಿಗೆಯವರೆಗೆ ಏರಿಬಂದದ್ದನ್ನು ನೀರು ಯಾರಿಗೂ ತಿಳಿಸಲಿಲ್ಲ;

೫. ನಾವು ಬಾಯಿಮುಚ್ಚಿಕೊಂಡಿದ್ದೆವೆಂದು ದಿನಪತ್ರಿಕೆಗಳು ವರದಿ ಮಾಡಲಿಲ್ಲ;

೬. ಮುಳುಗುತ್ತಿರುವವರ ಗೋಳು ಆಕಾಶಕ್ಕೆ ಕೇಳಿಸುವುದಿಲ್ಲ;


೭. ಎಂತಲೇ ಭಾಗ್ಯವಂತರಂತೆ ನಾವು ಕಲ್ಲುಬಂಡೆಗೆ ಒರಗಿ ಕೂತಿದ್ದೆವು;

೮. ಎಂತಲೇ ನಮ್ಮ ಮೌನಮುಖಮುದ್ರೆಯ ಬಗ್ಗೆ ಮಾತಾಡಿಕೊಂಡವೆಂದು ಹಸಿರುಹಕ್ಕಿಗಳನ್ನು ಹೊಡೆದು ಹಾಕಿದೆವು.

೯. ಕಲ್ಲುಬಂಡೆಗಳ ಬಗ್ಗೆ ಯಾರು ತಾನೆ ಮಾತಾಡುತ್ತಾರೆ?

೧೦. ನೀರು, ಸಂಜೆ, ಆಕಾಶ—ಇವು ನಮಗೇನಾಗಬೇಕೆಂದು ಯಾರು ತಾನೆ ತಿಳಿಯ ಬಯಸುತ್ತಾರೆ!

೧೯೭೧



೨. ನಗರವಾಸದ ಕವಿತೆಗಳು
(೧೯೨೨–೩೩)

೯. ಬಡಪಾಯಿ ಬಿ. ಬಿ.ಯನ್ನು ಕುರಿತು

೧

ನಾನು, ಬೆರ್ಟೋಲ್ಟ್ ಬ್ರೆಷ್ಟ್, ಕಪ್ಪುಗಾಡುಗಳಿಂದ ಬಂದವನು.
ನಾನಿನ್ನೂ ನಮ್ಮಮ್ಮನ ಹೊಟ್ಟೆಯಲ್ಲಿರುವಾಗಲೇ ಅವಳು ನನ್ನನ್ನು
ನಗರಗಳಿಗೆ ಹೊತ್ತುತಂದಳು. ಸತ್ತು ಮೈಸೆಡೆಯುವವರೆಗೂ
ಕಪ್ಪುಗಾಡುಗಳ ಚಳಿ ನನ್ನೊಳಗೆ ಉಳಿದಿರುತ್ತದೆ.

೨

ಡಾಂಬರು ನಗರದಲ್ಲಿ ನಾನು ಮನೆಯಲ್ಲೇ ಇದ್ದಂತಿದ್ದೇನೆ.
ಶುರುವಿನಿಂದಲೂ ಇಲ್ಲಿ ನನಗೆ ಸಾವಿನ ಪ್ರತಿಯೊಂದು ಕ್ರಿಯಾಕರ್ಮವೂ
ಪ್ರಾಪ್ತವಾಗಿದೆ : ವೃತ್ತಪತ್ರಿಕೆಗಳು. ಮತ್ತೆ ತಂಬಾಕು. ಮತ್ತೆ ಬ್ರಾಂಡಿ.
ಕಡೆಯವರೆಗೂ ನಾನೊಬ್ಬ ಸಂಶಯಪಿಶಾಚಿ, ಮೈಗಳ್ಳ, ಸಂತೃಪ್ತಪ್ರಾಣಿ.

೩

ಜನರಲ್ಲಿ ನನಗೆ ಸ್ನೇಹ. ಅವರ ವಾಡಿಕೆಯಂತೆ
ನಾನೂ ಒರಟಾದ ಹ್ಯಾಟ್ ಹಾಕಿಕೊಳ್ಳುತ್ತೇನೆ.
ಅಂದುಕೊಳ್ಳುತ್ತೇನೆ : ಇವರು ಬಲು ವಿಚಿತ್ರವಾಗಿ ಗಬ್ಬುಬೀರುವ ಪ್ರಾಣಿಗಳು
ಮತ್ತೆ ಹೇಳುತ್ತೇನೆ : ಏನೂ ಪರವಾಗಿಲ್ಲ, ನಾನೂ ಹಾಗೆಯೇ.

೪
ಬೆಳಗಿನ ಹೊತ್ತು ಆಗಾಗ ನನ್ನ ಖಾಲಿ ತೂಗುಕುರ್ಚಿಗಳಲ್ಲಿ
ಒಬ್ಬಿಬ್ಬ ಹೆಂಗಸರನ್ನು ಕೂರಿಸಿಕೊಂಡು ಕೂತು
ಅವರ ಕಡೆ ನಿರಾಳವಾಗಿ ನೋಡುತ್ತ ಹೇಳುತ್ತೇನೆ :
ಇಲ್ಲಿ ನಿಮಗೊಬ್ಬನಿದ್ದಾನೆ, ನೀವು ನೆಚ್ಚಬಾರದವನು.

೫
ಸಂಜೆಯಾದಂತೆ ನನ್ನ ಸುತ್ತ ಗಂಡಸರನ್ನು ಕಲೆಹಾಕಿಕೊಳ್ಳುತ್ತೇನೆ
ನಾವು ಒಬ್ಬರನ್ನೊಬ್ಬರು 'ಸಾರ್' 'ಸಾರ್' ಎಂದು ಸಂಬೋಧಿಸುತ್ತೇವೆ
ಅವರು ನನ್ನ ಮೇಜಿನ ಮೇಲೆ ಕಾಲುಚಾಚಿ ಕುಳಿತು ಹೇಳುತ್ತಾರೆ :
'ಮುಂದೆ ಎಲ್ಲ ಸರಿಹೋಗುತ್ತೆ'. 'ಯಾವಾಗ?' ಎಂದು ನಾನು ಕೇಳುವುದಿಲ್ಲ.

೬
ಬೆಳಕು ಹರಿಯುವ ಬೂದಲ ವೇಳೆ, ಪೈನ್‌ಮರಗಳು ಉಚ್ಚೆಹುಯ್ಯುವ ಹೊತ್ತು
ಅವುಗಳಿಗೆ ಕೀಟಪ್ರಾಯವಾದ ಹಕ್ಕಿ ಅರಚತೊಡಗುತ್ತದೆ.
ಆಗ ನಾನು ನಗರದಲ್ಲಿ ಬಟ್ಟಲ ತಳಹೀರಿ, ಚುಟ್ಟದ
ತುಂಡನ್ನು ಹೊರಗೆಸೆದು ಕಿರಿಕಿರಿಪಡುತ್ತ ನಿದ್ದೆಹೋಗುತ್ತೇನೆ.

೭
ನಾವು ಕೂತಿದ್ದೇವೆ, ಆರಾಮಪೀಳಿಗೆಯ ಜನ
ಎಂದೂ ನಾಶವಾಗುವುದಿಲ್ಲವೆಂದುಕೊಂಡ ಮನೆಗಳಲ್ಲಿ.
(ಮ್ಯಾನ್‌ಹಾಟನ್ ದ್ವೀಪದ ಎತ್ತರದ ಡಬ್ಬದ ಮನೆಗಳನ್ನು, ಅಟ್ಲಾಂಟಿಕ್ ಸಾಗರದ
ಮನರಂಜಿಸುವ ಕಡ್ಡಿ– ಆ್ಯಂಟೀನಾಗಳನ್ನು ನಾವು ನಿರ್ಮಿಸಿದ್ದು ಹೀಗೆಯೇ.)

೮
ಆ ನಗರಗಳದ್ದಾಗಿ ಉಳಿಯುವುದೆಂದರೆ ಅವುಗಳ ಮೂಲಕ ಹಾದು ಹೋದದ್ದು : ಗಾಳಿ!
ಉಣ್ಣುವವನಿಗೆ ಸುಖಕೊಡುತ್ತದೆ, ಮನೆ : ಅದನ್ನವನು ಖಾಲಿಮಾಡಿ ಹೋಗುತ್ತಾನೆ.
ನಾವು ಬಲ್ಲೆವು, ನಾಲ್ಕು ದಿನ ಇದ್ದುಹೋಗುವವರು ನಾವು
ನಮ್ಮ ನಂತರ ಬರಲಿದೆ : ಹೇಳಿಕೊಳ್ಳಲು ಏನೂ ಇಲ್ಲದ್ದು.

೯
ಮುಂಬರುವ ಭೂಕಂಪಗಳಲ್ಲಿ ಕಹಿಮನಸ್ಸಿನಿಂದಾಗಿ
ನನ್ನ ವರ್ಜಿನಿಯಾ ಚುಟ್ಟವನ್ನು ಆರಗೊಡುವುದಿಲ್ಲವೆಂದು ನಂಬಿದ್ದೇನೆ

ನಾನು, ಬೆರ್ಟೋಲ್ಟ್ ಬ್ರೆಷ್ಟ್, ಹಿಂದಿನ ಕಾಲದಲ್ಲಿ ನಮ್ಮಮ್ಮನ ಹೊಟ್ಟೆಯಲ್ಲಿದ್ದಾಗಲೇ ಕಪ್ಪುಗಾಡುಗಳಿಂದ ಡಾಂಬರು ನಗರಕ್ಕೆ ತಂದು ಒಗೆಯಲ್ಪಟ್ಟವನು.

೧೯೨೨

೧೦. ಹಿಂದಿನ ಕಾಲದ ಪಳೆಯುಳಿಕೆಗಳ ಬಗ್ಗೆ

ಉದಾಹರಣೆಗೆ, ಈಗಲೂ ರಾತ್ರಿಯ ಹೊತ್ತು
ಹೊಸ ಕಟ್ಟಡಗಳ ಮೇಲೆ ಚಂದ್ರ ಬಂದು ನಿಲ್ಲುವುದನ್ನು ನೋಡಬಹುದು
ತಾಮ್ರದ ವಸ್ತುಗಳಲ್ಲೆಲ್ಲ
ಅದು
ಅತ್ಯಂತ ನಿರುಪಯೋಗಿ.
ಈಗಾಗಲೇ ಕುದುರೆ ಎಂಬ ಹೆಸರಿನ
ಗಾಡಿಯೆಳೆಯುತ್ತಿದ್ದ ಪ್ರಾಣಿಗಳ ಬಗ್ಗೆ ತಾಯಂದಿರು ಕತೆ ಹೇಳುತ್ತಾರೆ.
ಹೌದು, ಭೂಖಂಡಗಳ ವಾರ್ತಾಲಾಪಗಳಲ್ಲಿ
ಅವುಗಳ ಹೆಸರಿಲ್ಲ, ಚರ್ಚೆಯಿಲ್ಲ :
ಹೊಸ ಬೃಹತ್ ಆ್ಯಂಟೀನಾಗಳಿಗೆ
ಹಿಂದಿನ ಕಾಲದ್ದರ ಬಗ್ಗೆ
ಏನೊಂದೂ ತಿಳಿಯದು.

೧೯೨೫

೧೧. ಕೆಲವೊಂದು ಅಸಾಮಂಜಸ್ಯಗಳನ್ನು ಸ್ಥೂಲವಾಗಿ ಪ್ರಸ್ತಾಪಿಸುವ ಒಂದು ಪುಟ್ಟ ಪತ್ರ

೧

ಬರೆಯಲು ಒಂದು ವಿಷಯವಿದ್ದರೆ ಸಾಕು
ಬರೆಯಬಯಸುವವರಿಗೆ ಅದು ಖುಷಿ ಕೊಡುತ್ತದೆ.
ಸೂಯೆಜ್ಹ್ ಕಾಲುವೆಯನ್ನು ಕಟ್ಟಿದಾಗ
ಯಾವನೊ ಅದನ್ನು ವಿರೋಧಿಸಿದನೆಂದು ಖ್ಯಾತನಾದ.
ಮಳೆಯ ವಿರುದ್ಧ ಬರೆಯುವವರು ಸಹ ಕೆಲವರಿದ್ದಾರೆ
ಮತ್ತೆ ಕೆಲವರು ಪೂರ್ಣಿಮೆ ಅಮಾವಾಸ್ಯೆಗೆ ತಿರುಗುವುದರ ವಿರುದ್ಧ ಹೋರಾಡುತ್ತಾರೆ.
ಬರೆದದ್ದು ಚಂದಾಗಿದ್ದರೆ ಸಾಕು
ಅವರು ಖ್ಯಾತರಾಗುತ್ತಾರೆ.

೨

ಯಾರಾದರೂ ರೈಲುಕಂಬಿಯ ಮೇಲೆ
ಮೂಗಿಟ್ಟರೆ
ಅದು ಎಷ್ಟೇ ವಿಶ್ವಾಸಾರ್ಹವಾದರೂ
ರೈಲು ಬಂದಾಗ
ಹಾರಿಹೋಗುತ್ತದೆ.
ಯಾರ ಕಣ್ಣಿಗಾದರೂ ಬೀಳುವವರೆಗೆ
ಅದು ಅಲ್ಲೇ ಹಾಗೇ ಬಿದ್ದಿರುತ್ತದೆ.

೩.

ಚೀನಾದ ದೊಡ್ಡಗೋಡೆ ಕಟ್ಟಿದ ಕಾಲದಲ್ಲಿ
ಇನ್ನೂರು ವರ್ಷಗಳ ಕಾಲ ಅದಕ್ಕೆ ವಿರೋಧವಿತ್ತು.
ಆಮೇಲೆ ಗೋಡೆ ಅವಿರೋಧ ನಿಂತಿತು.

೪.

ರೈಲು ಬಳಕೆಗೆ ಬಂದ ಹೊಸದರಲ್ಲಿ
ಕುದುರೆಗಾಡಿಯ ಮಾಲಿಕರು ಅದರ ಬಗ್ಗೆ ಕೀಳಾಗಿ ಮಾತಾಡುತ್ತಿದ್ದರು.
ರೈಲಿಗೆ ಬಾಲವಿಲ್ಲ, ಅದು ಹುರುಳಿ ತಿನ್ನುವುದಿಲ್ಲ.

ಒಳಗೆ ಕೂತು ನಿಧಾನವಾಗಿ ಪ್ರಕೃತಿಸೌಂದರ್ಯ ನೋಡಲಾಗುವುದಿಲ್ಲ
ಅಲ್ಲದೆ ರೈಲು ಲದ್ದಿಹಾಕುವುದನ್ನು ಯಾರು ತಾನೆ ಕಂಡಿದ್ದಾರೆ?
ಅಂತಹ ಜನ ಹೆಚ್ಚು ಚೆನ್ನಾಗಿ ಮಾತಾಡಿದಷ್ಟೂ
ಹೆಚ್ಚು ಉತ್ತಮ ವಾಕ್ಪಟುಗಳಾದರು.

೫.
ಕಾಯಿದೆಕಾನೂನುಗಳ ವಿರುದ್ಧ ಹೋರಾಡುತ್ತ
ಗೊಣಗಾಡುವವರಿಗೆ ಹೀಗೆ ಮಾಡಬೇಕು :
ಕಾರಣಗಳನ್ನು ಮುಂದಿಡಬಾರದು
ಅದು ಅವರಿಗೆ ಮಂದಟ್ಟಾಗುವುದಿಲ್ಲ
ಬದಲು ಅವರ ಚಿತ್ರ ತೆಗೆಯುವುದು ವಾಸಿ.
ಅವರೊಂದಿಗೆ ಚತುರವಾಗಿಯೊ, ಜಟಿಲವಾಗಿಯೊ ಮಾತಾಡಬಾರದು.
ದಕ್ಷಿಣ ಜರ್ಮನಿಯ ನನ್ನ ಮಿತ್ರರು ಕೆಲವರು ಅವರೊಂದಿಗೆ ಮಾತಾಡಬೇಕು :
ಅರ್ಥವಿಲ್ಲದ ಆರ್ಭಟದಿಂದಲ್ಲ
ಜೋರಾದ ಬುರುಡೆ ಮಾತಿಂದಲ್ಲ
ಬದಲು
ಸ್ಪಷ್ಟವಾಗಿ.

೧೯೨೫

೧೨. ಒಬ್ಬ ರಂಗಕರ್ಮಿ ಕಮ್ಯುನಿಸ್ಟನಿಗೆ

ಕೋಟಿನ ಗುಂಡಿತೂತಲ್ಲೊಂದು ಹೂ ಸಿಕ್ಕಿಸಿ
ಕುರ್ಫುರ್ಸ್ಟೆನ್‌ಡಾಮ್ ಮಹಾಮಾರ್ಗದಲ್ಲಿ ಹೊರಟ
ಈ ಯುವಕನಿಗೆ ಜಗತ್ತು
ಶೂನ್ಯವೆನಿಸುತ್ತದೆ.
ಕಕ್ಕಸ್ಸಿನಲ್ಲಿ ಕೂತಾಗ
ಅದು ಸ್ಪಷ್ಟವಾಗುತ್ತದೆ :
ಅವನು ಶೂನ್ಯದಲ್ಲಿ ಹೇಲುತ್ತಿದ್ದಾನೆ.

ಅವರಪ್ಪ ಮಾಡಿದ್ದಕ್ಕೆಲ್ಲ
ಬೇಸತ್ತು
ಅವನು ಕೆಫೆಗಳನ್ನು ಹೊಲಸೆಬ್ಬಿಸುತ್ತಾನೆ
ದಿನಪತ್ರಿಕೆಗಳ ಹಿಂದಿನಿಂದ ನಸುನಗುತ್ತಾನೆ.
ಅದು ಅವನೇ,
ಈ ಜಗತ್ತನ್ನು ತುಳಿದುಹಾಕುವವನು
ತೊಪ್ಪೆಗುಂಡಿಯನ್ನು ತುಳಿದಂತೆ.

ತಿಂಗಳಿಗೆ ಮೂರು ಸಾವಿರ ಮಾರ್ಕು ಕೊಟ್ಟರೆ
ಜನತೆಯ ದುಃಖಕಷ್ಟಗಳನ್ನು
ರಂಗಕ್ಕೆ ತರಲು ಅವನು ಸಿದ್ಧ
ದಿನಕ್ಕೆ ಮೂರು ಮಾರ್ಕಾದರೆ
ಜಗತ್ತಿನ ಅನ್ಯಾಯಗಳನ್ನು
ಆಡಿಸಿ ತೋರಿಸುತ್ತಾನೆ.

೧೯೨೫?

೧೩. ಇದು ಅಲೆಕ್ಸಾಂಡರನ ವಿರುದ್ಧ ಹೇಳಿದ ಮಾತಲ್ಲ

ನಾನು ಕೇಳಿದ್ದೇನೆ
ತೈಮೂರ್ ಇಡೀ ಜಗತ್ತನ್ನು ಜಯಿಸುವ ತೊಂದರೆ ತೊಗೊಂಡನಂತೆ
ಅವನನ್ನು ನಾನು ಅರ್ಥಮಾಡಿಕೊಳ್ಳಲಾರೆ :
ಜಗತ್ತನ್ನು ಮರೆಯಲು ಕೊಂಚವೇ ಕೊಂಚ ಮದ್ಯ ಸಾಕು.
ಇದು ಅಲೆಕ್ಸಾಂಡರನ ವಿರುದ್ಧ ಹೇಳಿದ ಮಾತಲ್ಲ.
ಆದರೆ ಇಷ್ಟೇ
ನಾನು ಇನ್ನೂ ಹೆಚ್ಚು ವಿಲಕ್ಷಣ ವ್ಯಕ್ತಿಗಳನ್ನು ಕಂಡಿದ್ದೇನೆ –
ಹೇಗೋ ಬದುಕಿದವರು
ಎಂಬ ಕಾರಣದಿಂದಲೇ
ನಿಮ್ಮ ಮೆಚ್ಚಿಗೆ ಗಳಿಸುವ ಯೋಗ್ಯತೆಯಿದ್ದವರು
ದೊಡ್ಡಮನುಷ್ಯರು ಸುಮ್ಮನೆ ಬೆವರು ಸುರಿಸುತ್ತಾರೆ.
ಇದರಲ್ಲಿ ನನಗೊಂದು ಪ್ರಮಾಣ ದೊರೆಯುತ್ತದೆ
ಸಿಗರೇಟು ಚುಟ್ಟ ಸೇದುತ್ತಲೊ
ಮದ್ಯ ಕುಡಿಯುತ್ತಲೊ
ಅಂಥದೇ ಮತ್ತೇನಾದರೂ ಮಾಡುತ್ತಲೊ
ತಮ್ಮಷ್ಟಕ್ಕೆ ತಾವು ಬದುಕಲಾರರು ಆ ಮಂದಿ.
ಅವರೆಷ್ಟು ದಯಾರ್ಹರೆಂದರೆ
ತೃಪ್ತಿ ಕಂಡುಕೊಳ್ಳಲು
ಬರಿಯ ಹೆಣ್ಣಿನ ಸಂಗ ಸಾಲದು ಅವರಿಗೆ.

೧೯೨೭?

ನಗರವಾಸಿಗಳಿಗೆ ಪಾಠವಾಗಿ ಬರೆದ ಕವಿತೆಗಳು

೧೪. ಹೆಜ್ಜೆಗುರುತನ್ನು ಅಳಿಸಿಹಾಕು!

ನಿಲ್ದಾಣದಲ್ಲಿ ನಿನ್ನ ಸಂಗಾತಿಗಳಿಂದ ಬೇರೆಯಾಗು
ಬೆಳಗಿನ ಹೊತ್ತು ಮುಚ್ಚುಕೋಟು ತೊಟ್ಟು ನಗರವನ್ನು ಪ್ರವೇಶಿಸು
ಒಂದು ನೆಲೆ ಹಿಡಿ. ನಿನ್ನ ಸಂಗಾತಿಗಳು ಬಂದು ಬಾಗಿಲುಬಡಿದರೆ :
ಉಹ್ಞೂ, ಬೇಡ, ಬಾಗಿಲು ತೆಗೆಯಬೇಡ
ಬದಲು
ನಿನ್ನ ಹೆಜ್ಜೆಗುರುತನ್ನು ಅಳಿಸಿಹಾಕು!

ಹಾಂಬುರ್ಗ್ ಅಥವಾ ಬೇರೆ ಯಾವುದಾದರೂ ನಗರದಲ್ಲಿ ನಿನ್ನ ತಂದೆತಾಯಿಗಳು
ಎದುರಾದರೆ
ಅವರು ಯಾರೋ ತಿಳಿಯದವರೆಂಬಂತೆ ಮುನ್ನಡೆದು ಮೂಲೆ ತಿರುಗಿಕೊ, ಅವರನ್ನು
ಗುರುತಿಸಬೇಡ
ಅವರೇ ತೆಗೆಸಿಕೊಟ್ಟ ಹ್ಯಾಟನ್ನು ಮುಖದ ಮೇಲೆಳೆದುಕೊ
ಉಹ್ಞೂ, ಬೇಡ, ನಿನ್ನ ಮುಖ ತೋರಿಸಬೇಡ
ಬದಲು
ನಿನ್ನ ಹೆಜ್ಜೆಗುರುತನ್ನು ಅಳಿಸಿಹಾಕು!

ಸಿಕ್ಕಿದ್ದನ್ನು ಉಣ್ಣು! ಉಳಿಸಬೇಡ!
ಮಳೆ ಬಂದಾಗ ಯಾವ ಮನೆಯೆಂದರೆ ಆ ಮನೆಗೆ ನುಗ್ಗು, ಯಾವ ಕುರ್ಚಿಯೆಂದರೆ
ಆ ಕುರ್ಚಿಯ ಮೇಲೆ ಕೂತುಕೊ
ಆದರೆ ಕೂತೇ ಇರಬೇಡ! ಹೊರಟುಬರುವಾಗ ನಿನ್ನ ಹ್ಯಾಟನ್ನು ಮರೆಯಬೇಡ!
ಹೇಳುತ್ತೇನೆ ಕೇಳು :
ನಿನ್ನ ಹೆಜ್ಜೆಗುರುತನ್ನು ಅಳಿಸಿಹಾಕು!

ಏನೇ ಆಡು, ಆಡಿದ್ದನ್ನು ಮತ್ತೆ ಆಡಬೇಡ
ನಿನ್ನ ವಿಚಾರಗಳು ಬೇರೆ ಯಾರಲ್ಲಾದರೂ ಇರುವುದು ಕಂಡರೆ ಅವು ನಿನ್ನದಲ್ಲವೆನ್ನು
ತನ್ನ ಸಹಿಯನ್ನು ಎಲ್ಲೂ ಹಾಕದವನು, ತನ್ನ ಚಿತ್ರವನ್ನು ಹಿಂದೆ ಬಿಟ್ಟಿಲ್ಲದವನು
ಅಲ್ಲಿ ಇದ್ದವನಲ್ಲದವನು, ಏನನ್ನೂ ಆಡದಿದ್ದವನು

ಅವನನ್ನು ಹೇಗೆ ಹಿಡಿಯುತ್ತಾರೆ!
ನಿನ್ನ ಹೆಜ್ಜೆಗುರುತನ್ನು ಅಳಿಸಿಹಾಕು!

ಸಾಯುವ ಯೋಚನೆ ಮಾಡುವಾಗ
ಗೋರಿಗಲ್ಲಿನ ಆಸೆ ಬಿಡು, ಅದು ನಿನ್ನ ಹೂತ ಸ್ಥಳವನ್ನು ಬಯಲು ಮಾಡುತ್ತದೆ
ಅದರ ಮೇಲಿನ ಸ್ಪಷ್ಟಬರೆಹ ನಿನ್ನ ಬಗ್ಗೆ ವರದಿ ಮಾಡುತ್ತದೆ
ಅಲ್ಲಿನ ನಿನ್ನ ಸಾವಿನ ತಾರೀಕು ನಿನ್ನನ್ನು ವಿಚಾರಣೆಗೆ ಗುರಿಪಡಿಸುತ್ತದೆ!
ಮತ್ತೊಮ್ಮೆ ನಿನ್ನ ಹೆಜ್ಜೆಗುರುತನ್ನು ಅಳಿಸಿಹಾಕು!

(ಇದು ಅವರು ನನಗೆ ಕಲಿಸಿದ ಪಾಠ.)

೧೯೭೬–೭೭

೧೫. ಐದನೆ ಚಕ್ರದ ಬಗ್ಗೆ

ನೀನು ಐದನೆ ಚಕ್ರವೆಂದು ಅರಿವಾಗಿ
ನಿನ್ನ ಆಸೆ ಹಾರಿಹೋಗುವ ಹೊತ್ತು
ನಾವು ನಿನ್ನೊಡನಿದ್ದೇವೆ.
ಆದರೆ ನಮಗೆ
ಅದಿನ್ನೂ ಅರಿವಾಗಿಲ್ಲ.

ನೀನು ಬೇಗ ಬೇಗ ಮಾತಾಡುತ್ತಿರುವುದು
ಎದ್ದುಹೋಗಲು ನೆರವಾಗುವ
ಸೂಕ್ತಪದವೊಂದಕ್ಕೆ ತಡಕುತ್ತಿರುವುದು
ನಮಗೆ ಗೊತ್ತಾಗುತ್ತದೆ
ಏಕೆಂದರೆ ಗಮನ ಸೆಳೆಯದಿರುವುದು
ನಿನ್ನ ಉದ್ದೇಶ.

ಮಾತಿನ ನಡುವೆ ಏಳುತ್ತಿ
ನಾನು ಹೋಗಬೇಕು ಎಂದು ಸಿಡುಕಿ ಹೇಳುತ್ತಿ.

ನಾವನ್ನುತ್ತೇವೆ : ತಾಳು
ನಮಗೆ ಅರಿವಾಗುತ್ತದೆ ನೀನು ಐದನೆ ಚಕ್ರವೆಂದು
ಎದ್ದವನು ಕೂರುತ್ತಿ.

ನೀನು ಐದನೆ ಚಕ್ರವೆಂದು ನಮಗೆ ಅರಿವಾಗುವ ಹೊತ್ತು
ನೀನು ನಮ್ಮೊಡನೆ ಕೂತೇ ಇದ್ದಿ
ಆದರೆ ನಿನಗೆ
ಅದಿನ್ನೂ ಅರಿವಾಗಿಲ್ಲ.

ನಿನಗೆ ಹೇಳಬೇಕಾಗುತ್ತೆ : ನೀನು
ಐದನೆ ಚಕ್ರವೆಂದು
ನಾನು, ಇದನ್ನು ನಿನಗೆ ಹೇಳುವ ನಾನು,
ಕೇಡಿಗನೆಂದುಕೊಳ್ಳಬೇಡ
ಮಚ್ಚಿಗೆ ಕೈಹಾಕಬೇಡ, ಬದಲು ಕೈಹಾಕು
ಲೋಟ ನೀರಿಗೆ.

ನಾ ಬಲ್ಲೆ : ನಿನಗೆ ಈಗೇನೂ ಕೇಳಿಸುತ್ತಿಲ್ಲ
ಆದರೆ
ಜಗತ್ತು ಕೆಟ್ಟದೆಂದು ಜೋರಾಗಿ ಹೇಳಬೇಡ
ಮೆಲ್ಲಗೆ ಹೇಳು.

ಏಕೆಂದರೆ ನಾಲ್ಕು ಚಕ್ರ ಜಾಸ್ತಿಯಲ್ಲ
ಆದರೆ ಆ ಐದನೆಯದಿದೆಯಲ್ಲ, ಅದು.
ಅಲ್ಲದೆ ಜಗತ್ತು ಕೆಟ್ಟದ್ದೇನಲ್ಲ
ಆದರೆ
ಅದು ಕಿಕ್ಕಿರಿ ತುಂಬಿದೆ.

(ಹೀಗೆ ಹೇಳಿದ್ದನ್ನು ನೀನಾಗಲೇ ಕೇಳಿದ್ದಿ.)

೧೯೨೬

೧೬. ನಗರಗಳನ್ನು ಕುರಿತು

ಅವುಗಳ ಕೆಳಗಿರುವುದು ಬಚ್ಚಲ ಹೊಲಸು
ಒಳಗೆಲ್ಲ ಬರಿದು, ಮೇಲೆಲ್ಲ ಹೊಗೆ
ನಾವು ಅಲ್ಲಿದ್ದೇವೆ. ನಮಗೆ ಜತೆಗಾರರಿಲ್ಲ.
ನಾವು ಬೇಗನೆ ನಿರ್ನಾಮವಾಗುತ್ತೇವೆ, ನಿಧಾನವಾಗಿ ಅವು ಸಹ.

೧೯೨೭

೧೭. ಋತು ವಸಂತವನ್ನು ಕುರಿತು

ಎಣ್ಣೆ, ಕಬ್ಬಿಣ, ಅಮೋನಿಯಾಗಳಿಗೆ
ನಾವು ಮುತ್ತಿಗೆಹಾಕುವ ಎಷ್ಟೋ ಹಿಂದೆ
ಪ್ರತಿವರ್ಷವೂ
ಮರಗಳ ಮೇಲೆ ಅಡೆತಡೆಯಿಲ್ಲದೆ ಹುಚ್ಚಾಗಿ ಹಸಿರೊಡೆಯುವ ಕಾಲವೊಂದಿತ್ತು.
ನಮಗೆಲ್ಲ ನೆನಪಿದೆ :
ನಿಶ್ಚಿತವಾಗಿ ಬರುತ್ತಿದ್ದ ವಸಂತಋತು
ಅದರ ಸುದೀರ್ಘ ದಿನಗಳು
ಪ್ರಕಾಶಮಾನವಾದ ಆಕಾಶ
ಗಾಳಿಯಲ್ಲಿನ ಆಪ್ಯಾಯಮಾನ ಬದಲಾವಣೆ.
ಆ ಸುವಿಖ್ಯಾತ ಋತುವಿನ ಬಗ್ಗೆ
ಈಗಲೂ ಪುಸ್ತಕಗಳಲ್ಲಿ ಓದುತ್ತೇವೆ.
ಆದರೂ ಈಗ್ಗೆ ಬಹಳ ಕಾಲದಿಂದ
ನಗರಗಳ ಮೇಲೆ
ನಾವು ಹಾಡಿಹೊಗಳುವ ಹಕ್ಕಿಹಿಂಡನ್ನು ಯಾರೂ ಕಂಡಿಲ್ಲ.
ಹೆಚ್ಚೆಂದರೆ ವಸಂತ ಕಾಣಿಸುವುದು
ರೈಲುಗಾಡಿಗಳಲ್ಲಿ ಓಡಾಡುವವರ ಕಣ್ಣಿಗೆ ಮಾತ್ರ.
ಬಯಲುಪ್ರದೇಶಗಳಲ್ಲಿ
ಅದಕ್ಕಿನ್ನೂ ಹಿಂದಿನ ಸುಸ್ಪಷ್ಟತೆಯಿದೆ.
ಇಲ್ಲಿ ತೀರಾ ಎತ್ತರದಲ್ಲಿ ಬಿರುಗಾಳಿ
ಬೀಸುತ್ತಿರುತ್ತದೆಂದು ಎಲ್ಲರಿಗೂ ತಿಳಿದದ್ದೇ :
ಅದು ಮುಟ್ಟುವುದು ಏನಿದ್ದರೂ
ನಮ್ಮ ಆ್ಯಂಟೀನಾಗಳನ್ನಷ್ಟೇ.

೧೯೨೮

೧೮. ಒಂದು ರಾತ್ರಿಯ ತಾಣ

ನ್ಯೂಯಾರ್ಕಿನಲ್ಲಿ, ಬ್ರಾಡ್‌ವೇ ಮತ್ತು ಇಪ್ಪತ್ತಾರನೆ ರಸ್ತೆಗಳು ಕೂಡುವ ಮೂಲೆ
ಒಬ್ಬ ಮನುಷ್ಯ ಚಳಿಗಾಲದಲ್ಲಿ ಪ್ರತಿದಿನ ಸಂಜೆ ಅಲ್ಲಿ ನಿಂತು
ಹೋಗಿಬರುವವರನ್ನು ಮನೆಮಠವಿಲ್ಲದವರಿಗೆ
ಒಂದು ರಾತ್ರಿಯ ತಾಣದ ವ್ಯವಸ್ಥೆಗೆ ಸಹಾಯಮಾಡಿ ಎಂದು
ಬೇಡುತ್ತಾನೆಂದು ಕೇಳಿದ್ದೇನೆ.

ಅದರಿಂದ ಜಗತ್ತು ಬದಲಾಗುವುದಿಲ್ಲ
ಮನುಷ್ಯ–ಮನುಷ್ಯರ ನಡುವಿನ ಸಂಬಂಧ ಸುಧಾರಿಸುವುದಿಲ್ಲ
ಸುಲಿಗೆಯ ಯುಗ ಕೊನೆಗೊಳ್ಳುವುದಿಲ್ಲ
ಆದರೆ ಕೆಲವರಿಗೆ ರಾತ್ರಿಯ ತಾಣ ದೊರೆಯುತ್ತದೆ
ಅವರಿಂದ ಒಂದು ರಾತ್ರಿಯ ಕಾಲ ಚಳಿಗಾಳಿ ದೂರವುಳಿಯುತ್ತದೆ
ಅವರ ಪಾಲಿನ ಹಿಮ ರಸ್ತೆಗೆ ಬೀಳುತ್ತದೆ.

ಅಯ್ಯಾ, ಓದುಗ ಮಹಾಶಯ, ಇದನ್ನೋದಿ ಈ ಪುಸ್ತಕವನ್ನು ಕೆಳಗಿಡಬೇಡ.

ಕೆಲವರಿಗೆ ರಾತ್ರಿಯ ತಾಣ ದೊರೆಯುತ್ತದೆ
ಅವರಿಂದ ಒಂದು ರಾತ್ರಿಯ ಚಳಿಗಾಳಿ ದೂರವುಳಿಯುತ್ತದೆ
ಅವರ ಪಾಲಿನ ಹಿಮ ರಸ್ತೆಗೆ ಬೀಳುತ್ತದೆ
ಆದರೆ ಅದರಿಂದ ಜಗತ್ತು ಬದಲಾಗುವುದಿಲ್ಲ
ಮನುಷ್ಯ–ಮನುಷ್ಯರ ನಡುವಿನ ಸಂಬಂಧ ಸುಧಾರಿಸುವುದಿಲ್ಲ
ಸುಲಿಗೆಯ ಯುಗ ಕೊನೆಗೊಳ್ಳುವುದಿಲ್ಲ.

೧೯೩೧?

೧೯. ರೈತನಿಗೆ ತನ್ನ ಹೊಲದ್ದೇ ಚಿಂತೆ

ರೈತನಿಗೆ ತನ್ನ ಹೊಲದ್ದೇ ಚಿಂತೆ
ಅವನು ದನಕರುಗಳನ್ನು ಸಾಕುತ್ತಾನೆ, ಕಂದಾಯ ಕಟ್ಟುತ್ತಾನೆ
ಕೂಲಿಯ ದುಡ್ಡುಳಿಸಲೆಂದು ಮಕ್ಕಳು ಮಾಡುತ್ತಾನೆ
ಅವನ ಬದುಕು ನಿಂತಿರುವುದು ಹಾಲಿನ ಧಾರಣೆಯ ಮೇಲೆ.
ಪಟ್ಟಣದ ಮಂದಿ ರೈತಜನರ ಮಣ್ಣಿನ ಮೋಹದ ಬಗ್ಗೆ,
ಅವರ ಯೋಗಕ್ಷೇಮದ ಬಗ್ಗೆ ಮಾತಾಡುತ್ತಾರೆ
ಅವರೇ ದೇಶದ ಅಸ್ತಿಭಾರವೆನ್ನುತ್ತಾರೆ.

ಪಟ್ಟಣದ ಮಂದಿ ರೈತಜನರ ಮಣ್ಣಿನ ಮೋಹದ ಬಗ್ಗೆ,
ಅವರ ಯೋಗಕ್ಷೇಮದ ಬಗ್ಗೆ ಮಾತಾಡುತ್ತಾರೆ
ಅವರೇ ದೇಶದ ಅಸ್ತಿಭಾರವೆನ್ನುತ್ತಾರೆ.
ರೈತನಿಗೆ ತನ್ನ ಹೊಲದ್ದೇ ಚಿಂತೆ
ಅವನು ದನಕರುಗಳನ್ನು ಸಾಕುತ್ತಾನೆ, ಕಂದಾಯ ಕಟ್ಟುತ್ತಾನೆ
ಕೂಲಿಯ ದುಡ್ಡುಳಿಸಲೆಂದು ಮಕ್ಕಳು ಮಾಡುತ್ತಾನೆ
ಅವನ ಬದುಕು ನಿಂತಿರುವುದು ಹಾಲಿನ ಧಾರಣೆಯ ಮೇಲೆ.

೧೯೩೩



೩. ದೇಶಾಂತರವಾಸದ ಕವಿತೆಗಳು
(೧೯೩೩–೪೮)

೨೦. ಅಜ್ಞಾತ ಕ್ರಾಂತಿಯೋಧನೊಬ್ಬನ ಗೋರಿಗಲ್ಲು

ಅಜ್ಞಾತ ಕ್ರಾಂತಿಯೋಧನೊಬ್ಬ ನೆಲಕ್ಕುರುಳಿದ್ದಾನೆ
ಕನಸಿನಲ್ಲಿ ನಾನವನ ಗೋರಿಗಲ್ಲನ್ನು ಕಂಡೆ.

ಅದು ಒಂದು ಜವುಗುನೆಲದಲ್ಲಿ ಬಿದ್ದಿತ್ತು, ಕಗ್ಗಲ್ಲು ಎರಡಾಗಿ ಒಡೆದು.
ಅದರ ಮೇಲೆ ಯಾವ ನೆನೆಮಾತನ್ನೂ ಕೆತ್ತಿರಲಿಲ್ಲ.
ಆದರೆ ಆ ಎರಡರಲ್ಲೊಂದು ಹೀಗೆ ಹೇಳಿದ್ದು ಕೇಳಿಸಿತು :

ಇಲ್ಲಿ ಬಿದ್ದವನು ವೀರಹೆಜ್ಜೆಹಾಕಿ ಮುನ್ನಡೆದಿದ್ದ
ಯಾವ ಪರದೇಶವನ್ನೂ ಗೆಲ್ಲಲೆಂದಲ್ಲ, ಬದಲು ತನ್ನದನ್ನೇ.
ಅವನ ಹೆಸರೇನೆಂದು ಯಾರೂ ಅರಿಯರು.
ಆದರೆ ಇತಿಹಾಸಗ್ರಂಥಗಳು ಹೇಳುವುದು
ಅವನನ್ನು ಹೊಡೆದು ಕೊಂದವರ ಹೆಸರುಗಳನ್ನು.

ಮಾನವನಂತೆ ಅವನು ಬದುಕಬಯಸಿದ್ದ
ಎಂತಲೇ ಕಾಡುಮೃಗವೆಂಬಂತೆ ಅವನನ್ನವರು ಹೊಡೆದುಹಾಕಿದ್ದರು.

ಅವನ ಕೊನೆಮಾತುಗಳು ಉಸಿರುಮಾತುಗಳು
ಏಕೆಂದರೆ ಅವು ಹೊರಟಿದ್ದು ಅವನ ಹಿಸುಕಿದ ಕೊರಳಿನಿಂದ

ಆದರೆ ಥಂಡಿಗಾಳಿ ಆ ಮಾತುಗಳನ್ನು ಎಲ್ಲೆಡೆಗೂ
ಚಳಿಗೆ ಮೈ ಮರಗಟ್ಟಿಹೋದವರವರೆಗೂ ಬೀಸಿ ತಂದಿತ್ತು.

೧೯೩೫

೨೧. ಓದು ಬಲ್ಲ ದುಡಿಮೆಗಾರನೊಬ್ಬನ ಪ್ರಶ್ನೆಗಳು

ಸಪ್ತದ್ವಾರಗಳ ಥೀಬ್ಸ್ ನಗರವನ್ನು ಯಾರು ಕಟ್ಟಿದರು?
ಪುಸ್ತಕಗಳು ರಾಜಮಹಾರಾಜರುಗಳ ಹೆಸರನ್ನು ಹೇಳುತ್ತವೆ.
ಏನು, ರಾಜಮಹಾರಾಜರು ಕಲ್ಲು ಹೊತ್ತರೆ?
ಬೇಬಿಲಾನ್ ನಗರ ಎಷ್ಟೊಂದು ಸಲ ನೆಲಸಮವಾಯಿತು
ಅಷ್ಟು ಸಲವೂ ಅದನ್ನು ಯಾರು ಮತ್ತೆ ಮತ್ತೆ ಕಟ್ಟಿದರು?
ಸ್ವರ್ಣೋಜ್ವಲ ಲೀಮಾ ನಗರದಲ್ಲಿ ಕಲ್ಲುಕುಟಿಗರು ವಾಸಿಸುತ್ತಿದ್ದುದಾದರೂ ಎಲ್ಲಿ?
ಚೀನಾದ ದೊಡ್ಡಗೋಡೆಯನ್ನು ಕಟ್ಟಿ ಮುಗಿಸಿದ ಸಂಜೆ ಅದನ್ನು ಕಟ್ಟಿದವರು ಎಲ್ಲಿ ಹೋದರು?
ಮಹಾನಗರ ರೋಮ್ ವಿಜಯತೋರಣಗಳಿಂದ ತುಂಬಿದೆ.
ಅವನ್ನು ಯಾರು ನಿಲ್ಲಿಸಿದರು? ಯಾರ ಮೇಲೆ ಸೀಸರರು ವಿಜಯ ಸ್ಥಾಪಿಸಿದರು?
ಹಾಡಿ ಹೊಗಳಿಸಿಕೊಂಡ ಬೈಜ್ಯಾಂಟಿಯಮ್‌ನಲ್ಲಿ ಆವಾಸಿಗಳಿಗೆಲ್ಲ ಅರಮನೆಗಳೇ ಇದ್ದವೆ?
ದಂತಕತೆಗಳ ಅಟ್ಲಾಂಟಿಸ್ ಭೂಖಂಡದಲ್ಲಿ ಸಹ
ಅದು ಮಹಾಸಾಗರದಲ್ಲಿ ಮುಳುಗಿಹೋದ ರಾತ್ರಿ
ಮುಳುಗುತ್ತಿದ್ದವರು ಅವರವರ ಗುಲಾಮರನ್ನು ಅರಚಿ ಕರೆಯುತ್ತಿದ್ದರು.

ಯುವ ಅಲೆಕ್ಸಾಂಡರ್ ಭಾರತವನ್ನು ಗೆದ್ದ.
ಏನು, ಒಂಟಿಯಾಗಿಯೆ?
ಸೀಸರ್ ಗಾಲ್ ಜನರನ್ನು ಸೋಲಿಸಿದ.
ಆಗ ಅವನೊಂದಿಗೆ ಒಬ್ಬ ಅಡಿಗೆಭಟ್ಟ ಸಹ ಇರಲಿಲ್ಲವೆ?
ಸ್ಪೇನಿನ ಫಿಲಿಪ್ ತನ್ನ ನೌಕಾದಳ ಮುಳುಗಿಹೋದಾಗ ಬಿಕ್ಕಿಬಿಕ್ಕಿ ಅತ್ತ.
ಏನು, ಅತ್ತವನು ಅವನೊಬ್ಬನೇಯೆ?
ಎರಡನೆ ಫ್ರೆಡರಿಕ್ ಏಳುವರ್ಷಗಳ ಯುದ್ಧದಲ್ಲಿ ಗೆದ್ದ.
ಅವನಲ್ಲದೆ ಮತ್ತೆ ಯಾರು ಗೆದ್ದರು?

ಒಂದೊಂದು ಪುಟದಲ್ಲೂ ಒಂದೊಂದು ವಿಜಯವಿದೆ.
ವಿಜಯಭೋಜವನ್ನು ಯಾರು ಅಟ್ಟಿ ಬಡಿಸಿದರು?
ಪ್ರತಿ ಹತ್ತುವರ್ಷಕ್ಕೊಬ್ಬ ಮಹಾಪುರುಷ.
ಅವನ ಖರ್ಚನ್ನು ಯಾರು ತೆತ್ತರು?

ಎಷ್ಟೊಂದು ಸಂಗತಿಗಳು.
ಎಷ್ಟೊಂದು ಪ್ರಶ್ನೆಗಳು.

೧೯೬೫

೨೨. ದುಷ್ಕೃತ್ಯಗಳ ಸುರಿಮಳೆಯಾದಾಗ

ಯಾವನೊ ಕೆಲಸದ ವೇಳೆ ಮುಗಿದ ಮೇಲೆ ತುರ್ತಿನ ಪತ್ರವೊಂದನ್ನು ತಲಪಿಸಲು ತಂದಂತೆ : ಆಫೀಸಾಗಲೇ ಮುಚ್ಚಿದೆ.
ಯಾವನೊ ನುಗ್ಗಿಬರಲಿರುವ ಪ್ರವಾಹದ ಬಗ್ಗೆ ಊರಿಗೆ ಎಚ್ಚರಿಕೆ ಕೊಡಬಯಸಿದಂತೆ : ಆದರೆ ಅವನು ಮಾತಾಡುವುದು ಬೇರೆ ಯಾವದೊ ಭಾಷೆಯಲ್ಲಿ, ಜನಕ್ಕೆ ಅವನು ಹೇಳಿದ್ದು ತಿಳಿಯುವುದಿಲ್ಲ.
ಯಾವನೊ ತಿರುಕ ನಾಲ್ಕು ಸಲ ಕವಳ ಗಿಟ್ಟಿಸಿದ ಮೇಲೂ ಐದನೆ ಬಾರಿಗೆ ಬಾಗಿಲು ತಟ್ಟಿದಂತೆ : ಐದನೆ ಬಾರಿ ಅವನಿಗೆ ನಿಜಕ್ಕೂ ಹಸಿವಾಗಿದೆ.
ಯಾವನೊ ಗಾಯಗೊಂಡು ರಕ್ತಸುರಿಸುತ್ತಿರುವವನು ಡಾಕ್ಟರಿಗೆ ಕಾಯುತ್ತ ಕೂತಂತೆ : ರಕ್ತ ಸುರಿಯುತ್ತಲೇ ಹೋಗುತ್ತದೆ.

ನಾವು ನಮಗೆ ಸಂಭವಿಸಿದ ದುಷ್ಕೃತ್ಯಗಳನ್ನು ವರದಿ ಮಾಡಲು ಮುಂದಾಗುವುದು ಹೀಗೆಯೇ.

ಮೊದಲನೆ ಬಾರಿ ನಮ್ಮ ಸ್ನೇಹಿತರಲ್ಲಿ ಒಬ್ಬೊಬ್ಬರನ್ನಾಗಿ ಕೊಲ್ಲುತ್ತಿದ್ದಾರೆಂದು ವರದಿಯಾದಾಗ ಭೀಷಣವಾಗಿ ಕೂಗೆದ್ದಿತು. ಆಮೇಲೆ ನೂರು ಜನರ ಕೊಲೆ ಯಾಯಿತು. ಆದರೆ ಸಾವಿರ ಜನರ ಕೊಲೆಯಾಗಿ, ಕೊಲೆಗೆ ಕೊನೆಯಿಲ್ಲವೆಂದು ಕಂಡಾಗ ಮೌನ ಹರಡಿತು.

ದುಷ್ಕೃತ್ಯಗಳ ಸುರಿಮಳೆಯಾದಾಗ 'ಸಾಕು, ನಿಲ್ಲಿಸಿ' ಎಂದು ಕೂಗುವವರಿಲ್ಲ.

ಅಪರಾಧಗಳ ಗುಡ್ಡೆ ಬೆಳೆದಂತೆ ಅವು ಕಾಣಿಸದೆ ಹೋಗುತ್ತವೆ. ದುಃಖಕಷ್ಟಗಳು ಅಸಹನೀಯವಾದಾಗ ಚೀತ್ಕಾರ ಕೇಳಿ ಬರುವುದಿಲ್ಲ.
ಚೀತ್ಕಾರ ಸಹ ಬೇಸಿಗೆಯ ಮಳೆಯಂತಾಗಿ ಬಿಡುತ್ತದೆ.

೧೯೩೫

೨೩. ಜರ್ಮನ್ ಗೀತೆ

ಅವರು ಮತ್ತೆ ಮಾತಾಡುತ್ತಿದ್ದಾರೆ, ಮಹಾನದಿಗಳ ಬಗ್ಗೆ
(ಅಳಬೇಡವೆ, ಆನಾ)
ಅಂಗಡಿಯಲ್ಲಿ ಸಾಲ ಹುಟ್ಟುತ್ತದೆ.

ಅವರು ಮತ್ತೆ ಮಾತಾಡುತ್ತಿದ್ದಾರೆ, ಕೀರ್ತಿವೈಭವಗಳ ಬಗ್ಗೆ
(ಅಳಬೇಡವೆ, ಆನಾ)
ಉಗ್ರಾಣದಲ್ಲಿ ಏನೊಂದೂ ಉಳಿದಿಲ್ಲ.

ಅವರು ಮತ್ತೆ ಮಾತಾಡುತ್ತಿದ್ದಾರೆ, ಸಾಲುಸಾಲು ವಿಜಯಗಳ ಬಗ್ಗೆ
(ಅಳಬೇಡನೆ, ಆನಾ)
ಎಂದೆಂದೂ ಅವರು ನನ್ನನ್ನು ಹಿಡಿಯಲಾರರು.

ಆಕ್ರಮಣ ಷುರುವಾಗಿದೆ
(ಅಳಬೇಡವೆ, ಆನಾ)
ನಾನು ವಾಪಸು ಬರುವುದೇ ಆದರೆ
ಅದು ಬೇರೆ ಬಾವುಟಗಳ ಅಡಿ.

೧೯೩೭

೨೪. ಬೀಳ್ಕೊಡಿಗೆ

ನಾವು ಪರಸ್ಪರ ತಬ್ಬಿಕೊಳ್ಳುತ್ತೇವೆ.
ನಾನು ನಿನ್ನ ಮೈಸಿರಿಯನ್ನು ಅಪ್ಪಿ ಹಿಡಿಯುತ್ತೇನೆ
ನೀನೋ ನನ್ನ ದಾರಿದ್ರ್ಯವನ್ನು.
ಅವಸರದ ಅಪ್ಪಿಗೆ
ನೀನು ಔತಣಕ್ಕೆ ಹೊರಟಿದ್ದಿ
ನನಗೋ ಜೀವಗಳ್ಳರು ಹಿಂದೆಬಿದ್ದಿದ್ದಾರೆ.
ನಾವು ಹವಾಮಾನ, ನಮ್ಮ ಶಾಶ್ವತಸ್ನೇಹಗಳನ್ನು ಕುರಿತು ಮಾತಾಡುತ್ತೇವೆ.
ಬೇರೇನನ್ನೇ ಆಡಿದರೂ
ಅದು ಯಾತನೆಯಾಗುತ್ತದೆ.

೧೯೩೭

೨೫. ಕಗ್ಗತ್ತಲಕಾಲದಲ್ಲಿ

ಅವರನ್ನುವುದಿಲ್ಲ : 'ಅಖರೋಟ್‌ಮರ ಗಾಳಿಗೆ ಅಲ್ಲಾಡುತ್ತಿದ್ದಾಗ'
ಬದಲು ಅನ್ನುತ್ತಾರೆ : 'ಮನೆಗೆ ಬಣ್ಣಹೊಡೆಯುವವನು ಕಾರ್ಮಿಕರನ್ನು
ತುಳಿದುಹಾಕುತ್ತಿದ್ದಾಗ'.

ಅವರನ್ನುವುದಿಲ್ಲ : 'ಮಗು ನೀರಿಗೆ ಕಲ್ಲು ಚಿಮ್ಮುತ್ತಿದ್ದಾಗ'
ಬದಲು ಅನ್ನುತ್ತಾರೆ : 'ಮಹಾಯುದ್ಧಗಳ ತಯಾರಿ ನಡೆದಿದ್ದಾಗ'.

ಅವರನ್ನುವುದಿಲ್ಲ : 'ಹೆಣ್ಣು ಕೋಣೆಯೊಳಗೆ ಬಂದಾಗ'
ಬದಲು ಅನ್ನುತ್ತಾರೆ : 'ಕಾರ್ಮಿಕರ ವಿರುದ್ಧ ಮಹಾಶಕ್ತಿಗಳು ಒಟ್ಟಾದಾಗ'.

ಅವರನ್ನುವುದಿಲ್ಲ : 'ಎಂತಹ ಕಗ್ಗತ್ತಲಕಾಲ'
ಬದಲು ಅನ್ನುತ್ತಾರೆ : 'ಅವರ ಕವಿಗಳು ಬಾಯಿಮುಚ್ಚಿಕೊಂಡಿದ್ದರೇಕೆ?'

೧೯೩೭

೨೬. ಸಕಲ ಸೌಕರ್ಯಗಳಿದ್ದ ವಾಹನದಲ್ಲಿ ಪ್ರವಾಸಮಾಡುತ್ತಿದ್ದಾಗ

ಸಕಲ ಸೌಕರ್ಯಗಳಿದ್ದ ವಾಹನದಲ್ಲಿ ಕೂತು
ಹಳ್ಳಿಗಾಡಿನ ಮಳೆಗಾಲದ ರಸ್ತೆಯಲ್ಲಿ ಪ್ರವಾಸಮಾಡುತ್ತಿದ್ದಾಗ
ಒಂದು ಇಳಿಸಂಜೆಯ ವೇಳೆ ಒಬ್ಬ ಚಿಂದಿ ತೊಟ್ಟ ಮನುಷ್ಯ ಕಣ್ಣಿಗೆಬಿದ್ದ
'ನನ್ನನ್ನೂ ಕರಕೊಂಡು ಹೋಗಿ' ಎಂದು ಅವನು ತಲೆಬಾಗಿ ಕೈಬೀಸಿದ.
ಮೇಲೆ ಮುಚ್ಚಿಗೆಯಿತ್ತು, ಒಳಗೆ ಜಾಗವಿತ್ತು, ಆದರೂ ಅವನನ್ನು ಬಿಟ್ಟು ಮುಂದೆ
  ಹೋದೆವು.
'ಇಲ್ಲ, ನಾವು ಯಾರನ್ನೂ ನಮ್ಮ ಜತೆ ಕರಕೊಂಡು ಹೋಗೋಕ್ಕಾಗೊಲ್ಲ' ಎಂದು
ನಾನು ಸಿಡುಕಿ ಹೇಳಿದ್ದು ಎಲ್ಲರಿಗೂ ಕೇಳಿಸಿತು.
ಇದ್ದಕ್ಕಿದ್ದಂತೆ ನಾನೇ ನನ್ನ ಆ ದನಿಗೆ ಬೆಚ್ಚಿಬಿದ್ದಾಗ
ನಾವಾಗಲೇ ತುಂಬ ದೂರ ಹೋಗಿದ್ದೆವು, ಪ್ರಾಯಶಃ ಒಂದು ದಿನದ ಪ್ರಯಾಣದಷ್ಟೇನೊ.
ಇದು ನನ್ನ ವರ್ತನೆ
ಮತ್ತು ಇದು ನಮ್ಮ ಇಡೀ ಪ್ರಪಂಚ.

೧೯೩೬

೨೮. ಮಡಿವಂತ ಪ್ರಧಾನಿಯ ಬಗ್ಗೆ

ಕೇಳಿದ್ದೇನೆ : ಆ ಪ್ರಧಾನಿ ಕುಡಿಯುವುದಿಲ್ಲವಂತೆ
ಮೀನು ಮಾಂಸ ತಿನ್ನುವುದಿಲ್ಲವಂತೆ, ಸಿಗರೇಟು ಚುಟ್ಟ ಸೇದುವುದಿಲ್ಲವಂತೆ
ಅವನಿರುವುದು ಒಂದು ಸಾಧಾರಣ ಮನೆಯಲ್ಲಂತೆ.
ಮತ್ತೆ ಇದನ್ನೂ ಕೇಳಿದ್ದೇನೆ : ಆ ದೇಶದ ಬಡಜನ
ಹೊಟ್ಟೆಗಿಲ್ಲದೆ ಪಾಡು ಪಡುತ್ತಿದ್ದಾರಂತೆ.
ಅದರ ಬದಲು ಹೀಗೆಂದು ಕೇಳುವುದು ಎಷ್ಟು ಮೇಲು :
ಪ್ರಧಾನಿ ಕ್ಯಾಬಿನೆಟ್ ಮೀಟಿಂಗುಗಳಲ್ಲೂ ಕುಡಿದು ಕೂತಿರುತ್ತಾನೆ
ತಜ್ಞರಲ್ಲದ ಕೆಲಮಂದಿ ಕಾಯಿದೆ ಕಾನೂನುಗಳನ್ನು ಬದಲಾಯಿಸುತ್ತಿದ್ದಾರೆ
ಅವನು ಅವರ ಪೈಪಿಂದೇಳುವ ಹೊಗೆಯನ್ನೇ ನೋಡುತ್ತಿರುತ್ತಾನೆ
ಆ ದೇಶದಲ್ಲಿ ಬಡಜನರೇ ಇಲ್ಲ.

೧೯೭೮?

೨೮. ಸಂದೇಹಗ್ರಸ್ತ

ನಮ್ಮ ಯಾವದಾದರೂ ಪ್ರಶ್ನೆಗೆ ಉತ್ತರ ದೊರೆಯಿತು ಎಂದನಿಸಿದಾಗಲೆಲ್ಲ
ನಮ್ಮಲ್ಲೊಬ್ಬರು ಗೋಡೆಯ ಮೇಲೆ ಸುತ್ತಿಟ್ಟಿದ್ದ ಚೀನಾದ ಪುರಾತನ
ಸುರುಳಿಚಿತ್ರದ ಕಟ್ಟು ಬಿಚ್ಚುತ್ತಿದ್ದೆವು.
ಚಿತ್ರ ಇಳಿಬಿದ್ದು, ಅಲ್ಲಿ ಬೆಂಚಿನ ಮೇಲೆ ಕೂತ
ಒಬ್ಬ ವ್ಯಕ್ತಿ ಕಾಣಿಸಿಕೊಳ್ಳುತ್ತಿದ್ದ.

ಅವನನ್ನುತ್ತಿದ್ದ :
ನಾನೊಬ್ಬ ಸಂದೇಹಗ್ರಸ್ತ ಪ್ರಾಣಿ. ನನಗೇನು ಸಂದೇಹವೆಂದರೆ :
ನಿಮ್ಮ ದಿನ ಹಲವಾರನ್ನು ನುಂಗಿಹಾಕಿರುವ ಈ ಕೆಲಸ ಯಶಸ್ವಿಯಾಗಿದೆಯೆ?
ನೀವು ಹೇಳಿದ್ದನ್ನು ಕಡಿಮೆ ಚೆನ್ನಾಗಿ ಹೇಳಿದ್ದರೆ ಆಗಲೂ ಅದು ಯಾರಿಗಾದರೂ ಬೆಲೆಯುಳ್ಳದ್ದಾಗುತ್ತಿತ್ತೆ?
ಹೇಳಿದ್ದನ್ನು ಚೆನ್ನಾಗಿ ಹೇಳಿದ್ದೂ ಪ್ರಾಯಶಃ ಅದರ ತಥ್ಯದ ಬಗ್ಗೆ ನಿಮಗೇ ನಂಬಿಕೆಯಿಲ್ಲದೆ ಹೋಗಿರಬಹುದೆ?
ಅದು ದ್ವಂದ್ವಾರ್ಥದಿಂದ ಕೂಡಿಲ್ಲವೆ? ಹಾಗಿದ್ದಲ್ಲಿ ಅದರಿಂದ ಹುಟ್ಟುವ ಒಂದೊಂದು ಅಪಾರ್ಥಕ್ಕೂ ನೀವೇ ಹೊಣೆ.
ಅಥವಾ ದ್ವಂದ್ವಾರ್ಥದೂರವಾಗಿ, ವಿಷಯಗಳ ನಡುವಣ ವಿರೋಧಗಳೇ ಇಲ್ಲವಾಗಿರಬಹುದು.
ಹಾಗೆ ದ್ವಂದ್ವಾರ್ಥವಿಲ್ಲದೇ ವಿಷಯ ಅತಿ ಸ್ಪಷ್ಟವಾಯಿತೆ ನೋಡಿ. ಹಾಗಿದ್ದಲ್ಲಿ ಅದು ವ್ಯರ್ಥ. ನಿಮ್ಮ ಕೃತಿ ನಿರ್ಜೀವವಾಗುತ್ತದೆ.
ನೀವು ನಿಜವಾಗಿಯೂ ಘಟನಾಲಹರಿಯಲ್ಲಿದ್ದೀರಾ? ಅದರ ಪರಿಣಾಮಗಳಿಗೆಲ್ಲ ಬದ್ಧರಾಗಿರಲು ನಿಮಗೆ ಒಪ್ಪಿಗೆಯೆ?
ನೀವು ಬೆಳೆಯುತ್ತಿದ್ದೀರಾ? ನೀವು ಯಾರು? ನೀವು ಹೇಳುತ್ತಿರುವುದು ಯಾರಿಗಾಗಿ? ಅವರಿಗೆ ನೀವು ಹೇಳಿದ್ದು ಉಪಯೋಗವಾಗುತ್ತದೆಯೇ?
ಅಂದ ಹಾಗೆ, ನೀವು ಹೇಳಿದ ಧಾಟಿ ಸೌಮ್ಯವಾಗಿದೆ ತಾನೆ? ಬೆಳಗಿನ ಹೊತ್ತು ಓದುವಂತಿದೆ ಅಲ್ಲವೆ?
ಪೂರ್ವಲಬ್ಧಿಯೊಂದಿಗೆ ಸಂಬಂಧ ಸ್ಥಾಪಿಸಿದೆಯೆ? ಹಿಂದಿನ ಮಾತುಗಳನ್ನೂ ಬಳಸಿದ್ದೀರಾ? ಅಥವಾ ಕಡೇ ಪಕ್ಷ ಖಂಡಿಸಿದ್ದೀರಾ?
ನೀವು ಹೇಳಿದ್ದೆಲ್ಲವನ್ನೂ ಪ್ರಮಾಣಿಸಿ ನೋಡಬಹುದೆ? ಅನುಭವದೊಂದಿಗೆ? ಯಾವ ಅನುಭವದೊಂದಿಗೆ?

ಎಲ್ಲಕ್ಕಿಂತ ಮೇಲಾಗಿ, ಸದಾ ಎಲ್ಲಕ್ಕಿಂತ ಮೇಲಾಗಿ, ನೀವು ಹೇಳಿದ್ದನ್ನು ನಂಬಿದವನು ಹೇಗೆ ವರ್ತಿಸುತ್ತಾನೆ? ಎಲ್ಲಕ್ಕಿಂತ ಮೇಲಾಗಿ ಅವನು ಹೇಗೆ ವರ್ತಿಸುತ್ತಾನೆ, ಹೇಳಿ?

ಇದನ್ನು ಕೇಳಿ ನಾವು ವಿಚಾರವಶರಾಗಿ ಸುರುಳಿಚಿತ್ರದ ಆ ನೀಲಿಯ ವ್ಯಕ್ತಿಯನ್ನು ಕುತೂಹಲದಿಂದ ನೋಡಿದೆವು.
ನಂತರ ಒಬ್ಬರ ಮುಖವನ್ನೊಬ್ಬರು ನೋಡುತ್ತ
ಮಾಡಿದ ಕೆಲಸವನ್ನು ಮತ್ತೆ ಮೊದಲಿನಿಂದ ಷುರು ಮಾಡಿದೆವು.

೧೯೩೭

ಜರ್ಮನ್ ಯುದ್ಧದ ಬಾಲಬೋಧೆ

೨೯
'ಮನೆಗೆ ಬಣ್ಣ ಹೊಡೆಯುವವನು' ಮುಂಬರುವ ಮಹಾದಿನಗಳನ್ನು ಕುರಿತು ಮಾತಾಡುತ್ತಾನೆ.
ಕಾಡಿನ್ನೂ ಬೆಳೆಯುತ್ತಿದೆ.
ಹೊಲವಿನ್ನೂ ಫಸಲು ಕೊಡುತ್ತಿದೆ.
ಪಟ್ಟಣಗಳಿನ್ನೂ ಇದ್ದೇ ಇವೆ.
ಜನರಿನ್ನೂ ಜೀವಂತರಾಗಿದ್ದಾರೆ.

೩೦
ವೀರಹೆಜ್ಜೆ ಹಾಕಿ ಮುನ್ನಡೆದಾಗ ಅನೇಕರಿಗೆ ತಿಳಿಯದು
ಪಂಕ್ತಿಯ ಮುಂತುದಿಯಲ್ಲಿ ನಡೆದವನು ಅವರ ಶತ್ರುವೆಂದು.
ಅವರಿಗೆ ಆಜ್ಞೆ ನೀಡುವ ಧ್ವನಿ
ಅವರ ಶತ್ರುವಿನದೆಂದು.
'ಶತ್ರು', 'ಶತ್ರು' ಎಂದು ಅರಚುತ್ತಿರುವವನೇ
ಅವರ ಶತ್ರುವೆಂದು.

೩೧
ಮೇಲಿನವರು ಹೇಳುತ್ತಾರೆ : ಶಾಂತಿ ಮತ್ತು ಯುದ್ಧ
ಬೇರೆ ಬೇರೆ ಧಾತುಗಳಿಂದ ಆದವು.
ಆದರೆ ಅವರ ಶಾಂತಿ ಹಾಗೂ ಯುದ್ಧಗಳು
ಗಾಳಿಮಳೆಗಳಿದ್ದಂತೆ.

ತಾಯಿಯ ಹೊಟ್ಟೆಯಲ್ಲಿ ಮಗ ಹುಟ್ಟಿದಂತೆ
ಅವರ ಶಾಂತಿಯಿಂದ ಯುದ್ಧ ಹುಟ್ಟುತ್ತದೆ
ಮಗನಿಗೆ
ತಾಯಿಯ ಘೋರ ಲಕ್ಷಣಗಳೆಲ್ಲ ಇರುತ್ತವೆ.

ಅವರ ಶಾಂತಿಯಲ್ಲಿ
ಉಳಿದುಬಳಿದದ್ದೆಲ್ಲವನ್ನೂ
ಅವರ ಯುದ್ಧ ಮುಗಿಸಿಹಾಕುತ್ತದೆ.

೩೨
ಮೇಲಿನವರು ಹೇಳುತ್ತಾರೆ :
ಇದು ಕೀರ್ತಿವೈಭವಗಳಿಗೆ ದಾರಿ.
ಕೆಳಗಿನವರು ಹೇಳುತ್ತಾರೆ
ಅಲ್ಲ, ಸುಡುಗಾಡಿಗೆ.

೩೩
ಬರಲಿರುವ ಯುದ್ಧ
ಮೊದಲನೆಯದಲ್ಲ.
ಅದಕ್ಕೆ ಹಿಂದೆಯೂ ಯುದ್ಧಗಳಾಗಿದ್ದವು
ಹಿಂದಿನದು ಮುಗಿದಾಗ
ಗೆದ್ದಪಕ್ಷವಿತ್ತು, ಸೋತಪಕ್ಷವಿತ್ತು.
ಸೋತಪಕ್ಷದಲ್ಲಿ ಕೆಳಜನ ಹಸಿದರು.
ಗೆದ್ದಪಕ್ಷದಲ್ಲಿ ಸಹ
ಹಸಿದವರು ಕೆಳಜನರೇ.

೩೪

ಗೋಡೆಯ ಮೇಲೆ ಸುಣ್ಣದಲ್ಲಿ ಬರೆದಿತ್ತು:
'ಅವರಿಗೆ ಬೇಕಾಗಿದೆ ಯುದ್ಧ'
ಅದನ್ನು ಬರೆದವನಾಗಲೇ
ಹತನಾಗಿದ್ದಾನೆ.

೩೫

ಈಗ ರಾತ್ರಿ.
ಗಂಡಹೆಂಡಿರು
ತಂತಮ್ಮ ಹಾಸಿಗೆಗಳಲ್ಲಿ ಮಲಗಿದ್ದಾರೆ.
ಹರೆಯದ ಹುಡುಗಿಯರು
ತಬ್ಬಲಿಗಳನ್ನು ಹೆರಲಿದ್ದಾರೆ.

೧೯೩೩–೩೮

೩೬

ಜೆನರಲ್, ನಿನ್ನ ಟ್ಯಾಂಕೊಂದು ಸಶಕ್ತ ವಾಹನ.
ಅದು ಕಾಡನ್ನು ಕೆಡವುತ್ತದೆ, ನೂರಾರು ಜನರನ್ನು ತುಳಿದುಹಾಕುತ್ತದೆ.
ಆದರೆ ಒಂದೇ ಕೊರತೆ :
ಅದಕ್ಕೊಬ್ಬ ಡ್ರೈವರ್ ಬೇಕು.

ಜೆನರಲ್, ನಿನ್ನ ಬಾಂಬರ್–ವಿಮಾನ ಸಶಕ್ತ.
ಅದು ಬಿರುಗಾಳಿಗಿಂತ ವೇಗವಾಗಿ ಹಾರುತ್ತದೆ, ಆನೆಗಿಂತ ಹೆಚ್ಚು ಹೊರುತ್ತದೆ.

ಆದರೆ ಒಂದೇ ಕೊರತೆ :
ಅದಕ್ಕೊಬ್ಬ ಮೆಕ್ಯಾನಿಕ್ ಬೇಕು.

ಜೆನರಲ್, ಮನುಷ್ಯ ತುಂಬ ಉಪಯೋಗಿ.
ಅವನು ಹಾರಬಲ್ಲ, ಕೊಲ್ಲಬಲ್ಲ.
ಆದರೆ ಒಂದೇ ಕೊರತೆ :
ಅವನು ಯೋಚಿಸಲೂ ಬಲ್ಲ.

೧೯೩೮

೩೭. ಪುಸ್ತಕ ದಹನ

ಹಾನಿಕಾರಕ ಪುಸ್ತಕಗಳನ್ನು ಸಾರ್ವಜನಿಕವಾಗಿ ಸುಡಬೇಕೆಂದು ಸರಕಾರ ಸುಗ್ರೀವಾಜ್ಞೆ
ಹೊರಡಿಸಿತ್ತು
ಎಲ್ಲೆಲ್ಲೂ ಪುಸ್ತಕಗಳನ್ನು ಎತ್ತಿನಗಾಡಿಗಳಲ್ಲಿ ಹೇರಿ
ಸುಡುಕೊಂಡಕ್ಕೆ ಹೊಡೆದುಕೊಂಡು ಹೋಗುತ್ತಿದ್ದರು
ಆಗ ಒಬ್ಬ ಬಹಿಷ್ಕೃತ ಸಾಹಿತಿ, ಶ್ರೇಷ್ಠರಲ್ಲೊಬ್ಬ,
ಸುಡಲಿರುವ ಪುಸ್ತಕಗಳ ಪಟ್ಟಿಯಲ್ಲಿ
ತನ್ನ ಕೃತಿಗಳ ಹೆಸರಿಲ್ಲದ್ದನ್ನು ನೋಡಿ ಹೌಹಾರಿದ.
ತಕ್ಷಣ ಕೋಪದ ಭರದಲ್ಲಿ ಮೇಜಿಗೆ ಧಾವಿಸಿ, ಅಧಿಕಾರಿಗಳಿಗೆ ಪತ್ರ ಗೀಚಿದ :
ಸುಡಿ, ನನ್ನನ್ನು ಸುಡಿ! – ಲೇಖನಿ ಹಕ್ಕಿವೇಗದಲ್ಲಿ ಹಾರಿತ್ತು
ನನ್ನನ್ನು ಸುಡಿ!
ನನಗೇನೂ ಪರವಾಗಿಲ್ಲ! ನನ್ನನ್ನು ಬಿಡಬೇಡಿ!
ನನ್ನ ಪುಸ್ತಕಗಳು ಯಾವಾಗಲೂ ಸತ್ಯವನ್ನೇ ಸಾರಿಲ್ಲವೆ?
ಈಗ ನಿಮ್ಮಿಂದ ನಾನು ಸುಳ್ಳನೆನಿಸಿಕೊಳ್ಳಬೇಕೇನು!
ಇದು ನನ್ನ ಆಜ್ಞೆ, ನನ್ನನ್ನು ಸುಡಿ!

೧೯೩೮

೩೮. 'ದೇಶಭ್ರಷ್ಟ' ಎಂಬ ತಲೆಪಟ್ಟಿಯ ಬಗ್ಗೆ

> ದೋಣಿಯ ಮುಂತುದಿಯಲ್ಲಿ ಕೂತ ನೀನೆ,
> ಹಿಂತುದಿಯ ತೂತಿನಿಂದ ನೀರು ಒಳನುಗ್ಗುತ್ತಿರುವುದನ್ನು
> ನೋಡಿ ಮುಖ ತಿರುಗಿಸಿಕೊಂಡೇನು ಪ್ರಯೋಜನ?
> ನೀನೇನೂ ಸಾವಿನ ಕಣ್ಣನೋಟಕ್ಕೆ ಹೊರತಲ್ಲ.

ಇವರು ನಮಗಿಟ್ಟ ಹೆಸರು : 'ದೇಶಭ್ರಷ್ಟರು' ಅರ್ಥಾತ್ ದೇಶತೊರೆದು ಬಂದವರು
ಅದು ತಪ್ಪೆಂದು ನನಗೆ ಯಾವಾಗಲೂ ಅನಿಸಿದೆ
ನಾವೇನೂ ನಮ್ಮ ಸ್ವಂತ ಇಚ್ಛೆಯಿಂದ ಈ ಬೇರೊಂದು ದೇಶಕ್ಕೆ
ಇಲ್ಲೇ, ಸಾಧ್ಯವಾದರೆ ಎಂದೆಂದಿಗೂ, ನೆಲಸಲೆಂದು ಬಂದವರಲ್ಲ.
ನಮ್ಮನ್ನು ನಮ್ಮ ನಾಡು ಗಡೀಪಾರುಮಾಡಿ ಹೊರಗಟ್ಟಿತು.
ನಾವು ದೇಶಬಿಟ್ಟೋಡಿಬರಬೇಕಾಯಿತು, ಅಷ್ಟೇ.
ನಮ್ಮನ್ನು ಕರಕೊಂಡ ದೇಶ ನಮ್ಮ ಹುಟ್ಟುನಾಡಲ್ಲ, ಅದು ಪರದೇಶ.
ನಾವಿಲ್ಲಿ ಸದಾ ಚಡಪಡಿಸುತ್ತ ಕೂತಿದ್ದೇವೆ
ಗಡಿಗೆ ಸಾಧ್ಯವಿದ್ದಷ್ಟೂ ಹತ್ತಿರ, ಹಿಂತಿರುಗಿಹೋಗುವ ದಿನಕ್ಕೆ ಕಾಯುತ್ತ
ಎವೆಯಿಕ್ಕದೆ ಗಡಿಯಾಚೆ ನೋಡುತ್ತ
ಅಲ್ಲಾಗುತ್ತಿರುವ ಒಂದೊಂದು ಆಗುಹೋಗನ್ನೂ ಗಮನಿಸುತ್ತ
ಅಲ್ಲಿಂದ ಬರುವ ಒಬ್ಬೊಬ್ಬರನ್ನೂ ಕಾಳಜಿಯಿಂದ ಪ್ರಶ್ನಿಸುತ್ತ
ಏನನ್ನೂ ಮರೆಯದೆ, ಏನೊಂದನ್ನೂ ಬಿಟ್ಟುಕೊಡದೆ.
ಈಗ ಜಲಸಂಧಿ ಸ್ತಬ್ಧವಾಗಿದೆ, ನಿಜ. ಆದರೆ ನಾವು ಅದರಿಂದ ಮೋಸಹೋಗಿಲ್ಲ!
ಗಡಿಯಾಚೆ ಕ್ಯಾಂಪುಗಳಿಂದ ಹೊರಟ ಚೀತ್ಕಾರ ಇಲ್ಲಿಯವರೆಗೂ ಕೇಳಿಸುತ್ತಿದೆ.
ಅಷ್ಟೇಕೆ, ನಾವೇ ಆ ದುಷ್ಕೃತ್ಯಗಳ ಗಡಿದಾಟಿಬಂದ ಗಾಳಿಸುದ್ದಿಯೋ ಎಂಬಂತಿದ್ದೇವೆ.
ನಮ್ಮಲ್ಲಿ ಒಬ್ಬೊಬ್ಬರೂ
ಹರಿದ ಬೂಟು ತೊಟ್ಟು ಗುಂಪಿನಲ್ಲಿ ಅಲೆದಾಡುತ್ತಿರುವವರು
ನಮ್ಮ ನಾಡನ್ನು ಹೊಲೆಗೆಡಿಸಿರುವ ಹೇಸಿಗೆಗೆ ಸಾಕ್ಷಿಯಂತಿದ್ದೇವೆ.
ಆದರೆ ನಮ್ಮಲ್ಲಿ ಯಾರೊಬ್ಬರೂ ಇಲ್ಲಿ ಉಳಿಯುವವರಲ್ಲ
ಕೊನೆಯ ಮಾತಿನ್ನೂ ಆಡಿ ಮುಗಿದಿಲ್ಲ.

೧೯೩೭

೩೯. ಪರಾಜಿತ ಪರದೇಸಿಯೊಬ್ಬನ ಬಗ್ಗೆ ವರದಿ

ಆ ಪರಾಜಿತ ಪರದೇಸಿ ನಮ್ಮ ದ್ವೀಪದಲ್ಲಿ ಕಾಲಿಟ್ಟಾಗ
ಅವನು ಬಂದದ್ದು ಕೊನೆಗೂ ತನ್ನ ಗುರಿ ಮುಟ್ಟಿದವನಂತೆ.
ಅವನಿಗೆ ನೆರವಾಗಲು ನಾವು ಮುಂದಾದಾಗ
ನಮ್ಮನ್ನು ಕಂಡು ಅವನಿಗೆ 'ಅಯ್ಯೋ ಪಾಪ!' ಎನಿಸಿತೆಂದು ನನ್ನ ಬಹುಮಟ್ಟಿನ ಅನಿಸಿಕೆ.
ಷುರುವಿನಿಂದಲೂ ಅವನು ತಲೆಗೆ ಹಚ್ಚಿಕೊಂಡದ್ದು
ನಮ್ಮ ವಿಷಯಗಳನ್ನಷ್ಟೇ.
ತನ್ನ ನಾವೆ ಒಡೆದು ಚೂರಾದ ಅನುಭವದ ಮೇಲೆ
ಅವನು ನಮಗೆ ನಾವೆ ನಡಸುವುದನ್ನು ಕಲಿಸಿದ.
ನಮಗೆ ಧೈರ್ಯವನ್ನೂ ತುಂಬಿದ.
ಕಡಲುಬ್ಬರದ ಬಗ್ಗೆ ಅವನಿಗೆ ತುಂಬ ಗೌರವ
ಏಕೆಂದರೆ ಅದು ಅವನಂತಹವನನ್ನೂ ಸೋಲಿಸಿತ್ತಲ್ಲವೆ.
ಹಾಗೆ ಸೋಲಿಸುವಾಗ ಕಂಡಂತೆಯೇ
ಅದು ತನ್ನ ಚತುರೋಪಾಯಗಳನ್ನೂ ಹೊರಗೆಡವಿತ್ತು.
ಈ ತಿಳಿವಳಿಕೆಯಿಂದ ಅವನ ಶಿಷ್ಯರಾದ ನಾವು ಉತ್ತಮ ಮನುಷ್ಯರಾಗಲಿದ್ದೆವು.
ಇಲ್ಲಿ ಅವನಿಗೆ ತನ್ನದೇ ಕೆಲವು ವಿಶೇಷ ಅಡಿಗೆಗಳ ಅಭಾವವಿತ್ತು
ಅದರಿಂದಾಗಿ ನಮ್ಮ ಪಾಕವಿದ್ಯೆ ಸುಧಾರಿಸಿತು.
ಅವನಿಗೆ ತನ್ನ ಬಗ್ಗೆಯೇ ಅಸಮಾಧಾನವಿದ್ದದ್ದು ಸುಸ್ಪಷ್ಟ
ಹಾಗೆಂದು ಅವನು ತನ್ನ ಹಾಗೂ ನಮ್ಮ ಪರಿಸ್ಥಿತಿಯ ಬಗ್ಗೆ
ಕ್ಷಣವೂ ಸಮಾಧಾನ ತಾಳಿದವನಲ್ಲ.
ಆದರೆ ನಮ್ಮೊಂದಿಗೆ ಇದ್ದಷ್ಟು ಕಾಲವೂ
ತನ್ನನ್ನು ಬಿಟ್ಟು ಬೇರೊಬ್ಬರ ಮೇಲೆ ಗೊಣಗಿದವನಲ್ಲ.
ಅವನು ಸತ್ತದ್ದು ಹಳೆಯ ಗಾಯದ ನೋವಿಂದ. ನೆಲಕ್ಕೆ ಬೆನ್ನೂರಿ ಮಲಗಿದ್ದಾಗಲೂ
ಅವನು ನಮ್ಮ ಮೀನಬಲೆಗೆ ಹೊಸಬಗೆಯ ಗಂಟೊಂದನ್ನು ಹಾಕಿ ತೋರಿಸಲು
  ಪ್ರಯತ್ನಿಸುತ್ತಿದ್ದ.
ಹಾಗೆ ಕಲಿಕಲಿಯುತ್ತಲೇ ಅವನು ಸತ್ತ.

೧೯೩೮?

೪೦. ದೇಶಭ್ರಷ್ಟನ ಪ್ರಲಾಪ

ನಿಮ್ಮೆಲ್ಲರಂತೆ ನಾನೂ ನನ್ನ ಅನ್ನ ಹುಟ್ಟಿಸಿಕೊಳ್ಳುತ್ತಿದ್ದೆ, ತಿನ್ನುತ್ತಿದ್ದೆ.
ನಾನೊಬ್ಬ ಡಾಕ್ಟರ್. ಅಲ್ಲ, ಹಿಂದೆಂದೊ ಆಗಿದ್ದವನು.
ನನ್ನ ಮೂಗಿನ ಮಾಟ, ಕೂದಲಬಣ್ಣಗಳಿಂದಾಗಿ
ನನ್ನ ನೆಲೆಗೆ, ನನ್ನ ಅನ್ನಕ್ಕೆ ಕಲ್ಲು ಬಿತ್ತು.

ಏಳು ವರ್ಷಗಳ ಕಾಲ ಕೆನ್ನೆಗೆ ಕೆನ್ನೆಯೊತ್ತಿ, ತೊಡೆಯ ಮೇಲೆ ಕೈಯಿಟ್ಟು
ಯಾರೊಂದಿಗೆ ಮಲಗಿದ್ದೆನೊ, ಆ ಹೆಂಗಸು
ನನ್ನನ್ನು ಕೋರ್ಟಿಗೆಳೆದಳು : ನನ್ನ ಕೂದಲಬಣ್ಣ ಕಪ್ಪೆಂದು
ನನ್ನಿಂದ ಬಿಡುಗಡೆ ಪಡೆದಳು.

(ನಮ್ಮಮ್ಮನ ಹೊಟ್ಟೆಯಲ್ಲಿ ಹುಟ್ಟಿದ ತಪ್ಪಿಗೆ)
ರಾತ್ರಿನ್‌ರಾತ್ರಿ ಕಾಡಿಗೆ ಓಡಿ ಪರಾರಿಯಾದೆ
ಈಗ ಎಲ್ಲಿ ಮನುಷ್ಯ ಕಾನೂನುಬಾಹಿರನಲ್ಲವೊ ಅಂತಹ ದೇಶ ಹುಡುಕಿದ್ದೇನೆ.

ಆದರೆ ಎಲ್ಲಿ ಹೋಗಿ ಹೊಟ್ಟೆಪಾಡಿಗೆ ಪ್ರಯತ್ನಪಟ್ಟರೂ
'ಅರೆ, ಇವನೆಂತಹ ಅಧಿಕಪ್ರಸಂಗಿ' ಎನ್ನುತ್ತಾರೆ ಜನ
ನಾನು ಅಧಿಕಪ್ರಸಂಗಿಯಲ್ಲ, ದಿಕ್ಕೆಟ್ಟವನು.

೧೯೩೮

೪೧. ನನ್ನ ನಂತರ ಹುಟ್ಟಿದವರಿಗೆ

೧

ನಿಜವಾಗಿ ನಾನೀಗ ಕಗ್ಗತ್ತಲಕಾಲದಲ್ಲಿ ಬಾಳುತ್ತಿದ್ದೇನೆ!
ಕಪಟವಿಲ್ಲದೆ ಮಾತಾಡಿದರೆ ಅದು ಮೂರ್ಖತನ.
ಸುಕ್ಕುಗಟ್ಟಿದ ನಯವಾದ ಹಣೆ ಒರಟು ಸ್ವಭಾವದ ಲಕ್ಷಣ.
ನಗುನಗುತ್ತಿರುವ ಮನುಷ್ಯ, ಅವನಿಗಿನ್ನೂ ತಿಳಿದಿಲ್ಲ
ಭೀಕರ ಸುದ್ದಿ.

ಎಂತಹ ಕಾಲ ಇದು, ಈಗ ಗಿಡಮರಗಳ ವಿಷಯ
ಮಾತಾಡುವುದು ಬಹುಮಟ್ಟಿಗೆ ಅಪರಾಧ
ಏಕೆಂದರೆ ಅದರ ಅರ್ಥ ಅನೇಕ ದುಷ್ಕೃತ್ಯಗಳನ್ನು ಮರೆಮಾಚುವುದು!
ಅಲ್ಲಿ ತೆಪ್ಪಗೆ ರಸ್ತೆ ದಾಟುತ್ತಿರುವ ಮನುಷ್ಯನಿದ್ದಾನಲ್ಲ
ಅವನ ಮಿತ್ರರಿಗೆ ಆ ಮನುಷ್ಯನ ಅಗತ್ಯವಿತ್ತು
ಪ್ರಾಯಶಃ ಅವನಾಗಲೇ ಅವರ ಕೈಗೆ ಸಿಗದಷ್ಟು ದೂರ ಹೊರಟುಹೋಗಿದ್ದಾನೇನೊ!

ನಿಜ, ನಾನಿನ್ನೂ ನನ್ನ ಹೊಟ್ಟೆ ಹೊರಕೊಳ್ಳುತ್ತಿದ್ದೇನೆ
ಆದರೆ ನಂಬು, ಅದು ಬರಿಯ ಆಕಸ್ಮಿಕ ಮಾತ್ರ.
ನಾನೇನೇ ಮಾಡಲಿ, ನನಗೆ ಹೊಟ್ಟೆಭರ್ತಿ ತಿನ್ನುವ ಹಕ್ಕಿಲ್ಲ.
ನಾನು ಬದುಕಿ ಉಳಿದಿರುವುದು ಕೇವಲ ಅದೃಷ್ಟ ಅಷ್ಟೇ. (ಅದೃಷ್ಟ ಕೈಕೊಟ್ಟಿತೊ,
ನಾ ಕೆಟ್ಟೆ).

ನನಗೆ ಹೇಳುತ್ತಾರೆ : ತಿನ್ನು, ಕುಡಿ! ಇದೆ ಎಂದು ಖುಷಿಪಡು!
ಆದರೆ ಹೇಗೆ ತಿನ್ನಲಿ, ಹೇಗೆ ಕುಡಿಯಲಿ
ನಾನು ತಿನ್ನುತ್ತಿರುವುದು ಹಸಿದವನಿಂದ ಕಸಿದ ಅನ್ನವಲ್ಲವೆ?
ನನ್ನ ಲೋಟದ ನೀರು ನೀರಡಿಕೆಯಿಂದ ಸಾಯುತ್ತಿರುವವನಿಗೆ ಇಲ್ಲವಾದದ್ದಲ್ಲವೆ?
ಆದರೂ ಕೂಡ ನಾನು ತಿನ್ನುತ್ತೇನೆ, ಕುಡಿಯುತ್ತೇನೆ.

ನನಗೂ ವಿವೇಕಿಯಾಗುವ ಆಸೆಯಿದೆ.
ಪುರಾತನಗ್ರಂಥಗಳು ವಿವೇಕವೆಂದರೇನೆಂದು ಹೇಳುತ್ತವೆ :
ಪ್ರಪಂಚದ ತಿಕ್ಕಾಟಗಳಿಂದ ದೂರ ಉಳಿದು

ಇರುವ ಅಲ್ಪಾಯುಷ್ಯವನ್ನು ನಿರ್ಭೀತಿಯಿಂದ ಕಳೆಯುವುದು
ಜತೆಗೇ ಹಿಂಸೆ ತೊರೆದು ಬಾಳುವುದು
ಕೇಡಿಗೆ ಪ್ರತಿಯಾಗಿ ಒಳಿತನ್ನು ಮಾಡುವುದು
ಆಸೆಗಳನ್ನು ಪೂರೈಸಿಕೊಳ್ಳುವ ಬದಲು ಅವನ್ನು ಮರೆಯುವುದು
ಇವನ್ನು ವಿವೇಕವೆಂದು ಹೇಳಲಾಗಿದೆ
ಇವೆಲ್ಲ ನನ್ನಿಂದ ಸಾಧ್ಯವಿಲ್ಲ :
ನಿಜವಾಗಿ, ನಾನು ಕಗ್ಗತ್ತಲಕಾಲದಲ್ಲಿ ಬಾಳುತ್ತಿದ್ದೇನೆ!

೨

ನಾನು ಪಟ್ಟಣಕ್ಕೆ ಬಂದದ್ದು ಅವ್ಯವಸ್ಥೆಯ ಕಾಲದಲ್ಲಿ
ಹಸಿವು ರಾಜ್ಯಭಾರ ಮಾಡುತ್ತಿದ್ದಾಗ.
ದಂಗೆಯ ವೇಳೆ ಜನರ ಮಧ್ಯೆ ಇದ್ದೆ
ನಾನೂ ಅವರ ಜತೆ ಸೇರಿ ಹೋರಾಡಿದೆ.
ಭೂಮಿಯ ಮೇಲೆ ನನಗೆ ದಕ್ಕಿದ ಕಾಲ
ಹೀಗೆ ಕಳೆಯಿತು.

ಕದನಗಳ ನಡುವೆ ಉಣ್ಣುತ್ತಿದ್ದೆ
ಕೊಲೆಗಾರರ ಮಧ್ಯೆ ಮಲಗುತ್ತಿದ್ದೆ
ಹಿಂದೆ ಮುಂದೆ ನೋಡದೆ ಪ್ರೇಮಿಸುತ್ತಿದ್ದೆ
ಮತ್ತು ಸಹನೆಯಿಲ್ಲದೆ ಪ್ರಕೃತಿಯನ್ನು ನೋಡುತ್ತಿದ್ದೆ.
ಭೂಮಿಯ ಮೇಲೆ ನನಗೆ ದಕ್ಕಿದ ಕಾಲ
ಹೀಗೆ ಕಳೆಯಿತು.

ನನ್ನ ಕಾಲದಲ್ಲಿ ಎಲ್ಲ ರಸ್ತೆಗಳೂ ಕೆಸರಿಗೆ ಕೊಂಡೊಯ್ಯುತ್ತಿದ್ದವು.
ತಪ್ಪಿ ಆಡಿದ ಮಾತು ಕಸಾಯಿಖಾನೆಗೆ ಎಳೆದೊಯ್ಯುತ್ತಿತ್ತು.
ನಾನು ಮಾಡಲಾದದ್ದು ಕೊಂಚ ಮಾತ್ರ. ಆದರೂ ಗದ್ದುಗೆಯೇರಿದವರು
ನಾನಿಲ್ಲದೆ ಹೋಗಿದ್ದರೆ ಹೆಚ್ಚು ಭದ್ರವಾಗಿ ಕೂರುತ್ತಿದ್ದರೆಂದು ನನ್ನ ನಂಬಿಕೆ.
ಭೂಮಿಯ ಮೇಲೆ ನನಗೆ ದಕ್ಕಿದ ಕಾಲ
ಹೀಗೆ ಕಳೆಯಿತು.

ಇದ್ದ ಬಲ ಕಡಿಮೆ.
ಗುರಿ ತುಂಬ ದೂರ
ಅದು ಸ್ಪಷ್ಟವಾಗಿ ಕಾಣಿಸುತ್ತಿತ್ತು, ನಿಜ
ಆದರೆ ನನಗೆ ಎಟಕುವಂತಿರಲಿಲ್ಲ.

ಭೂಮಿಯ ಮೇಲೆ ನನಗೆ ದಕ್ಕಿದ ಕಾಲ
ಹೀಗೆ ಕಳೆಯಿತು.

೩

ನೀನು
ನಾವು ಮುಳುಗಿ ಹಾಳಾದ ಮಹಾಪ್ರವಾಹದಿಂದ ಮೇಲೆದ್ದುಬರುವವನು
ನಮ್ಮ ಕುಂದುಕೊರತೆಗಳನ್ನು ಕುರಿತು ಟೀಕೆಮಾಡುವಾಗ
ಯಾವ ಕಗ್ಗತ್ತಲಕಾಲದಿಂದ
ನೀನು ಬಚಾವಾಗಿ ಉಳಿದೆಯೊ
ಅದನ್ನು ನೆನಸಿಕೊ.
ಬೂಟು ಬದಲಾಯಿಸುವಂತೆ ದೇಶ ಬದಲಾಯಿಸುತ್ತ
ವರ್ಗಕಲಹಗಳ ಮೂಲಕ ನಾವು ಹಾದುಬಂದೆವು
ಕೇವಲ ಅನ್ಯಾಯವೇ ಇದ್ದು, ಪ್ರತಿಯಾಗಿ ವಿದ್ರೋಹವಿಲ್ಲದ್ದಕ್ಕೆ ಹತಾಶರಾಗಿ.

ಆದರೂ ನಾವು ಬಲ್ಲೆವು :
ದ್ವೇಷ
ಅಲ್ಪತನದ ವಿರುದ್ಧ ಸಹ ಮುಖವನ್ನು ತಿರುಚಿಸುತ್ತದೆ.
ಕೋಪ
ಅನ್ಯಾಯದ ವಿಷಯದಲ್ಲಿ ಸಹ ಧ್ವನಿಯನ್ನು ಕರ್ಕಶಗೊಳಿಸುತ್ತದೆ.
ಅಯ್ಯೋ ನಾವು, ಸ್ನೇಹಕ್ಕೆ ನೆಲ ಹದನುಮಾಡಬಯಸಿದವರು,
ಸ್ವತಃ ನಾವೇ ಸ್ನೇಹದಿಂದಿರಲಾಗಲಿಲ್ಲ.

ಆದರೆ ನೀನು
ಮನುಷ್ಯ ಮನುಷ್ಯನಿಗೊದಗುವ ಕಾಲ ಬಂದಾಗ
ಕೊಂಚ ಸಹನೆಯಿಂದ
ನಮ್ಮನ್ನು ನೆನಸಿಕೊ.

೧೯೩೮?

೪೨. ಕಗ್ಗತ್ತಲಕಾಲದಲ್ಲಿ

ಕಗ್ಗತ್ತಲಕಾಲದಲ್ಲಿ
ಹಾಡುವುದೂ ಉಂಟೆ?
ಹೌದು, ಹಾಡುವುದೂ ಉಂಟು.
ಕಗ್ಗತ್ತಲಕಾಲವನ್ನು ಕುರಿತು.

೧೯೩೯

ಒಳಗಾಣ್ಕೆಗಳು

೪೩. ಹಳೆಯ ಹೊಸತಿನ ಮೆರವಣಿಗೆ

ಗುಡ್ಡದ ಮೇಲೆ ನಿಂತಿದ್ದೆ, ಆಗ ಕಂಡಿತು ಹಳೆಯದು ಹತ್ತಿರ ಹತ್ತಿರ ಬರುತ್ತಿರುವುದು. ಆದರೆ ಅದು ಹೊಸರೂಪ ಧರಿಸಿ ಬಂದಿತ್ತು.

ಈ ಮೊದಲು ಯಾರೂ ಎಲ್ಲೂ ನೋಡದ ಹೊಸಾಹೊಸ ಊರೆಗೋಲಿನ ಮೇಲೆ ಕುಂಟುತ್ತ, ಈ ಮೊದಲು ಯಾರೂ ಎಲ್ಲೂ ಮೂಸಿಕಾಣದ ಹೊಸಾಹೊಸ ಕೊಳೆತದ ನಾತ ಬೀರುತ್ತ ಅದು ಬರುತ್ತಿತ್ತು.

ಅದೊಂದು ಹೊಸಾಹೊಸ ಆವಿಷ್ಕಾರವೊ ಎಂಬಂತೆ ಕಲ್ಲೊಂದು ತೂರಿ ಬಂತು. ನರವಾನರರು ಎದೆ ಎದೆ ಬಡಿದುಕೊಂಡು ಹೀಳಿಡುತ್ತ ಅದೊಂದು ಹೊಸಾಹೊಸ ಸಂಗೀತರಚನೆಯೆಂದು ಪ್ರದರ್ಶಿಸಿದರು.

ಆ ಹೊಸತು ರಾಜಧಾನಿಯ ಕಡೆ ಮುನ್ನುಗ್ಗಿದಾಗ ನಾಲ್ಕೂ ಕಡೆ ಬಾಯಿತೆರೆದಿದ್ದ ಗೋರಿಗಳು ಖಾಲಿಯಾಗಿದ್ದವು.

ಸುತ್ತ ನಿಂತಿದ್ದವರೆಲ್ಲರೂ ಭಯ ಹುಟ್ಟಿಸುವಂತೆ ಅರಚುತ್ತಿದ್ದರು : "ಇದೊ, ಇಲ್ಲಿ ಹೊಸತು ಬರುತ್ತಿದೆ, ಇದು ಸಂಪೂರ್ಣ ಹೊಸತು. ಹೊಸತಕ್ಕೆ ಶರಣೆನ್ನಿ, ನಮ್ಮಂತೆಯೇ ಹೊಸತಾಗಿ!" ಅದನ್ನು ಕೇಳಿದವರಿಗೆ ಕೇಳಿಸಿದ್ದು ಬರಿಯ ಬೊಬ್ಬೆ, ಆದರ ನೋಡಿದವರು ಕಂಡದ್ದು ಬೊಬ್ಬೆ ಹಾಕಲಾಗದವರನ್ನು.

ಹೀಗೆ ಹಳತು ಜರ್ಬಾಗಿ ಸಾಗಿತ್ತು, ಹೊಸ ವೇಷದಿಂದ ಮುಖ ಮರಸಿ. ಆದರೆ ತನ್ನ ವೈಭವಯುತ ಮೆರವಣಿಗೆಯಲ್ಲಿ ಅದು ಹೊಸತನ್ನೂ ಜತೆ ತಂದಿತ್ತು, ಆ ಹೊಸತೇ ಹಳತೆಂಬಂತೆ ಪ್ರದರ್ಶಿಸುತ್ತ.

ಹೊಸತಕ್ಕೆ ಉಡಿಸಿದ್ದುದು ಹಳೆಚಿಂದಿ, ತೊಡಿಸಿದ್ದುದು ಕೈಬೇಡಿ. ಆದರೆ ಆ ಚಿಂದಿಯಲ್ಲಿಯೇ ಹೊಸತರ ಕಟ್ಟುಮಸ್ತಿನ ಮೈ ಎದ್ದುಕಾಣುತ್ತಿತ್ತು.

ಮೆರವಣಿಗೆ ಇಡೀ ರಾತ್ರಿ ಮುಂಬರಿಯಿತು. ಆಕಾಶ ಬೆಂಕಿಯುರಿಯಿಂದ ಕೆಂಪಾಗಿತ್ತು. ಜನ ಅದನ್ನು ಮುಂಬೆಳಗಿನ ಕೆಂಪೆಂದುಕೊಂಡರು. ಅಹಾ! ಆ ಬೊಬ್ಬೆ : ಹೊಸತು ಬರುತ್ತಿದೆ, ಇದು ಸಂಪೂರ್ಣ ಹೊಸತು, ಹೊಸತಕ್ಕೆ ಶರಣೆನ್ನಿ, ನಮ್ಮಂತೆಯೇ ಹೊಸತಾಗಿ! ಫಿರಂಗಿಗಳ ಮೊಳಗಿಗೆ ಅದರ ಸದ್ದಡಗದೇ ಹೋಗಿದ್ದರೆ ಆ ಬೊಬ್ಬೆ ಇನ್ನೂ ಹೆಚ್ಚು ಕೇಳಿ ಬರುತ್ತಿತ್ತು.

೧೯೩೮–೪೦

೪೪. ಗೊಂದಲಮಾರಿಯ ಹಡತದ ಪ್ರಸಂಗ

ಗೊಂದಲಮಾರಿಗೆ ದಿನ ತುಂಬಿದಾಗ ಅವಳು ಒಳಮನೆ ಸೇರಿ ತನ್ನ ಸುತ್ತ ವೈದ್ಯರುಗಳನ್ನೂ ಕಣಿಗಾರರನ್ನೂ ಗುಡ್ಡೆಹಾಕಿಕೊಂಡಳು. ಎಲ್ಲೆಲ್ಲೂ ಗುಸುಗುಸು. ದೊಡ್ಡ ದೊಡ್ಡ ಮಂದಿ ಗಂಭೀರಮುಖಮುದ್ರೆ ಹಾಕಿಕೊಂಡು ಮನೆಯೊಳಗೆ ಹೋಗುತ್ತಿದ್ದರು. ಅವರು ಹಿಂದಿರುಗುವಾಗ ಮುಖ ಚಿಂತೆಆತಂಕಗಳಿಂದ ಬಿಳಚಿಕೊಂಡಿರುತ್ತಿತ್ತು. ಮೇಕ್–ಅಪ್ ಸಾಮಾನಿನ ಅಂಗಡಿಗಳಲ್ಲಿ ಬಿಳಿಯ ಬಣ್ಣದ ಬೆಲೆ ಇಮ್ಮಡಿ ಏರಿತ್ತು.

ರಸ್ತೆಗಳಲ್ಲಿ ಜನ ಗುಂಪುಗೂಡಿ, ಬೆಳಗಿನಿಂದ ಸಂಜೆಯವರೆಗೂ ಬರಿಹೊಟ್ಟೆಯಲ್ಲಿ ಕಾಯುತ್ತ ನಿಂತಿರುತ್ತಿದ್ದರು.

ಮನೆಯೊಳಗಿನಿಂದ ಕೇಳಿ ಬಂದ ಮೊದಲ ಶಬ್ದ ತೊಲೆಜಂತಿಗಳಿಂದ ಹೊರಟ ಒಂದು ಭಾರೀ ಹೂಸಿನಂತಿತ್ತು. ಹಿಂದೆಯೇ 'ಶಾಂತಿ, ಶಾಂತಿ' ಎಂಬ ಭಾರೀ ಕಿರಚು. ಮೇಲೆ ದುರ್ನಾತವಂತೂ ಅಸಹನೀಯ.

ಕೂಡಲೇ ಸಣ್ಣನೆಯ ನೀರಿನ ಚುರಕಿ ಹೊಡೆದಂತೆ ಸುತ್ತೆಲ್ಲ ರಕ್ತದ ಇರಚಲು. ಈಗ ಒಂದರ ಹಿಂದೆ ಇನ್ನೊಂದು, ಒಂದಕ್ಕಿಂತ ಹೆಚ್ಚು ಇನ್ನೊಂದು, ಭಯಂಕರ ಶಬ್ದಗಳು ಕೇಳಿಬರತೊಡಗಿದವು.

ಗೊಂದಲಮಾರಿ ಕಕ್ಕಿಕೊಂಡಳು, ಅದು 'ಸ್ವಾತಂತ್ರ್ಯ, ಸ್ವಾತಂತ್ರ್ಯ' ಎಂಬಂತಿತ್ತು. ಮತ್ತೆ ಕೊಖ್ ಕೊಖ್ ಕೊಖ್ ಎಂದು ಕೆಮ್ಮಿದಳು, 'ನ್ಯಾಯ, ನ್ಯಾಯ' ಎಂಬಂತಿತ್ತು ಆ ಶಬ್ದ. ಮತ್ತೆ ಇನ್ನೊಂದು ಹೂಸು, ಅದು 'ದೇಶೋನ್ನತಿ, ದೇಶೋನ್ನತಿ' ಎಂಬಂತಿತ್ತು.

ಕೊನೆಗೆ ಬಾಲ್ಕನಿಯ ಮೇಲಿಂದ ರಕ್ತಸಿಕ್ತವಾದ ಹೊಲೆಬಟ್ಟೆಯಲ್ಲಿ ಸುತ್ತಿದ ಒಂದು ಅರಬುಳ್ಳೆಯನ್ನು ಎತ್ತಿಹಿಡಿದು ಗಂಟೆಗಳ ಮೊಳಗಿನ ನಡುವೆ ಎಲ್ಲರಿಗೂ ತೋರಿಸಲಾಯಿತು. ಅದು ಗೊಂದಲಮಾರಿ ಹಡೆದ ಚೆಳ್ಳೆದೆವ್ವ : 'ಯುದ್ಧ'.

ಅದರ ಅಪ್ಪಂದಿರೋ ಸಾವಿರ.

೧೯೩೮–೪೦

೪೫. ರಣಶಿವ

ಮುದಿಯ ರಣಶಿವನನ್ನು ನೋಡಿ ಬಂದೆ, ಇತ್ತ ಒಂದು ಕಂದಕ, ಅತ್ತ ಒಂದು ಬಂಡೆ, ನಡುವಿನ ಜವುಗುಪ್ರದೇಶದಲ್ಲಿ ಅವನು ನಿಂತಿದ್ದ.

ಪುಕ್ಕಟೆ ಗಿಟ್ಟಿಸಿದ ಬೀರು ಮತ್ತು ಕಾರ್ಬಾಲಿಕ್‌ಗಳ ದುರ್ನಾತ ಬೀರುತ್ತ, ತರುಣರಿಗೆ ತನ್ನ ತರಡು ತೋರಿಸುತ್ತಿದ್ದ. ಏಕೆಂದರೆ ಅವನು ಅನೇಕ ಡಾಕ್ಟರುಗಳಿಂದ ಕಾಯಕಲ್ಪ ಮಾಡಿಸಿಕೊಂಡು ಪುನರ್‌ಯೌವನ ಪಡೆದು ಬಂದಿದ್ದ. ತೋಳದ ಗೊಗ್ಗರದನಿಯಲ್ಲಿ ಹರೆಯದ ಪ್ರತಿಯೊಂದೂ ತನಗೆ ಪ್ರಿಯವೆಂದು ಸಾರುತ್ತಿದ್ದ.

ಹತ್ತಿರದಲ್ಲೇ ಬಸುರಿ ಹೆಂಗಸೊಬ್ಬಳು ನಡುಗುತ್ತ ನಿಂತಿದ್ದಳು.

ಅವನು ನಾಚಿಕೆ ಬಿಟ್ಟು ಮಾತು ಮುಂದುವರಿಸಿದ, ತಾನೊಬ್ಬ ಶಿಸ್ತಿನ ಮನುಷ್ಯನೆಂದು ಪರಿಚಯಮಾಡಿಕೊಂಡ. ಹೇಗೆ ಎಲ್ಲೆಲ್ಲೂ ಕಣಜಗಳನ್ನು ಖಾಲಿ ಮಾಡಿ, ಆ ಮೂಲಕ ಅವಕ್ಕೆ ವ್ಯವಸ್ಥೆ ತಂದುಕೊಟ್ಟೆನೆಂದು ವಿವರಿಸಿದ.

ಗುಬ್ಬಚ್ಚಿಗಳಿಗೆ ತುಣುಕೆಸೆಯುವಂತೆ ಬಡವರಿಂದ ಕಸಿದ ರೊಟ್ಟಿತುಂಡನ್ನು ಬಡವರಿಗೇ ಎಸೆಯುತ್ತ ಅವರ ಹೊಟ್ಟೆ ತುಂಬಿಸಿದ್ದ.

ಅವನ ಧ್ವನಿ ಒಮ್ಮೆ ಜೋರಾಗಿ, ಒಮ್ಮೆ ಮೆಲ್ಲಗೆ, ಆದರೂ ಕರ್ಕಶವಾಗಿ ಕೇಳಿಸುತ್ತಿತ್ತು.

ಏರುದನಿಯಲ್ಲಿ ಅವನು ಬರಲಿರುವ ಮಹಾದಿನಗಳನ್ನು ಕುರಿತು ಮಾತಾಡಿದ. ತಗ್ಗುದನಿಯಲ್ಲಿ ಹೆಂಗಸರಿಗೆ ಕಾಗೆ, ಕಡಲಹಕ್ಕಿಗಳನ್ನು ಬೇಯಿಸಿ ಬಡಿಸುವುದು ಹೇಗೆಂದು ಕಲಿಸಿದ. ಈ ನಡುವೆ ಅವನ ಬೆನ್ನು ಚಡಪಡಿಸುತ್ತಿತ್ತು. ಯಾರು ಯಾವಾಗ ಇರಿಯುವರೊ ಎಂದು ಅವನು ನಿರಂತರ ನಾಲ್ಕೂ ಕಡೆಯೂ ಕಣ್ಣಿಟ್ಟಿರುತ್ತಿದ್ದ.

ಐದೈದು ನಿಮಿಷಕ್ಕೂ ಸಂಕ್ಷೇಪದಲ್ಲಿ ಮಾತು ಮುಗಿಸುವುದಾಗಿ ಜನತೆಗೆ ಆಶ್ವಾಸನೆ ನೀಡುತ್ತ ಆ ರಣಶಿವ ಮಾತು ಮುಂದುವರಿಸಿದ್ದ.

೧೯೩೮–೪೦

೪೬. 'ಸುರಕ್ಷಿತ' ಅನ್ನುವುದರ ಪರಿಣಾಮ

ಕೇಳಿದೆ, ನೀನು ಈ ಹಿಂದೆ
ನಿನ್ನ ಗಾಡಿಯನ್ನು ನಿಲ್ಲಿಸಿದ್ದ ಕಡೆಯೇ
ಮತ್ತೆ ನಿಲ್ಲಿಸಬೇಕೆಂದಿದ್ದೀಯಂತೆ.
ಆಗ ಅಲ್ಲಿ ನೆಲ ಗಟ್ಟಿಯಾಗಿತ್ತು.
ಬೇಡ! ಕೊಂಚ ಯೋಚಿಸು
ಹಿಂದೆ ಗಾಡಿ ನಿಲ್ಲಿಸಿದ್ದ ಕಾರಣ
ನೆಲದಲ್ಲಿ ಜಾಡೂರಿದೆ.
ಈಗ ಅಲ್ಲಿ ಚಕ್ರ ಸಿಕ್ಕಿಹಾಕಿಕೊಳ್ಳುತ್ತದೆ.

೧೯೩೯

೪೭. ಭಾವಗೀತೆಗೆ ಕೆಟ್ಟ ಕಾಲ

ಹೌದು, ನಾನು ಬಲ್ಲೆ : ಸುಖಪುರುಷರು ಮಾತ್ರ
ಎಲ್ಲರಿಗೂ ಪ್ರೀತಿಪಾತ್ರರಾಗುತ್ತಾರೆ.
ಅವರ ಧ್ವನಿ ಮಧುರ, ಮುಖ ಸುಂದರ.

ಅಂಗಳದ ಮೋಟುಮರ
ಮಣ್ಣು ಕೆಟ್ಟಿದೆಯೆಂದು ಸಾರಿ ಹೇಳುತ್ತದೆ
ಆದರೆ ದಾರಿಹೋಕರು ಮೋಟೆಂದು ಹಳಿಯುವುದು ಆ ಮರವನ್ನೇ.
ಅದು ಸರಿಯೂ ಸರಿ.

ಜಲಸಂಧಿಯ ಹಸಿರುದೋಣಿಗಳು, ಮೋಜುನಾವೆಗಳು
ನನ್ನ ಕಣ್ಣಿಗೆ ಬೀಳುವುದಿಲ್ಲ
ಅಲ್ಲಿ ನನಗೆ ಕಾಣಿಸುವುದು ಮೀನುಗಾರರ ಚಿಂದಿಬಲೆಗಳು ಮಾತ್ರ
ಹುಡುಗಿಯರ ಎದೆ ಬೆಚ್ಚಗಿದೆ
ಆದರೆ ನಲವತ್ತರ ಹಳ್ಳಿ ಹೆಂಗಸು
ಗೂನು ಬೆನ್ನಾಗಿ ನಡೆಯುವುದನ್ನು ಕುರಿತೇ
ನಾನೇಕೆ ಮಾತಾಡುತ್ತೇನೆ?

ನನ್ನ ಗೀತೆಗಳಲ್ಲಿ ಒಂದಾದರೂ ಪ್ರಾಸ
ಬಹುಮಟ್ಟಿಗೆ ದುಸ್ಸಾಹಸವೆಂದು ನನಗೆ ತೋರುತ್ತದೆ.

ನನ್ನೊಳಗೆ ಸೆಣಸಾಡುತ್ತಿವೆ
ಹೂಗಾಲದ ಸೇಬಿನ ಮರವನ್ನು ಕಂಡಾಗಿನ ಸಂಭ್ರಮ
ಹಾಗೂ 'ಬಣ್ಣ ಹೊಡೆಯುವವನ' ಭಾಷಣಗಳ ಬಗ್ಗೆ ಭಯ
ಆದರೆ ಎರಡನೆಯದಷ್ಟೇ
ನನ್ನನ್ನು ಮೇಜಿನ ಬಳಿಗೆ ಸೆಳೆಯುತ್ತದೆ.

೧೯೩೯

೪೮. ಸ್ವೀಡನ್ನಿನ ಒಂದು ನಿಸರ್ಗಚಿತ್ರ

ಬೂದುಬಣ್ಣದ ಪೈನ್‌ಮರಗಳ ಕೆಳಗೊಂದು ಮುರಿದುಬೀಳುತ್ತಿರುವ ಮನೆ.
ಹಾಳಿನ ನಡುವೆ ಬಿಳಿಮೆರಗು ಲೇಪಿಸಿದ ಒಂದು ಪೆಠಾರಿ.
ಇದೇನು ಬಲಿಪೀಠವೆ? ಅಥವಾ ಮಾರಾಟದ ಮೇಜೆ? ಅದು ಪ್ರಶ್ನೆ.
ಏಸುವಿನ ದೇಹ ವಿಕ್ರಯವಾದದ್ದು ಇಲ್ಲಿಯೆ? ಅಥವಾ ಅವನ ರಕ್ತ ಹರಿದದ್ದೊ?
ಅಥವಾ ಅವನ ಬಟ್ಟೆಬೂಟುಗಳು ಉತ್ಸವಗೊಂಡದ್ದೊ?
ಇದು ಲೌಕಿಕ ಇಲ್ಲವೇ ಪಾರಲೌಕಿಕ ಲಾಭಸಂಪಾದನೆಗೆ ಜಾಗವೆ?
ಇಲ್ಲಿ ಪಾದ್ರಿಗಳು ಮಾರಾಟಕ್ಕೆ ತೊಡಗಿದ್ದರೆ? ಅಥವಾ ವರ್ತಕರು ತತ್ವ ಬೋಧಿಸಿದರೆ?
ಪೈನ್‌ಮರಗಳು ದೇವರ ಸುಂದರಸೃಷ್ಟಿ
ನೆರೆಯ ಒಬ್ಬ ಮರಕಟಕ ಅವನ್ನು ಕೆಡವಿ ಉರುಳಿಸಿದ್ದಾನೆ.

೧೯೩೯

ಸ್ಟೈಫಿನ್ ತಾರಾಮಂಡಳ

೪೯. ಸಹ-ರಂಗಕರ್ಮಿ ಮಾರ್ಗರೆಟ್ ಸ್ಟೈಫಿನ್‌ಳ ನಿಧನಾನಂತರ

ನೆನಪಾಗುತ್ತದೆ : ಆ ನನ್ನ ಕಿರಿಯ ಗುರು
ಅವಳ ಕಣ್ಣುಗಳು, ಕೋಪಗೊಂಡಾಗ ಅವುಗಳಿಂದ ಹಾರುತ್ತಿದ್ದ ನೀಲಿಕಿಡಿಗಳು
ಅಗಲವಾದ ಕೆಳ ಅಂಚೂ, ಆಳವಾದ ತಲೆಗೊಂಗಡಿಗಳೂ ಇದ್ದ ಅವಳ ಮೇಲುಕೋಟು
ಬಳಸಿ ಬಳಸಿ ಹಳೆಯದಾಗಿದ್ದುದು
ಯಾವದಕ್ಕೆ ಸ್ಟೈಫಿನ್ ತಾರಾಮಂಡಳದ ಮೃಗಶಿರಾ ನಕ್ಷತ್ರವೆಂದು ಹೆಸರಿಟ್ಟಿದ್ದೆನೊ ಅದು.
ಕತ್ತೆತ್ತಿ ನೋಡುತ್ತೇನೆ, ತಲೆಕೊಡವಿಕೊಂಡು ಗಮನಿಸುತ್ತೇನೆ
ಆಗಾಗ ಅಲ್ಲಿ ಅವಳು ಮೆಲ್ಲಗೆ ಕೆಮ್ಮುವುದು ಕೇಳಿಸುತ್ತದೆ.

೫೦. ಭಗ್ನಾವಶೇಷ

ಆ ಮರದ ಡಬ್ಬ ಇಲ್ಲೇ ಇದೆ, ಅದರಲ್ಲಿ ನಾಟಕರಚನೆಗೆಂದು
   ಹಾಕಿಕೊಂಡ ಟಿಪ್ಪಣಿಗಳು ತುಂಬಿವೆ.
ಬವೇರಿಯಾದ ಚಾಕುಗಳಿವೆ, ನಿಂತು ಓದುವ ಮೇಜಿದೆ
ಗೋಡೆಯ ಮೇಲೆ ಕಪ್ಪುಹಲಗೆಯಿದೆ, ಮುಖವಾಡಗಳಿವೆ
ಪುಟ್ಟ ಟ್ರಾನ್ಸ್‌ಮಿಟರ್ ಇದೆ, ಮಿಲಿಟರಿ ಕೈಚೀಲವಿದೆ
ಉತ್ತರವಿದೆ, ಆದರೆ ಪ್ರಶ್ನೆ ಕೇಳುವವರಿಲ್ಲ
ಹೂದೋಟದಲ್ಲಿ ಮೇಲೆ ಎತ್ತರದಲ್ಲಿ ನಿಂತಿದ
ಸ್ಟೈಫಿನ್ ತಾರಾಮಂಡಳ.

೧೯೪೧

೫೧. ಈ ನಗರದ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟು

ಈ ನಗರದ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟು
ನಾನು ವರ್ತಿಸುವುದು ಹೀಗೆ :
ನಗರ ಹೊಕ್ಕೊಡನೆ ನನ್ನ ಹೆಸರು ತಿಳಿಸುತ್ತೇನೆ
ನನ್ನ ಕಾಗದಪತ್ರಗಳನ್ನು ತೋರಿಸುತ್ತೇನೆ
ಅವು ಖರೆ ಎಂದು ಪ್ರಮಾಣಿಸಲು ಕಳ್ಳನಕಲು ಮಾಡಲಾಗದ ಮೊಹರುಗಳನ್ನು ಅಲ್ಲಿ ಒತ್ತಿದೆ.
ಏನಾದರೂ ಹೇಳಿಕೆ ಕೊಡಬೇಕಾಗಿ ಬಂದರೆ, ಯಾರು ವಿಶ್ವಾಸಾರ್ಹರೆಂದು ನನ್ನಲ್ಲಿ ಪುರಾವೆಯಿದೆಯೊ
ಅಂತಹವರನ್ನೇ ಸಾಕ್ಷಿಗಳಾಗಿ ಹೆಸರಿಸುತ್ತೇನೆ.
ನಾನು ತೆಪ್ಪಗಿರುವಾಗ ನಾನೇನನ್ನೂ ಯೋಚಿಸುತ್ತಿಲ್ಲವೆಂದು ತೋರಿಸಿಕೊಳ್ಳಲು
ಮುಖದ ಮೇಲೆ ಶೂನ್ಯಮುದ್ರೆ ಹಾಕಿಕೊಳ್ಳುತ್ತೇನೆ.
ಹೀಗೆ
ಯಾರಿಗೂ ನನ್ನನ್ನು ನಂಬಲು ಬಿಡುವುದಿಲ್ಲ.
ಯಾವದೇ ತರಹದ ನಂಬಿಕೆಯಲ್ಲೂ ನನಗೆ ನಂಬಿಕೆಯಿಲ್ಲ.

ಹೀಗೇಕೆ ಮಾಡುತ್ತೇನೆಂದರೆ : ಈ ನಗರದ ಪರಿಸ್ಥಿತಿಯಲ್ಲಿ
ನಂಬಿಕೆ ಅಸಾಧ್ಯವೆಂದು ಗೊತ್ತಿರುವ ಕಾರಣ.

ಆದರೂ ಕೂಡ
ಒಮ್ಮೊಮ್ಮೆ ಅನ್ಯಮನಸ್ಕನಾಗಿರುವಾಗಲೊ
ಕಾರ್ಯಮಗ್ನನಾಗಿರುವಾಗಲೊ
ನಾನು ವಂಚಕನೊ ಹೇಗೆ? ಸುಳ್ಳು ಹೇಳುತ್ತಿಲ್ಲವೆ?
ಏನಾದರೂ ತಂಟೆ ಮಾಡಲು ಬಂದವನಲ್ಲ ತಾನೆ?
ಎಂದು ಕೇಳಿ ಅವರು ಥಕ್ಕನೆ ನನ್ನನ್ನು ಸಿಕ್ಕಿಬೀಳಿಸುತ್ತಾರೆ.
ಆಗ ನಾನು ಇದ್ದಿದ್ದೂ ಕಕ್ಕಾಬಿಕ್ಕಿಯಾಗಿ, ನನ್ನ ವಿರುದ್ಧವೇ ಏನೇನೊ ಒದರುತ್ತ
ನನ್ನ ಪರವಾಗಿರುವ ಪುರಾವೆಗಳನ್ನು ತಿಳಿಸಲು ಮರೆಯುತ್ತೇನೆ
ಆಗ, ಬದಲಾಗಿ, ನನ್ನ ಬಗ್ಗೆ ನನಗೇ ನಾಚಿಕೆಯಾಗುತ್ತದೆ.

೧೯೫೧?

೫೨. ಪ್ರಜಾಹಿತೈಷಿ ನ್ಯಾಯಾಧೀಶ

ಲಾಸ್ ಏಂಜಲೀಸ್ ನಗರದಲ್ಲಿ
ಅಮೆರಿಕದ ಪೌರರಾಗಬಯಸುವವರನ್ನು ತನಿಖೆಮಾಡುವ ನ್ಯಾಯಾಧೀಶನ ಮುಂದೆ
ಒಬ್ಬ ಮೂಲ ಇಟಲಿ ನಿವಾಸಿ, ಹೊಟೆಲ್ ನಡಸುವವ, ಹಾಜರಾದ.
ಜೋರು ತಯಾರಿಮಾಡಿಕೊಂಡಿದ್ದರೂ
ದುರದೃಷ್ಟವಶಾತ್ ಇಂಗ್ಲಿಷ್ ಬಾರದ ಕಾರಣ
ಪರೀಕ್ಷೆಯಲ್ಲಿ ಹೀಗೆ ಉತ್ತರಿಸಿದ್ದ :
"ಎಂಟನೆ ತಿದ್ದುಪಡಿ ಯಾವುದು?"
ಇಟಲಿ ನಿವಾಸಿ ಹಿಂಜರಿಯುತ್ತ ಕೊಟ್ಟ ಉತ್ತರ : "೧೪೯೨".
ಅರ್ಜಿದಾರರಿಗೆ ದೇಶಭಾಷೆ ಗೊತ್ತಿರಬೇಕೆಂಬ ಕಾಯಿದೆಯಿಂದಾಗಿ
ಅವನ ಅರ್ಜಿ ತಿರಸ್ಕೃತವಾಯಿತು.
ಅವನು ಮತ್ತೆ ಬಂದ, ಮೂರು ತಿಂಗಳ ಕಾಲ ಭಾಷಾಭ್ಯಾಸ ಮುಂದುವರಿಸಿ.
ಆದರೂ ಭಾಷೆ ಬರದ ಕೊರತೆಯಿನ್ನೂ ಇದ್ದೇ ಇತ್ತು. ಈ ಬಾರಿ ಅವನು ಎದುರಿಸಿದ ಪ್ರಶ್ನೆ :
"ನಾಡಯುದ್ಧದಲ್ಲಿ ಗೆದ್ದ ಜೆನರಲ್ ಯಾರು?"
ಅವನ ಉತ್ತರ, ದನಿಯೆತ್ತರಿಸಿ ಸೌಜನ್ಯದಿಂದ ಕೊಟ್ಟದ್ದು : "೧೪೯೨".
ಹಿಂದಿರುಗಿ ಹೋಗಿ ಮೂರನೆ ಸಲ ಬಂದಾಗ ಅವನು ಉತ್ತರಿಸಿದ ಮೂರನೆ ಪ್ರಶ್ನೆ :
"ರಾಷ್ಟ್ರಾಧ್ಯಕ್ಷರನ್ನು ಎಷ್ಟು ವರ್ಷದ ಅವಧಿಗೆ ಆರಿಸಲಾಗುತ್ತೆ?"
ಮತ್ತೆ ಅದೇ ಉತ್ತರ : "೧೪೯೨".
ಆ ಮನುಷ್ಯನನ್ನು ಮೆಚ್ಚಿಕೊಂಡಿದ್ದ ನ್ಯಾಯಾಧೀಶನಿಗೆ ಅವನು ಹೊಸಭಾಷೆ ಕಲಿಯಲಾರನೆಂದು ಈಗ ಖಚಿತವಾಯಿತು.
ಅವನು ಹೇಗೆ ಹೊಟ್ಟೆ ಹೊರೆಯುತ್ತಾನೆಂದು ಕೇಳಿದ್ದಕ್ಕೆ ಕಷ್ಟದ ದುಡಿಮೆಯಿಂದ ಎಂದು ತಿಳಿದುಬಂತು.
ಮತ್ತೆ ನಾಲ್ಕನೆ ಬಾರಿ ಹಾಜರಾದಾಗ ನ್ಯಾಯಾಧೀಶ ಮುಂದಿಟ್ಟ ಪ್ರಶ್ನೆ :
"ಅಮೆರಿಕವನ್ನು ಕಂಡು ಹಿಡಿದದ್ದು ಯಾವಾಗ?"
ಅವನು ಸರಿಯಾಗಿ "೧೪೯೨" ಎಂದು ಉತ್ತರ ಕೊಟ್ಟನೆಂದು
ಅವನಿಗೆ ಪೌರತ್ವ ನೀಡಲಾಯಿತು.

೧೯೮೨

ಹಾಲಿವುಡ್ ಶೋಕಗೀತೆಗಳು

೫೩

ಹಾಲಿವುಡ್ ಹಳ್ಳಿಯನ್ನು ಈ ಸೀಮೆಯ ಜನ
ಸ್ವರ್ಗದ ಬಗ್ಗೆ ತಮಗಿರುವ ಕಲ್ಪನೆಗೆ ತಕ್ಕಂತೆ ರೂಪಿಸಿಕೊಂಡಿದ್ದಾರೆ.
ಈ ಜನರ ಲೆಕ್ಕಾಚಾರ–
ದೇವರಿಗೆ ಸ್ವರ್ಗನರಕಗಳು ಇರಬೇಕೆನಿಸಿದಾಗ
ಎರಡು ಬೇರೆ ಬೇರೆ ತಾಣಗಳನ್ನು ನಿರ್ಮಿಸುವ ಅಗತ್ಯ ಕಾಣಲಿಲ್ಲ
ಬದಲು ಒಂದೇ ಸಾಕೆನಿಸಿತು : ಅದೆಂದರೆ ಸ್ವರ್ಗ–
ಬದುಕಿನಲ್ಲಿ ಅನುಕೂಲವಿಲ್ಲದವರಿಗೆ, ಯಶಸ್ವಿಯಾಗದವರಿಗೆ
ಅದು ನರಕವಾಗುತ್ತದೆ.

೫೪

ನಗರದ ಮೇಲೆ ರಕ್ಷಣಾಇಲಾಖೆಯ
ಯುದ್ಧವಿಮಾನಗಳು ಗಸ್ತು ಹೊಡೆಯುತ್ತಿರುತ್ತವೆ
ಕೆಳಗಿನ ದುರಾಸೆ, ದುರವಸ್ಥೆಗಳು
ತಮ್ಮನ್ನು ತಾಗದಿರಲೆಂದು, ಎತ್ತರದಲ್ಲಿ.

೫೫

ದಿನವೂ ನನ್ನ ಅವೊತ್ತಿನ ಅನ್ನ ಸಂಪಾದಿಸಿಕೊಳ್ಳಲು
ಪೇಟೆಗೆ ಹೋಗುತ್ತೇನೆ, ಅಲ್ಲಿ ಸುಳ್ಳನ್ನು ಕೊಳ್ಳುತ್ತಾರೆ.
ಆಸೆಯಿಂದ
ನನ್ನ ಸರದಿಗೆ ಕಾಯುತ್ತೇನೆ, ಮಾರುವವರ ಮಧ್ಯೆ.

೧೯೪೨

೫೬. ಕೆಸರುಗುಂಡಿ

ನಾನು ನೋಡಿದ್ದೇನೆ : ನನ್ನ ಅನೇಕ ಸ್ನೇಹಿತರೂ
ಅವರಲ್ಲೆಲ್ಲ ಅತ್ಯಂತ ಪ್ರಿಯನಾಗಿದ್ದ ಅವನೂ
ನಾನು ದಿನವೂ ಬದಿಹಾಯ್ದುಹೋಗುವ ಆ ಕೆಸರುಗುಂಡಿಯಲ್ಲಿ
ಅಸಹಾಯರಾಗಿ ಮುಳುಗುವುದನ್ನು.

ಆ ಮುಳುಗಾಟ ಒಂದು ಹಗಲಿಗೇ ಮುಗಿಯುತ್ತಿರಲಿಲ್ಲ
ಹಲವೊಮ್ಮೆ ವಾರಗಟ್ಟಲೆ ಎಳೆಯುತ್ತಿದ್ದು
ಅದರ ಭೀಷಣತೆಯನ್ನು ಇನ್ನೂ ಹೆಚ್ಚಿಸಿತ್ತು –
ಆಗಾಗಲೇ ಹಲವರನ್ನು ಬಲಿ ತೆಗೆದುಕೊಂಡಿದ್ದ
ಆ ಕೆಸರುಗುಂಡಿಯನ್ನು ಕುರಿತು
ನಾನೂ ಅವನೂ ಮಾತಾಡಿಕೊಳ್ಳುತ್ತಿದ್ದುದರ ನೆನಪು ಸಹ.

ಅಸಹಾಯನಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದೆ :
ಮೈತುಂಬ ಜಿಗಣೆ ಅಂಟಿಕೊಂಡು,
ಮಿರಮಿರ ಮಿರುಗುತ್ತ ನಿಧಾನವಾಗಿ ಸರಿಯುತ್ತಿದ್ದ ಕೆಸರಿನಲ್ಲಿ
ಹಿಂದಕ್ಕೆ ಒರಗಿ ಕೂತ ಅವನನ್ನು,
ಇನ್ನೇನು ಮುಳುಗಿಹೋಗಲಿದ್ದ ಅವನ ಮುಖದ ಮೇಲಿನ
ಭಯಾನಕವಾದ
ಸ್ವರ್ಗಸುಖ ಸೂಸುವ ನಗೆಯನ್ನು.

೧೯೪೨?

ನಗರ ದೃಶ್ಯಮಾಲಿಕೆ

೫೭

ಹಿತ್ತಲಲ್ಲಿ ಒಗೆದ ಬಟ್ಟೆಗಳು ನೇತಾಡುತ್ತಿವೆ
ಹೆಂಗಸಿನ ಗುಲಾಬಿಚಡ್ಡಿ
ಗಾಳಿ ಅದರ ಮೈಮೇಲೇರುತ್ತದೆ.

೫೮

ಮಹಾನಗರ ಮಲಗಿ ನಿದ್ರಿಸುತ್ತಿದೆ
ನಿದ್ರೆಯನ್ನು ಗಬಗಬ ತುರುಕಿಕೊಳ್ಳುತ್ತ.
ಮಹಾನಗರ ಬಚ್ಚಲಲ್ಲಿ ಬಿದ್ದುಕೊಂಡಿದೆ
ಗೊರಗೊರ ಶಬ್ದ ಮಾಡುತ್ತ.
ಅಸಭ್ಯ ಕನಸುಗಳು ಹಾಗೂ ಮುಂದಿನೂಟದ ಚಿಂತೆ ಅದನ್ನು ಕಾಡಿವೆ.

೫೯

ಒಂಬತ್ತು ಮಂದಿ ನಗರದ ಜನ ಮಲಗಿ ನಿದ್ರಿಸುತ್ತಿದ್ದಾರೆ
ತಮ್ಮ ಹಾಗೂ ಇತರರ ಪಾಪಗಳಿಂದ
ದಣಿದು ಸುಸ್ತಾಗಿ.
ಅವರ ಸಲಕರಣೆಗಳು
ಮರುದಿನದ ದುಡಿಮೆಗೆ ಸಿದ್ಧವಾಗಿ ಬದಿಯಲ್ಲಿವೆ.
ಖಾಲಿರಸ್ತೆಗಳಲ್ಲಿ ಕೇಳಿಬರುತ್ತಿದೆ, ರಾತ್ರಿಕಾವಲಿನವರ ಹೆಜ್ಜೆಸಪ್ಪಳ.
ದೂರದ ವಿಮಾನದಾಣದಲ್ಲಿ
ಕಷ್ಟದಿಂದ ಭೂಮಿ ಬಿಟ್ಟೇಳುತ್ತಿವೆ
ಬಾಂಬರುಗಳು.

೧೯೪೩

೬೦. ಹೊಸಯುಗಗಳು

ಹೊಸಯುಗಗಳು ಏಕಾಏಕಿ ಷುರುವಾಗುವುದಿಲ್ಲ.
ನಮ್ಮ ಅಜ್ಜನಾಗಲೇ ಹೊಸಯುಗದಲ್ಲಿ ಬಾಳುತ್ತಿದ್ದ
ನನ್ನ ಮೊಮ್ಮಗನಿನ್ನೂ ಪ್ರಾಯಶಃ ಹಳೆಯದರಲ್ಲೇ ಬಾಳುವನೇನೊ.

ಹೊಸ ಮಾಂಸ ತಿನ್ನುವುದು ಹಳೆಯ ಫೋರ್ಕುಗಳಿಂದಲೇ.

ಸ್ವಚಾಲಿತ ವಾಹನಗಳಲ್ಲ
ಟ್ಯಾಂಕುಗಳೂ ಅಲ್ಲ
ನಮ್ಮ ಸೂರುಗಳ ಮೇಲಿನ ವಿಮಾನಗಳಲ್ಲ
ಬಾಂಬರುಗಳೂ ಅಲ್ಲ.

ಹೊಸ ಆ್ಯಂಟೆನಾಗಳು ಹರಡಿದ್ದು ಹಳೆಯ ಮೂರ್ಖತನಗಳನ್ನೇ
ವಿವೇಕ ಸಾಗಿಬಂದದ್ದು ಬಾಯಿಂದ ಬಾಯಿಗೆ.

೧೯೪೩?

೬೧. ಚಹ ಮಾಡುತ್ತ ದಿನಪತ್ರಿಕೆ ಓದುವುದು

ಮುಂಜಾನೆ ದಿನಪತ್ರಿಕೆಯಲ್ಲಿ
ದೊರೆಗಳ, ಧರ್ಮಗುರುಗಳ, ಬ್ಯಾಂಕರುಗಳ, ಎಣ್ಣೆದಣಿಗಳ
ಯುಗಪ್ರವರ್ತಕ ಯೋಜನೆಗಳನ್ನು ಕುರಿತು ಓದುತ್ತೇನೆ.
ಇನ್ನೊಂದು ಕಣ್ಣು ಚಹದ ಪಾತ್ರೆಯ ಮೇಲಿದೆ
ನೀರು ಆವಿಯಾಡುತ್ತದೆ, ಗುಳುಗುಳು ಗುಳ್ಳೆಗಳೇಳುತ್ತವೆ, ಮತ್ತೆ ತಿಳಿಗೊಳ್ಳುತ್ತದೆ
ನಂತರ ಮೇಲುಕ್ಕಿಹರಿದು ಬೆಂಕಿ ತಣ್ಣಗಾಗುತ್ತದೆ.

೧೯೪೨?

೬೨. ಈಗ ಕಗ್ಗತ್ತಲಕಾಲ

ಆ ಬೇರೊಂದು ನಗರದಲ್ಲಿ
ಈಗ ಕಗ್ಗತ್ತಲಕಾಲ
ಆದರೂ ನನ್ನ ಹೆಜ್ಜೆ ಹಗುರವಾಗಿದೆ
ಹಣೆ ಸುಕ್ಕುಗಟ್ಟಿಲ್ಲ.

ದೀರ್ಘಕಾಲ ಕೊರೆತಕ್ಕೊಗ್ಗಿದ ಮೀನಗಾರರಂತೆ
ಮನುಷ್ಯಜಾತಿ ಬಲು ಗಡುಸು, ದೃಢ
ಆದರೂ ಎದೆ ಮಿಡಿಯುವುದು ಬೇಗ
ಮತ್ತು ಸ್ನೇಹದ ನಗೆ ಮೃದು.

೧೯೪೩

೬೩. ದುಷ್ಟನ ಮುಖವಾಡ

ಗೋಡೆಯ ಮೇಲೆ ಒಂದು ಜಪಾನೀ ಮರದ ಕೆತ್ತನೆ ತೂಗು ಹಾಕಿದೆ
ಒಬ್ಬ ದುಷ್ಟರಾಕ್ಷಸನ ಮುಖವಾಡ, ಬಂಗಾರದ ಲೇಪ ಹಚ್ಚಿದೆ.
ಕನಿಕರದಿಂದ ನೋಡುತ್ತೇನೆ
ಹಣೆಯ ಮೇಲಿನ ಉಬ್ಬಿದ ನರಗಳು ಸೂಚಿಸುತ್ತವೆ :
ದುಷ್ಟನಾಗುವುದು ಎಷ್ಟು ಕಷ್ಟ.

೧೯೪೨

೬೪. ಬದುಕಿ ಉಳಿದ ನಾನು

ನಾನು ಚೆನ್ನಾಗಿ ಬಲ್ಲೆ : ಅನೇಕ ಸ್ನೇಹಿತರು ಸತ್ತೂ ನಾನು ಬದುಕಿ ಉಳಿದದ್ದು
ಬರಿಯ ಅದೃಷ್ಟ ಅಷ್ಟೆ. ಆದರೆ ರಾತ್ರಿ ಕನಸಿನಲ್ಲಿ
ಆ ಸ್ನೇಹಿತರು ನನ್ನನ್ನು ಕುರಿತಾಡಿದರು : 'ಗಟ್ಟಿಗರಷ್ಟೇ ಬದುಕಿ ಉಳಿಯುತ್ತಾರೆ'.
ಕೇಳಿ ನನ್ನ ಬಗ್ಗೆ ನನಗೇ ದ್ವೇಷ ಹುಟ್ಟಿತು.

೧೯೪೪

೬೫. ಪ್ರಬಲ ರಾಷ್ಟ್ರನಾಯಕನಿಗೆ ಕಾಯಿಲೆ ಎಂಬ ಸುದ್ದಿ ಕೇಳಿ

ಬಿಟ್ಟರೆ ದಿಕ್ಕಿಲ್ಲದ ಈ ರಾಷ್ಟ್ರನಾಯಕ ಮುಖ ಸಿಂಡರಿಸಿದರೆ
ಎರಡೆರಡು ಸಾಮ್ರಾಜ್ಯಗಳು ತತ್ತರಿಸುತ್ತವೆ.
ಬಿಟ್ಟರೆ ದಿಕ್ಕಿಲ್ಲದ ಈ ರಾಷ್ಟ್ರನಾಯಕ ಸತ್ತರೆ
ಕಂದನ ಹಾಲಿಗೆ ದಿಕ್ಕಿಲ್ಲದ ತಾಯಿಯಂತೆ ದೇಶ ಹತ್ತೂಕಡೆ ನೋಡುತ್ತದೆ.
ಬಿಟ್ಟರೆ ದಿಕ್ಕಿಲ್ಲದ ಈ ರಾಷ್ಟ್ರನಾಯಕ ಸತ್ತ ವಾರದ ಮೇಲೆ ಮತ್ತೆ ಹುಟ್ಟಿಬಂದರೆ
ಇಡೀ ದೇಶದಲ್ಲಿ ಅವನಿಗೊಂದು ಮನೆಯಾಳಿನ ಕೆಲಸ ಕೊಡುವವರು ದಿಕ್ಕಿಲ್ಲ.

೧೯೪೪

೬೬. ಎಲ್ಲ ಬದಲಾಗುತ್ತದೆ

ಎಲ್ಲ ಬದಲಾಗುತ್ತದೆ. ಕೊನೆಯುಸಿರಿನೊಂದಿಗೆ
ನೀನು ಮತ್ತೆ ಶುರು ಮಾಡಬಹುದು.
ಆದರೆ ಆದದ್ದು ಆಗಿಹೋಗಿದೆ.
ಒಮ್ಮೆ ಮದ್ಯದಲ್ಲಿ ಬೆರಸಿದ ನೀರನ್ನು
ನೀನು ಮತ್ತೆ ಸೋಸಿ ತೆಗೆಯುವ ಹಾಗಿಲ್ಲ.

ಆದದ್ದು ಆಗಿ ಹೋಗಿದೆ.
ಒಮ್ಮೆ ಮದ್ಯದಲ್ಲಿ ಬೆರಸಿದ ನೀರನ್ನು
ನೀನು ಮತ್ತೆ ಸೋಸಿ ತೆಗೆಯುವ ಹಾಗಿಲ್ಲ. ಆದರೆ
ಎಲ್ಲ ಬದಲಾಗುತ್ತದೆ. ಕೊನೆಯುಸಿರಿನೊಂದಿಗೆ
ನೀನು ಮತ್ತೆ ಶುರು ಮಾಡಬಹುದು.

೧೯೪೪?

೬೭. ಚರಮಗೀತೆ

ಹಾಗಾದರೆ ಅಂತಿಮ ಶಿಲಾಲೇಖ ಹೀಗಿರಲಿ
(ಆ ಮುರಿದ ಕಲ್ಲುತುಂಡು, ಯಾರೂ ಓದುಗರಿಲ್ಲದ್ದು) :

ಭೂಮಂಡಳ ಸಿಡಿಯಲಿದೆ
ಯಾರಿಗೆ ಅದು ಜನ್ಮವಿತ್ತಿದೆಯೊ ಅವರೇ ಅದನ್ನು ನಾಶಮಾಡಲಿದ್ದಾರೆ.

ಒಟ್ಟುಗೂಡಿ ಬದುಕುವ ಮಾರ್ಗವೆಂದು ನಾವು ಕಂಡುಕೊಂಡದ್ದು
ಕೇವಲ ಬಂಡವಾಳಗಾರಿಕೆಯನ್ನು.
ಭೌತಶಾಸ್ತ್ರದ ಅನ್ವೇಷಣೆಯಲ್ಲಿ ನಾವು ಕಂಡುಕೊಂಡದ್ದು ಇನ್ನೂ ಹೆಚ್ಚೇ :
ಅದೆಂದರೆ, ಒಟ್ಟುಗೂಡಿ ಸಾಯುವುದು.

೧೯೪೫?

೬೮. ಜರ್ಮನಿ ೧೯೪೫

ಮನೆಯೊಳಗೆ ಮಹಾಮಾರಿ
ಹೊರಗೆ ಥಂಡಿಯ ಸಾವು.
ನಾವೆಲ್ಲಿ ಹೋಗಬೇಕೀಗ?
ಹೆಣ್ಣುಹಂದಿ ಹುಲ್ಲಮೇಲೆಯೇ 'ಮಾಡಿ' ಕೊಂಡಿದೆ
ಆ ಹೆಣ್ಣುಹಂದಿ ನನ್ನ ತಾಯಿ
ಎಲೆ ನನ್ನವ್ವ, ಎಲೆ ಹೆತ್ತವ್ವ
ನೀನೇನು ಮಾಡಿಬಿಟ್ಟೆ?

೧೯೪೫

೬೯. ಅಂತಿಗೊನೆ

ಮಸಕಿನಿಂದ ಹೊರಬಂದು
ನಮ್ಮ ಮುಂದೆ ಅರೆಗಳಿಗೆ ನಡೆದಾಡು
ದೃಢಚಿತ್ತದಿಂದ ಹಗುರಹೆಜ್ಜೆ ಹಾಕುತ್ತ
ಓ ಸ್ನೇಹಮಯಿ
ಭಯಂಕರರಿಗೆ ಭಯಂಕರಿ.

ಪರಾಙ್ಮುಖಿ, ನೀನು ಸಾವಿಗೆ
ಹೇಗೆ ಅಂಜುತ್ತಿದ್ದೆಯೆಂದು ನಾನು ಬಲ್ಲೆ
ಆದರೆ ಅದಕ್ಕೂ ಹೆಚ್ಚು ನೀನು ಅಂಜಿದ್ದು
ಮರ್ಯಾದೆಗೆಟ್ಟ ಬದುಕಿಗೆ.

ಅಧಿಕಾರಬಲವಿದ್ದವರನ್ನು
ನೀನು ತಪ್ಪಿಸಿಕೊಳ್ಳಬಿಡಲಿಲ್ಲ
ಗೊಂದಲಕಾರರೊಂದಿಗೆ ರಾಜಿಮಾಡಿಕೊಳ್ಳಲಿಲ್ಲ
ನೀನೆಂದೂ ನಿನಗಾದ ಅಪಮಾನವನ್ನು ಮರೆಯಲಿಲ್ಲ.
ಅವರ ದುಷ್ಕರ್ಮದ ಮೇಲೆ ಹುಲ್ಲು ಬೆಳೆಯಲಿಲ್ಲ.

೧೯೪೮



೪. ಮರಳಿ ತಾಯ್ನಾಡಿನಲ್ಲಿ : ಕೊನೆಗಾಲದ ಕವಿತೆಗಳು
(೧೯೪೮–೫೬)

೭೦. ಚೀನಾದ ಒಂದು ಮರದ ಕೆತ್ತನೆಯ ಸಿಂಹವನ್ನು ಕುರಿತು

ದುರ್ಜನರಿಗೆ ನಿನ್ನ ಪಂಜ ಕಂಡರೆ ಭಯ
ಸಜ್ಜನರಿಗೆ ಮೆಚ್ಚಿಗೆ ನಿನ್ನ ನಯ
ನನ್ನ ಕವಿತೆಗಳ ಬಗ್ಗೆ
ನಾನು ಕೇಳಬಯಸುವುದು
ಇದನ್ನೇ.

೧೯೫೧

೭೧. ನನಗೆ ನೆಲೆ ಕೊಟ್ಟವನು

ನನಗೆ ನೆಲೆ ಕೊಟ್ಟವನು
ಮನೆ ಕಳೆದುಕೊಂಡ.
ಹಾಡು ಬಾರಿಸಿದವನಿಂದ
ವಾದ್ಯ ಕಸಿದುಕೊಂಡರು.

ಪ್ರಾಣಘಾತಕ ನಾನೆಂದು
ಈಗ ಅವರನ್ನುತ್ತಾರೆಯೆ?
ಅಥವಾ : ಅವರ ಸರ್ವಸ್ವವನ್ನೂ ದೋಚಿದವರು
ಪ್ರಾಣಘಾತಕರೊ?

೧೯೫೨

ಬುಕೋವ್ ಶೋಕಗೀತೆಗಳು

೭೨

ಗಾಳಿ ಬೀಸುತ್ತಿದ್ದರೆ
ಹಾಯಿ ಏರಿಸುತ್ತೇನೆ.
ಹಾಯಿಯಿಲ್ಲದಿದ್ದರೆ
ಬೊಂಬುತಾಟುಗಳಿಂದ
ಕಟ್ಟಿಕೊಳ್ಳುತ್ತೇನೆ.

೧೯೫೩

೭೩. ಚಕ್ರ ಬದಲಾಯಿಸುವುದು

ದಾರಿಬದಿಯಲ್ಲಿ ಕೂತಿದ್ದೇನೆ
ಡ್ರೈವರ್ ಚಕ್ರ ಬದಲಾಯಿಸುತ್ತಿದ್ದಾನೆ.
ನಾನೆಲ್ಲಿಂದ ಬಂದೆನೋ ಆ ಸ್ಥಳ ನನಗಿಷ್ಟವಿಲ್ಲ.
ನಾನೆಲ್ಲಿಗೆ ಹೋಗುತ್ತೇನೋ ಆ ಸ್ಥಳವೂ ನನಗಿಷ್ಟವಿಲ್ಲ.
ಹಾಗಾದರೆ ನಾನೇಕೆ ತಾಳ್ಮೆಗೆಟ್ಟು
ಅವನು ಚಕ್ರ ಬದಲಾಯಿಸುವುದನ್ನೇ ನೋಡುತ್ತಿದ್ದೇನೆ?

೧೯೫೩

೭೪. ಹೂದೋಟ

ಕೊಳದ ಬದಿ ಫರ್ ಮತ್ತು ಬೆಳ್ಳಿಪಾಪ್ಲರ್ ಮರಗಳ ನಟ್ಟಾಳದಲ್ಲಿ
ಪೊದೆ–ಗೋಡೆಗಳ ಮರೆಯಲ್ಲೊಂದು ಹೂದೋಟ
ಮಾರ್ಚಿಯಿಂದ ಅಕ್ಟೋಬರ್‌ವರೆಗೂ ತಿಂಗಳುತಿಂಗಳೂ ಅರಳುವಂತೆ
ಲೆಕ್ಕಾಚಾರವಾಗಿ ನೆಟ್ಟ ತಿಂಗಳ ಹೂವಿನ ಗಿಡಗಳು.

ಒಮ್ಮೊಮ್ಮೆ ನಸುಕಿನ ವೇಳೆ ನಾನಿಲ್ಲಿ ಕೂತು
ಆಶಿಸುತ್ತೇನೆ : ಸದಾಕಾಲ ನಾನೂ
ಬೇರೆ ಬೇರೆ ಹವಾಮಾನಗಳಲ್ಲಿ ಒಳ್ಳೆಯದೊ ಕೆಟ್ಟದ್ದೊ
ಮನಸ್ಸಿಗೊಪ್ಪುವ ಒಂದಲ್ಲ ಒಂದನ್ನು ಮಾಡಿ ತೋರಿಸುವಂತಾದರೆ.

೧೯೫೪

೭೫. ಪರಿಹಾರ

ಜೂನ್ ಹದಿನೇಳರ ದಂಗೆಯ ನಂತರ
ಲೇಖಕಸಂಘದ ಕಾರ್ಯದರ್ಶಿ
ಸ್ಟಾಲಿನ್ ಮಹಾಮಾರ್ಗದಲ್ಲಿ ಕೈಚೀಟಿ ಹಂಚಿಸಿದ :
ಜನತೆ ಸರಕಾರದ ವಿಶ್ವಾಸ ಕಳೆದುಕೊಂಡಿದೆ
ಇಮ್ಮಡಿ ದುಡಿಯುವುದರಿಂದಷ್ಟೇ
ಅದನ್ನು ಮತ್ತೆ ಗಳಿಸುವುದು ಸಾಧ್ಯ ಎಂದು.
ಹಾಗಿದ್ದಲ್ಲಿ ಸರಕಾರ
ಜನತೆಯನ್ನು ರದ್ದುಮಾಡಿ
ಬೇರೆ ಜನತೆಯನ್ನು ಚುನಾಯಿಸುವುದು
ಹೆಚ್ಚು ಸುಲಭ ಅಲ್ಲವೆ?

೧೯೫೩

೭೬. ಹೊಗೆ

ಕೊಳದ ಬದಿ, ಮರಗಳ ನಡುವೆ ಒಂದು ಪುಟ್ಟಮನೆ
ಸೂರಿನಿಂದ ಹೊಗೆಯೇಳುತ್ತಿದೆ
ಅದಿಲ್ಲದಿದ್ದರೆ
ಮನೆ, ಮರಗಳು, ಕೊಳ
ಎಲ್ಲಕ್ಕೂ ಅದೆಷ್ಟು ಗೋಳುಬಡಿಯುತ್ತಿತ್ತು.

೧೯೫೩

೭೭. ಹೊರೇಸನನ್ನು ಓದುವಾಗ

ಮಹಾಪ್ರಳಯ ಸಹ
ಚಿರಕಾಲ ಉಳಿಯಲಿಲ್ಲ.
ಒಮ್ಮೆ ಕಪ್ಪು ಸಮುದ್ರದ ಉಬ್ಬರ
ವಿಳಿದುಹೋಗುವ ಕಾಲವೂ ಬಂತು.
ಹೌದು, ಅವಕ್ಕೂ ಹೆಚ್ಚು ಕಾಲ ಇದ್ದವು
ಎಷ್ಟಿವೆ ಮಹಾ!

?

೭೮. ಹ್ಹ! ಹ್ಹ! ಹ್ಹ! ಸಾಕ್ರಟೀಸನ ಗಿರಾಕಿಗಳು ನಕ್ಕರು

ಹ್ಹ! ಹ್ಹ! ಹ್ಹ! ಸಾಕ್ರಟೀಸನ ಗಿರಾಕಿಗಳು ನಕ್ಕರು
ಆದರೆ ಆ ಮೂರು 'ಹ್ಹ'ಗಳಲ್ಲೊಂದು
ಅವನನ್ನು ಯೋಚನೆಗೀಡುಮಾಡಿತು.

ಕಿಯೋಪ್‌ನ ಪಿರಮಿಡ್ಡಿನಲ್ಲಿ ಹನ್ನೊಂದು ದೋಷಗಳಿವೆ
ಬೈಬಲ್ಲಿನವು ಅಸಂಖ್ಯ
ನ್ಯೂಟನ್ನಿನ ಭೌತಶಾಸ್ತ್ರ
ಮೂಢನಂಬಿಕೆಗಳಿಂದ ತುಂಬಿದೆ.

ಸಿನೆಮಾ ನೋಡಿ ಮನೆಗೆ ಹಿಂದಿರುಗುತ್ತಿರುವ
ಪ್ರೇಮಿಗಳು
ರೋಮಿಯೊ–ಜೂಲಿಯಟ್‌ರಿಗೆ
ಒಂದಲ್ಲ ಒಂದು ಪಾಠ ಕಲಿಸಿಕೊಟ್ಟಾರು
ಅಜ್ದ್‌ದರ್‌ನ ಅಪ್ಪ
ಅನೇಕ ಸಲ ಮಗನನ್ನು ಬೆರಗುಗೊಳಿಸುತ್ತಿದ್ದುದುಂಟು.

೧೯೫೬

೭೯. ಧರ್ಮಾರ್ಥ ಚಿಕಿತ್ಸಾಲಯದ ಬಿಳಿಕೋಣೆಯಲ್ಲಿದ್ದಾಗ

ಧರ್ಮಾರ್ಥ ಚಿಕಿತ್ಸಾಲಯದ ಬಿಳಿಕೋಣೆಯಲ್ಲಿ
ಒಂದು ಮುಂಜಾನೆ ಕಣ್ತೆರೆದಾಗ
ಕೃಷ್ಣಪಕ್ಷಿಯೊಂದರ ದನಿ ಕೇಳಿ
ನನ್ನ ಅರಿವು ಹೆಚ್ಚಿತ್ತು.
ಆಗಾಗಲೇ ಬಹಳ ದಿನಗಳಿಂದ ನನಗೆ ಸಾವಿನಭಯ ಕಳೆದುಹೋಗಿತ್ತು.
ನಾನೇ ಇಲ್ಲವಾದಾಗ
ನನಗೆ ಕಳೆದುಕೊಳ್ಳಲು ಸಹ ಏನೂ ಇರುವುದಿಲ್ಲ.
ನನಗೀಗ ಎಲ್ಲ ಕೃಷ್ಣಪಕ್ಷಿಗಳ ಹಾಡು ಕೇಳಿ ಆನಂದಿಸುವುದು ಸಾಧಿಸಿದೆ
ನನ್ನ ನಂತರ ಸಹ.

೧೯೫೬

೮೦

ನಾವು ಚಿರಾಯುಗಳಾಗಿದ್ದಿದ್ದರೆ
ಎಲ್ಲ ಬದಲಾಗುತ್ತಿತ್ತು
ಆದರೆ ನಾವು ಅಲ್ಪಾಯುಗಳು
ಎಂತಲೇ ಹೆಚ್ಚಿನವು ಇದ್ದಂತೆಯೇ ಇರುತ್ತವೆ.

೧೯೫೬

ಅನುಬಂಧಗಳು

೧. ಕನ್ನಡ ಲಿಪಿಯಲ್ಲಿ ಎರಡು ಮೂಲಕವಿತೆಗಳು
೨. ಬ್ರೆಷ್ಟ್‌ನ ಕವಿತಾಸಂಗ್ರಹಗಳು
೩. ಟಿಪ್ಪಣಿಗಳು
೪. ಘಟನಾವಳಿ : ಬ್ರೆಷ್ಟ್‌ನ ಜೀವನ, ಕಾವ್ಯಸಾಧನೆ ಮತ್ತು ಜರ್ಮನಿಯ ರಾಜಕೀಯ ಪ್ರಸಂಗಗಳು.

೧. ಕನ್ನಡ ಲಿಪಿಯಲ್ಲಿ ಎರಡು ಮೂಲಕವಿತೆಗಳು

೧. ಕವಿತೆ ೬ (ಮೊದಲ ಚರಣ ಮಾತ್ರ)

ಇಷ್, ಬೆರ್ಟೋಲ್ಟ್ ಬ್ರೆಷ್ಟ್, ಬಿನ್ ಔಸ್ ಡೇನ್ ಶ್ವಾರ್ಸೆನ್ ವೆಲ್‌ಡರ್ನ್.
ಮೈನೆ ಮೂಟ ಟ್ರೂಕ್ ಮಿಷ್ ಇನ್ ಡೀ ಸ್ಟ್ಯಾಡ್‌ಟ ಹೀನೈನ್
ಆಲ್ಸ್ ಇಷ್ ಇನ್ ಇಯರಮ್ ಲೈಬ ಲಾಗ್. ಉಂಟ್ ಡೀ ಕೆಲ್ಟೆ ಡೆರ್ ವೆಲ್‌ಡರ್
ವಿರ್ಡ್ ಇನ್ ಮಿಯರ್ ಬಿಸ್ ಸೂ ಮೈನೆಮ್ ಅಬ್‌ಸ್ಟರ್‌ಬೆನ್ ಸೈನ್.

೨. ಕವಿತೆ ೪೨

ಇನ್ ಡೇನ್ ಫೀನ್‌ಸ್ಟೈರೆನ್ ಸೀಟೆನ್
ವಿರ್ಡ್ ಡ ಔಕ್ಸ್ ಗೆಸುಂಗೇನ್ ವರ್ಡೆನ್?
ಡ ವಿರ್ಡ್ ಔಕ್ಸ್ ಗೆಸುಂಗೇನ್ ವರ್ಡೆನ್.
ಫಾನ್ ಡೇನ್ ಫೀನ್‌ಸ್ಟೈರೆನ್ ಸೀಟೆನ್.

೨. ಬ್ರೆಷ್ಟ್‌ನ ಕವಿತಾಸಂಗ್ರಹಗಳು

ಪ್ರಸ್ತಾವನೆಯಲ್ಲಿ ಹೇಳಿದಂತೆ ಬ್ರೆಷ್ಟ್ ಬರೆದ ಕವಿತೆಗಳ ಪ್ರಮಾಣ ಅಪಾರ. ಆದರೂ ಅವನ ಜೀವನಕಾಲದಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾದವು ತೀರಾ ಕಡಿಮೆ. ಪ್ರಕಟವಾದ ಸಂಗ್ರಹಗಳ ವಿವರ ಹೀಗಿದೆ :

೧. 'ಹೌಸ್‌ಪೋಸ್ಟಿಲ್' (ಕುಟುಂಬದ ಭಕ್ತಿಪಾಠಗಳು), ೧೯೨೭. ಒಟ್ಟು ಐವತ್ತು ಕವಿತೆಗಳ ಸಂಗ್ರಹ. ೧೯೨೬ರಲ್ಲಿ ಬ್ರೆಷ್ಟ್ 'ಟಾಶ್ಟೆನ್‌ಪೋಸ್ಟಿಲ್' (ಭಕ್ತಿಪಾಠಗಳ ಕಿಸೆ ಪುಸ್ತಕ) ಎಂಬ ಹೆಸರಿನಲ್ಲಿ, ಕೇವಲ ೨೫ ಪ್ರತಿಗಳ ಸಂಸ್ಕರಣದಲ್ಲಿ, ಒಂದು ಹೊತ್ತಿಗೆ ತಂದಿದ್ದ. ಕವಿತಾಪ್ರಕಾಶನದಲ್ಲಿ ಅದು ಅವನ ಮೊತ್ತಮೊದಲ ಪ್ರಯತ್ನ. ಒಂದರ ಹೊರತು, ಅದರೆಲ್ಲ ಕವಿತೆಗಳೂ ಮುಂದಿನ 'ಹೌಸ್‌ಪೋಸ್ಟಿಲ್'ನಲ್ಲಿವೆ.

೨. 'ಲೀಯ್‌ಡರ್, ಗೆಡಿಶ್ಟೆ, ಕೋಯೆರೆ' (ಹಾಡುಗಳು, ಕವಿತೆಗಳು, ವೃಂದಗಾನಗಳು), ೧೯೩೪. ದೇಶದ ಹೊರಗೆ ಪ್ಯಾರಿಸ್ಸಿನಿಂದ ಪ್ರಕಾಶಿತ.

೩. 'ಸ್ವೆಂಡ್‌ಬೋರ್ಗರ್ ಗೆಡಿಶ್ಟೆ' (ಸ್ವೆಂಡ್‌ಬೋರ್ಗ್ ಕವಿತೆಗಳು), ೧೯೩೯. ಲಂಡನ್ನಿನಿಂದ ಪ್ರಕಾಶಿತ.

ಬ್ರೆಷ್ಟ್‌ನ ಪ್ರಕಟಿತ ಕವಿತಾಸಂಗ್ರಹಗಳು ಮುಖ್ಯವಾಗಿ ಮೇಲಿನ ಮೂರು ಮಾತ್ರ. ಇವುಗಳಲ್ಲಿ ಒಟ್ಟಾಗಿ ೧೩೫ ಕವಿತೆಗಳು ಹಾಗೂ ನಾಟಕಗಳಿಂದ ಆಯ್ದ ೨೭ ಹಾಡುಗಳೂ ಇವೆ.

೪. ಇವಲ್ಲದೆ ೧೯೩೦–೫೬ರ ನಡುವಿನ ಕಾಲದಲ್ಲಿ 'ವೇರ್ಸೂಶೆ' (ಪ್ರಯೋಗಗಳು) ಎಂಬ ಹೆಸರಿನಲ್ಲಿ ಹಲವಾರು ಸಣ್ಣ ಸಣ್ಣ ಹೊತ್ತಿಗೆಗಳನ್ನು ಹೊರತಂದಿದ್ದ. ಅವುಗಳಲ್ಲಿ ಮೊದಲ ಏಳು ೧೯೩೦–೩೨ರ ನಡುವೆ ಪ್ರಕಟವಾದವು. ಎಂಟನೆಯದು ಹೊರಬರಲೇ ಇಲ್ಲ. ಮತ್ತೆ ೧೯೪೯–೫೬ರ ನಡುವೆ ಇನ್ನು ಏಳು ಪ್ರಕಟವಾದವು. ಮುಖ್ಯವಾಗಿ, ಈ ಹೊತ್ತಿಗೆಗಳಲ್ಲಿ ಎರಡನೆಯದರಲ್ಲಿ ಗ್ರಾಮಾಫೋನ್ ತಟ್ಟೆಗಳಿಗಾಗಿ ಬರೆದವೆಂದು ಹೇಳಲಾದ 'ನಗರವಾಸಿಗಳಿಗೆ ಪ್ರಥಮಪಾಠಗಳು' ಎಂಬ ಹೆಸರಿನ ಹತ್ತು ಕವಿತೆಗಳಿವೆ. ನಮ್ಮ ಅನುವಾದಸಂಪುಟದ ಕ. ೧೪ ಮತ್ತು ಕ. ೧೫ ಅದರಿಂದ ಆಯ್ದವು. 'ವೇರ್ಸೂಶೆ'ಯ ಎಲ್ಲ ಹೊತ್ತಿಗೆಗಳಲ್ಲಿ ಒಟ್ಟಾಗಿ ೪೩ ಕವಿತೆಗಳಿವೆ.

೫. 'ಕ್ರೀಯೆಗ್ಸ್‌ಫೀಬೆಲ್' (ಯುದ್ಧದ ಬಾಲಬೋಧೆ), ರಚನೆ ೧೯೩೭–೩೮, ಪ್ರಕಟನೆ ೧೯೫೫. ಯುದ್ಧದ ದುಷ್ಪರಿಣಾಮಗಳನ್ನು ಕುರಿತ ಚುಟಕಗಳ ಸಂಗ್ರಹ, ಸಚಿತ್ರ.

೬. 'ಬುಕೋವರ್ ಎಲಿಜಿಯೆನ್' (ಬುಕೋವ್ ಶೋಕಗೀತೆಗಳು). ಯುದ್ಧಾನಂತರ ಬ್ರೆಷ್ಟ್ ಜರ್ಮನಿಗೆ ಹಿಂದಿರುಗಿದ ಮೇಲೆ ಕೊನೆಯವರೆಗೂ ನೆಲಸಿದ್ದ ಪೂರ್ವ ಜರ್ಮನಿಯ ಬುಕೋವ್ ಹಳ್ಳಿಯಲ್ಲಿ ಬರೆದ ಕವಿತೆಗಳು. ಪ್ರಕಟನೆ ೧೯೫೩. ಇದರಲ್ಲಿನ ಆರನ್ನು (೭೨ ರಿಂದ ೭೭) ಅನುವಾದದಲ್ಲಿ ಕೊಟ್ಟಿದೆ.

ಈ ಮೂಲಕೃತಿಗಳಲ್ಲದೆ ಬ್ರೆಷ್ಟ್‌ನ ಜೀವನಕಾಲದಲ್ಲಿ ಮೂರು ಆಯ್ದ ಕವಿತೆಗಳ ಸಂಗ್ರಹಗಳು ಪ್ರಕಟವಾದವು. ಅವುಗಳಲ್ಲಿ ಕೆಲವು ಹೊಸ ರಚನೆಗಳು ಸೇರಿವೆ.

ಬ್ರೆಷ್ಟ್‌ನ ನಿಧನಾನಂತರ ಅವನ ಎಲ್ಲ ಪ್ರಕಟಿತ ಕವಿತೆಗಳನ್ನೂ ದೀರ್ಘಕಾಲ ಅವನೊಂದಿಗೆ ಕೆಲಸ ಮಾಡಿ ಅವನ ಹಲವಾರು ಕವಿತೆ, ನಾಟಕಗಳಲ್ಲಿ ಸಹಲೇಖಕಿಯಾಗಿದ್ದ ಎಲಿಜ಼ಬೆತ್ ಹೌಪ್ಟ್‌ಮನ್ ಹತ್ತುಭಾಗಗಳ ಮಹಾಸಂಪುಟದಲ್ಲಿ, 'ಗೆಡಿಶ್ಟೆ' ಎಂಬ ಹೆಸರಿನಲ್ಲಿ ಪ್ರಕಟನೆಗೆ ಸಿದ್ಧಮಾಡಿದಳು. ಇದು ಅಂದಿನ ಪಶ್ಚಿಮ ಜರ್ಮನಿಯ ಸುರ್‌ಕಾಂಪ್ ವೆರ್ಲಾಗ್ ಮತ್ತು ಪೂರ್ವ ಜರ್ಮನಿಯ ಔಫ್‌ಬೌ–ವೆರ್ಲಾಗ್ ಪ್ರಕಾಶಕರಿಂದ ಹೊರ ಬಂದಿತು. ಇದುವರೆಗೂ ಅಪ್ರಕಟಿತವಾಗಿರುವ ಕವಿತೆಗಳದ್ದೊಂದು ಹನ್ನೊಂದನೆಯ ಭಾಗ ಘೋಷಿತವಾಗಿದ್ದುದು ಪ್ರಕಟವಾದಂತಿಲ್ಲ.

ಇಂಗ್ಲಿಷಿನಲ್ಲಿ ಜಾನ್ ವ್ಹಿಲೆಟ್ ಮತ್ತು ರಾಲ್ಫ್ ಮಾನ್‌ಹೈಮ್‌ರು ಮೂವತ್ತ ನಾಲ್ಕು ಬೇರೆ ಬೇರೆ ಅನುವಾದಕರು ಮಾಡಿದ ಸುಮಾರು ಐನೂರು ಕವಿತೆಗಳ ಅನುವಾದವನ್ನು ಸುದೀರ್ಘ ಪ್ರಸ್ತಾವನೆ ಮತ್ತು ಟಿಪ್ಪಣಿಗಳ ಸಮೇತ ಸಂಪಾದಿಸಿದ್ದು, ೧೯೭೬ರಲ್ಲಿ ಲಂಡನ್ನಿನ ಐರ್–ಮೆಥುಯೆನ್‌ರಿಂದ ಪ್ರಕಾಶಿತವಾಯಿತು. ಇದರದೇ ಒಂದು ಭಾರತೀಯ ಆವೃತ್ತಿ ೧೯೮೧ರಲ್ಲಿ ದಿಲ್ಲಿಯ ರಾಧಾಕೃಷ್ಣ ಪ್ರಕಾಶನದಿಂದ ಹೊರಬಂದಿತ್ತು. ಜರ್ಮನ್ ಬಾರದವರಿಗೆ ಬ್ರೆಷ್ಟ್‌ನ ಬಗ್ಗೆ ತಿಳಿಯಲು ಇದು ತುಂಬ ಉಪಯೋಗೀ ಗ್ರಂಥ. ಈ ಕನ್ನಡ ಅನುವಾದ ಸಹ ಆ ಗ್ರಂಥಕ್ಕೆ ಅಪಾರ ಋಣಿ.

೩. ಟಿಪ್ಪಣಿಗಳು

೧. ಕ. ೧ – ಬ್ರೆಷ್ಟ್ ೧೯೨೦ರಲ್ಲಿ ಬರೆದ ಹದಿಮೂರು 'ಸ್ತುತಿಗಾನ'ಗಳಲ್ಲಿ ಮೊದಲನೆಯದು. ಮುಂದಿನ ಎರಡು ಸಹ ಶೀರ್ಷಿಕೆಯಲ್ಲಿ 'ಹಾಡು' ಎಂದಿದ್ದರೂ ಈ 'ಸ್ತುತಿಗಾನ'ಗಳ ಮಾಲೆಗೆ ಸೇರಿದವೇ. ಮೂಲದ Psalm ಪದವನ್ನು 'ಸ್ತುತಿಗಾನ' ಎಂದು ಅನುವಾದಿಸಿದ್ದೇನೆ, ಅದರ ಮೂಲಲಕ್ಷಣಗಳಾದ ಹೊಗಳಿಕೆ, ಹಾಡಿಕೆಗಳು ಎದ್ದುತೋರಲೆಂದು. ಇವೆಲ್ಲವೂ ರೂಪದಲ್ಲಿ ಗದ್ಯದಂತಿವೆ.

ಬ್ರೆಷ್ಟ್‌ನ ನವಯೌವನ ಕಾಲದ ರಚನೆಗಳಗೆ ಈ ಕವಿತೆಯೊಂದು ಒಳ್ಳೆಯ ನಮೂನೆ.

೨. ಕ. ೨ – ಬ್ರೆಷ್ಟ್ ತನ್ನ ಸಂಬಂಧಿಗಳಲ್ಲೆಲ್ಲ ಅತಿಯಾಗಿ ಹಚ್ಚಿಕೊಂಡಿದ್ದುದು ತನ್ನ ತಾಯಿಯೊಬ್ಬಳಿಗೇ. ಅವನ ಕೆಲವಾರು ಕವಿತೆಗಳಲ್ಲಿ ಅವಳ ಉಲ್ಲೇಖ ಮತ್ತೆ ಮತ್ತೆ ಬರುತ್ತದೆ. ಮೂರನೆ ಚರಣದ 'ಕಾಡು' ದಕ್ಷಿಣ ಪೂರ್ವ ಜರ್ಮನಿಯ ಬಾಡೆನ್ ಪ್ರದೇಶದ ಕಪ್ಪುಗಾಡು (ಬ್ಲ್ಯಾಕ್ ಫಾರೆಸ್ಟ್), ಅವನ ತಾಯಿ ಅಲ್ಲಿಯವಳು.

ಚರಣ ಐದರ 'ಹೇಳಬೇಕಾಗಿದ್ದ ಮಾತು' ನಾವು ಬಾಯಿಬಿಟ್ಟು ಹೇಳದ, ಹೇಳಲಾಗದ 'ನಾನು ನಿನ್ನನ್ನು ತುಂಬ ಪ್ರೀತಿಸುತ್ತೇನೆ' ಎಂಬುದು.

೩. ಕ. ೩ – ಈ ಕವಿತೆಯ ಹೆಣ್ಣು ಬ್ರೆಷ್ಟ್‌ನ ಮೊದಲ ಕಾಲದ ಪ್ರೇಯಸಿಯರಲ್ಲೊಬ್ಬಳು, ಹೆಡ್ಡಾ ಕೂಹ್ನೆ. ಪ್ರೇಮದಲ್ಲಿನ ಇಚ್ಛೆ–ಅನಿಚ್ಛೆಗಳ ತಿಕ್ಕಾಟ, ಮಾತು – ಕೃತಿಗಳಲ್ಲಿನ ಅಂತರ್ ವಿರೋಧ (ಚರಣ ೬, ೭), ಎಂದೋ ಆಗಿಹೋದುದನ್ನು ನೆನೆವಾಗಿನ ವ್ಯಥೆ –ಇವು ಕವಿತೆಯಲ್ಲಿ ಗಾಢವಾದ ಅಭಿವ್ಯಕ್ತಿ ಪಡೆದಿವೆ.

ತಂತ್ರದ ದೃಷ್ಟಿಯಿಂದ ಗಮನಾರ್ಹವೆಂದರೆ : ೫ನೆ ಚರಣದವರೆಗೆ ಕವಿತೆಯ ಕೇಂದ್ರವ್ಯಕ್ತಿಯನ್ನು ಪ್ರಥಮ ಪುರುಷದಲ್ಲಿ 'ನಾನು' ಎಂದು, ಮುಂದಿನ ಮೂರು ಚರಣಗಳಲ್ಲಿ ತೃತೀಯ ಪುರುಷದಲ್ಲಿ 'ಅವನು' ಎಂದು ಕರೆದು, ಹತ್ತಿರದ್ದನ್ನು ದೂರದಿಂದ ನೋಡಲು ಪ್ರಯತ್ನಿಸಿ ಆ ಮೂಲಕ ಅನುಭವವನ್ನು ವಸ್ತುನಿಷ್ಠವನ್ನಾಗಿ ಮಾಡಿ, ಜತೆಗೇ ಅದರ ಸಾರ್ವತ್ರೀಕರಣ ಸಾಧಿಸಿರುವುದು.

೪. ಕ. ೪ ಮತ್ತು ೫ – ಮುಂದಿನ ಟಿಪ್ಪಣಿ ನೋಡಿ.

೫. ಕ. ೬ – ಮನುಷ್ಯನ ಅಸ್ತಿತ್ವಕ್ಕೆ ಹಿಂದುಮುಂದಿಲ್ಲ, ಉದಾಸೀನತೆಯೇ ಸೃಷ್ಟಿಯ ಮೂಲತತ್ವ ಎಂಬ ಶೂನ್ಯವಾದವನ್ನು ಸಾರುವ ಕವಿತೆಗಳಲ್ಲಿ ಮುಖ್ಯವಾದದ್ದು. ಇದು ಬ್ರೆಷ್ಟ್ ರೂಪಿಸಿಕೊಂಡ 'ಎಕ್ಸಿಸ್ಟೆನ್ಷಿಯಲ್' ಎನ್ನಬಹುದಾದ ಮೊದಲ ದರ್ಶನ. ಕವಿತೆ ಜರ್ಮನಿಯ ಜನಪ್ರಿಯ ಪ್ರಾರ್ಥನಾಸ್ತೋತ್ರವೊಂದರ ಅಣಕವಾಡು. ಸ್ತೋತ್ರದ ಧಾಟಿಯಲ್ಲೇ ಬೈಬಲ್ಲಿಗೆ ವಿರುದ್ಧವಾದ ತತ್ವದ ಪ್ರತಿಪಾದನೆ ಮಾಡುತ್ತದೆ.

ಚರಣ ೧, ಸಾಲು ೩ – 'ಅಂತರಿಕ್ಷ' : ಮೂಲದಲ್ಲಿ 'ಹಿಮೆಲ್'. ಆಕಾಶ, ಅಂತರಿಕ್ಷ, ಸ್ವರ್ಗ, ದೇವರು ಎಂಬೆಲ್ಲ ಅರ್ಥಗಳಿವೆ.

೬. ಕ. ೭ – ಮನುಷ್ಯನ ಸ್ಥಿತಿ ಬದಲಾಗುತ್ತ ಹೋಗುತ್ತದೆ. ಇಂದಿನ ಪ್ರೇಮಿಗಳು ನಾಳೆ ಇರುವುದಿಲ್ಲ. ಪ್ರಕೃತಿ ಮಾತ್ರ ಎಂದಿನಂತೆಯೇ ಮುಂದುವರಿಯುತ್ತದೆ. ಆದರೂ ಪ್ರೇಮಿಗಳನ್ನು ಕಳೆದುಕೊಂಡ ಆ ನಾಳೆ ಏಕಾಕಿಯಾಗುತ್ತದೆ.

೭. ಕ. ೮ – ಟಿಪ್ಪಣಿ ೫ ನೋಡಿ. ಸೃಷ್ಟಿಧರ್ಮದ ಮುಂದೆ ಮಾನವ ಅಸಹಾಯಕ. ಜತೆಗೇ ಅವನು ತನ್ನ ಸಂವೇದನಾಶೀಲತೆಯನ್ನೂ ಕಳೆದುಕೊಂಡಿದ್ದಾನೆ.

೮. ಕ. ೯ – ಬ್ರೆಷ್ಟ್, ೧೯೨೨ರಲ್ಲಿ, ಬರ್ಲಿನ್ ನಗರದಲ್ಲಿ ಕಷ್ಟದಿಂದ ಮೊದಲ ಚಳಿಗಾಲ ಕಳೆದು ಊರಿಗೆ ಹಿಂದಿರುಗುತ್ತಿದ್ದಾಗ ರೈಲಿನಲ್ಲಿ ಇದರ ಮೊದಲ ಪ್ರಾರೂಪ ಬರೆದದ್ದು. ಇದು ಅವನ ಪ್ರಸಿದ್ಧ ಕವಿತೆಗಳಲ್ಲೊಂದು. ನಗರಗಳು ಮನುಷ್ಯನ ನಶ್ವರ ಸೃಷ್ಟಿ. ಅವು ಅವನ ಸೂಕ್ಷ್ಮಭಾವನೆಗಳನ್ನು ತೊಡೆದು ಹಾಕಿ ಅಮಾನವೀಯನನ್ನಾಗಿ ಮಾಡುತ್ತ ಹೋಗುತ್ತವೆ. ಬ್ರೆಷ್ಟ್ ಕಂಡುಕೊಂಡ ಈ ಸತ್ಯದ ಮೊದಲ ಹೊಳಹು ಕವಿತೆಯಲ್ಲಿ ಭಾವರಹಿತವಾದ ಕಿರುದನಿಯಲ್ಲಿ ಅಭಿವ್ಯಕ್ತಿ ಪಡೆದಿದೆ.

೯. ಕ. ೧೦ – ಬ್ರೆಷ್ಟ್ ಎಷ್ಟೇ ಬದಲಾವಣೆ, ಬೆಳವಣಿಗೆಗಳಲ್ಲಿ ನಂಬಿಕೆಯಿಟ್ಟ ಆಧುನಿಕನಾದರೂ ಪರಂಪರೆಯಲ್ಲಿರುವ ಒಳ್ಳೆಯದರ ಕಡೆಗೇ ಅವನ ಮನಸ್ಸು ಎಳೆಯುತ್ತಿತ್ತು. ಮುಂದೆ ಹದಿನೇಳು ವರ್ಷಗಳ ನಂತರ ಬರೆದ ಕವಿತೆ ೭೦ರಲ್ಲೂ ಇದೇ ಭಾವನೆ ವ್ಯಕ್ತವಾಗಿದೆ.

೧೦. ಕ. ೧೧ – ಬ್ರೆಷ್ಟ್ ನಾಟಕಪ್ರದರ್ಶನವೊಂದನ್ನು ಕಟುವಾಗಿ ಟೀಕಿಸಿದ ಯಾವನೋ ವಿಮರ್ಶಕನನ್ನು ಗಮನದಲ್ಲಿಟ್ಟು, ಬದುಕಿನಲ್ಲಿ ಪರಂಪರೆ, ಬದಲಾವಣೆಗಳೆರಡನ್ನೂ ವಿರೋಧಿಸುವವರ ವಿರುದ್ಧ ಬರೆದ ವಿಡಂಬನೆ.

೧೧. ಕ. ೧೨ – ಕುರ್ಫುರ್ಸ್ಟೆನ್‌ಡಾಮ್ ಬರ್ಲಿನ್‌ನ ಮಹಾಮಾರ್ಗ. ಅಲ್ಲಿ ಅನೇಕ ನಾಟ್ಯಶಾಲೆಗಳು ಕೇಂದ್ರಿತವಾಗಿವೆ. ಈ ಕವಿತೆ ಆಗ ಕಮ್ಯುನಿಸಂ ಪರವಾದ ನಾಟಕಗಳನ್ನು ಆಡಿಸುತ್ತಿದ್ದ ವಿಖ್ಯಾತ ದಿಗ್ದರ್ಶಕ ಎರ್ವಿನ್ ಪಿಸ್ಕೇಟರ್‌ನನ್ನು ಕುರಿತದ್ದೆಂದು ಬಲ್ಲವರ ಅಭಿಪ್ರಾಯ. ಮುಂದೆ ಬ್ರೆಷ್ಟ್ ಅವನ ಜತೆಯೇ ಕೆಲಸ ಮಾಡಿ ಅನುಭವ ಬೆಳಸಿಕೊಂಡ. ಇದನ್ನು ಬರೆದಾಗ ಬ್ರೆಷ್ಟ್‌ಗೆ ಕಮ್ಯುನಿಸಂ ಬಗ್ಗೆ ತಿರಸ್ಕಾರವೇ ಇದ್ದಿರಬೇಕು. ಆದರೆ ಮುಂದಿನ ಒಂದೆರಡು ವರ್ಷಗಳಲ್ಲಿ ಮಾರ್ಕ್ಸ್‌ವಾದದ ಆಳವಾದ ಅಧ್ಯಯನಮಾಡಿ ಕೆಲಕಾಲ ಪಕ್ಕಾ ಕಮ್ಯುನಿಸ್ಟ್ ಆದ.

೧೨. ಕ. ೧೩ – ಸುಖದ ಒಂದು ಸುಂದರ ಕಲ್ಪನೆ.

೧೩. ಕ. ೧೪ ಮತ್ತು ೧೫ – 'ನಗರವಾಸಿಗಳಿಗೆ ಪಾಠವಾಗಿ ಬರೆದ ಕವಿತೆಗಳು' : ಇದೊಂದು ಹತ್ತು ಕವಿತೆಗಳ ಗುಚ್ಛ. ಅವುಗಳಲ್ಲಿ ಎರಡನ್ನು ಇಲ್ಲಿ ಕೊಟ್ಟಿದೆ. ಕವಿತೆ ೯ರ ಬ್ರೆಷ್ಟ್‌ನ ನಗರಮೀಮಾಂಸೆ ಇಲ್ಲಿ ಮುಂದುವರೆದಿದೆ. ಬರೆದದ್ದು ಎರಡನೆ ಮಹಾಯುದ್ಧದ ತಯಾರಿಗೆ ಒಂದು ದಶಕ ಮೊದಲಾದರೂ ಬರೆದ ಕಾಲಕ್ಕಿಂತ ಮುಂಬರುವ ಆ ಇನ್ನೊಂದು ದುಷ್ಕಾಲದ ಭವಿಷ್ಯವಾಣಿಯಂತಿದೆ. ನಗರಕ್ಕೆ ಬಂದವರು ಎಲ್ಲ ಭಾವನೆಗಳನ್ನೂ ಬದಿಗೊತ್ತಿ ಪರಕೀಯರಾಗಿಯೇ ಬದುಕಬೇಕು. ಇಲ್ಲವಾದರೆ ಬದುಕುವುದೇ ಅಸಾಧ್ಯ.

ಕ. ೧೫ – ಗಾಡಿಗೆ ನಾಲ್ಕು ಚಕ್ರ ಬೇಕೇ ಬೇಕು, ಐದನೆಯದು ಅನಗತ್ಯ. ಹೊರಗಿನಿಂದ ನಗರಕ್ಕೆ ಬರುವವರೆಲ್ಲರೂ ಐದನೆ ಚಕ್ರವಿದ್ದಂತೆ. ಇದು ದೇಶಗಳಿಗೂ ಅನ್ವಯಿಸುವ ಮಾತು. ಸದ್ಯ: ಜರ್ಮನಿಯಲ್ಲೇ ತುರ್ಕೀ ಜನ, ಈಜಿಪ್ಟಿನಲ್ಲಿ ಐರೋಪ್ಯರು ಪಡುತ್ತಿರುವ ಪಾಡನ್ನು ನೆನೆದಾಗ ಈ ಕವಿತೆ ಹೆಚ್ಚು ಅರ್ಥಪೂರ್ಣವಾಗುತ್ತದೆ.

೧೪. ಕ. ೧೬ – ಈ ಪುಟ್ಟ ಕವಿತೆ ಇಂಗ್ಲಿಷ್‌ಗೆ ಅನುವಾದವಾದಂತಿಲ್ಲ.

೧೫. ಕ. ೧೭– ಬ್ರೆಷ್ಟ್‌ನ ಗಾಢವಾದ ಪರಿಸರಪ್ರಜ್ಞೆಗೆ ಪ್ರಮಾಣ.

೧೬. ಕ. ೧೮ – ಬ್ರೆಷ್ಟ್ ಅಮೆರಿಕದ ಖ್ಯಾತ ಲೇಖಕ ಥಿಯೊಡೊರ್ ಡ್ರೀಸರ್‌ನ 'ಸಿಸ್ಟರ್ ಕ್ಯಾರಿ' ಕಾದಂಬರಿಯ ಒಂದು ಪ್ರಸಂಗವನ್ನು ಓದಿ ಪ್ರಭಾವಿತನಾಗಿ ಬರೆದದ್ದು. ಇದರಲ್ಲಿನ ಗಮನಾರ್ಹ ಅಂಶಗಳು ಎರಡು : ಒಂದು, ಅಲ್ಪಾವಧಿಯ ಉಪಾಯಗಳಿಂದ ಸಮಾಜವನ್ನು ಬದಲಾಯಿಸಲಾಗುವುದಿಲ್ಲವೆಂಬ ಧೋರಣೆ. ಎರಡು, ಕವಿತೆಯ ಶಿಲ್ಪದಲ್ಲಿ 'ಕಿನೆಟಿಕ್ ಪ್ರಿನ್ಸಿಪಲ್' ತಂತ್ರದ ಬಳಕೆ. ಎರಡನೆ ಮತ್ತು ನಾಲ್ಕನೆ ಚರಣಗಳಲ್ಲಿ ಮೊದಲ ಮೂರು

ಸಾಲು, ಕೊನೆಯ ಮೂರು ಸಾಲುಗಳನ್ನು ಸ್ಥಾನಪಲ್ಲಟ ಮಾಡುವುದರಿಂದ ಉಂಟಾಗುವ ಧ್ವನಿವ್ಯತ್ಯಯ : ಎರಡನೆ ಚರಣದಲ್ಲಿ ಸಹಾನುಭೂತಿ ಕಂಡರೆ ನಾಲ್ಕನೆಯದು ಅದರ ನಿರರ್ಥಕತೆಯನ್ನು ತೋರಿಸುತ್ತದೆ.

೧೭. ಕ. ೧೯ – ಹಿಂದಿನ ಕವಿತೆಯ 'ಕಿನೆಟಿಕ್ ಪ್ರಿನ್ಸಿಪಲ್' ತಂತ್ರವೇ ಇಲ್ಲೂ ಬಳಕೆಯಾಗಿದೆ. ಕವಿತೆಯ ಎರಡು ಚರಣಗಳಲ್ಲಿರುವುದೂ ಅವೇ ಏಳು ಸಾಲುಗಳು, ನಾಲ್ಕು ಮತ್ತು ಮೂರು ಸಾಲುಗಳ ಎರಡು ಘಟಕಗಳು. ಈ ಘಟಕಗಳನ್ನು ಅದಲುಬದಲು ಮಾಡುವುದರಿಂದ ಧ್ವನಿವ್ಯತ್ಯಯವಾಗುತ್ತದೆ. ಮೊದಲ ಚರಣ ಕೇವಲ ಪರಿಸ್ಥಿತಿಯನ್ನು ನಿರೂಪಿಸಿದರೆ ಎರಡನೆಯದು ಪರಿಸ್ಥಿತಿಯಲ್ಲಿನ ವಿಡಂಬನೆಯನ್ನು ಎತ್ತಿತೋರಿಸುತ್ತದೆ. ಇದೇ 'ಕಿನೆಟಿಕ್ ಪ್ರಿನ್ಸಿಪಲ್' ಮುಂದೆ ಕವಿತೆ ೬೭ರಲ್ಲೂ ಬಳಕೆಯಾಗಿದೆ.

೧೮. ಕ. ೨೦ – ಯಾರನ್ನು ಕುರಿತು ಬರೆದದ್ದೆಂದು ತಿಳಿದಿಲ್ಲ.

೧೯. ಕ. ೨೧ – ಸ್ವಂತದ ಯಾವ ತೀರ್ಪನ್ನೂ ಕೊಡದೆ ಕೇವಲ ಐತಿಹಾಸಿಕ ಸಂಗತಿಗಳು, ಅವುಗಳಿಂದೇಳುವ ಪ್ರಶ್ನೆಗಳನ್ನು ಮುಂದಿಟ್ಟು ಬ್ರೆಷ್ಟ್ ನಮ್ಮ ಇತಿಹಾಸ–ರಚನೆಯ ರೀತಿನೀತಿಗಳನ್ನು ಪ್ರಶ್ನಿಸುತ್ತಾನೆ.

ಸಾಲು ೧೧ – ಅಟ್ಲಾಂಟಿಸ್ : ಪುರಾತನ ಕಾಲದಲ್ಲಿ ಅಟ್ಲಾಂಟಿಕ್ ಮಹಾಸಾಗರದಲ್ಲಿ ಮುಳುಗಿ ಹೋಯಿತೆಂದು ಹೇಳಲಾದ ಒಂದು ಭೂಖಂಡ. ಚರಿತ್ರಕಾರ ಪ್ಲೀನಿ ಮತ್ತು ದಾರ್ಶನಿಕ ಪ್ಲೇಟೊರ ಕೃತಿಗಳಲ್ಲಿ ಈ ಸಂಗತಿಯ ಉಲ್ಲೇಖವಿದೆ.

ಕ. ೧೮–೨೧ – ಈ ಕವಿತೆಗಳಲ್ಲಿ ಬ್ರೆಷ್ಟ್‌ನ ಆ ಕಾಲದ ಮಾರ್ಕ್ಸ್‌ವಾದೀ ದೃಷ್ಟಿಕೋನ ಎದ್ದುಕಾಣುತ್ತದೆ.

೨೦. ಕ. ೨೫ – 'ಕಗ್ಗತ್ತಲಕಾಲದಲ್ಲಿ': ಯುದ್ಧಪೂರ್ವ ಹಾಗೂ ಯುದ್ಧದ ಕೆಟ್ಟ ಕಾಲವನ್ನು ಬ್ರೆಷ್ಟ್ 'ಕಗ್ಗತ್ತಲ ಕಾಲ'ವೆಂದು ಕರೆಯುತ್ತಾನೆ. ಅವನ ಕವಿತೆಗಳಲ್ಲಿ ಈ ವರ್ಣನೆ ಮತ್ತೆ ಮತ್ತೆ ಬರುತ್ತದೆ.

ಸಾಲು ೧ – 'ಅಖರೋಟ್': ಬಾದಾಮಿಯಂತಹ ಒಂದು ಎಣ್ಣೆ ಕಾಯಿಯ ಮರ. ಉತ್ತರ ಭಾರತದ ಪರ್ವತ ಪ್ರದೇಶಗಳಲ್ಲಿಯೂ ಬೆಳೆಯುತ್ತದೆ.

ಸಾಲು ೨ – 'ಮನೆಗೆ ಬಣ್ಣ ಹೊಡೆಯುವವನು': ಹಿಟ್ಲರ್ ಹುಡುಗನಾಗಿದ್ದಾಗ ಒಬ್ಬ ಮನೆ ಕಟ್ಟುವವನಲ್ಲಿ ಕಟ್ಟಿ ಮುಗಿಸಿದ ಮನೆಗಳ ಗೋಡೆಗಳ ಮೇಲೆ ಬಣ್ಣದಲ್ಲಿ ಸಣ್ಣ ಪುಟ್ಟ ಚಿತ್ರ ಬರೆದು ಅಲಂಕರಿಸುವ ಕೆಲಸ ಮಾಡುತ್ತಿದ್ದನಂತೆ. ಇದರಿಂದಾಗಿ ಬರುಬರುತ್ತ ಆತನಿಗೆ 'ಮನೆಗೆ ಬಣ್ಣ ಹೊಡೆಯುವವನು'

ಎಂಬ ಹೆಸರು ಬಂದಿತು. ಬ್ರೆಷ್ಟ್‌ನ ಕವಿತೆಗಳಲ್ಲಿ 'ಹಿಟ್ಲರ್' ಎನ್ನುವಲ್ಲೆಲ್ಲ ಈ ವರ್ಣನಾತ್ಮಕ ಹೆಸರು ಬರುತ್ತದೆ.

೨೧. ಕ. ೨೭ – 'ಮಡಿವಂತ ಪ್ರಧಾನಿ' ಯಾರೆಂದು ಗುರುತಿಸಲಾಗಿಲ್ಲ. ಹಿಟ್ಲರೆ?

೨೨. ಕ. ೨೮ – ಈ ಕವಿತೆ ಬ್ರೆಷ್ಟ್‌ನ ಬದುಕಿನ ಧೋರಣೆಯ ಘೋಷಣಾ ಪತ್ರದಂತಿದೆ. ವಿಷಯದ ಆಳಕ್ಕಿಳಿದು ವಿಚಾರಿಸಿ ನೋಡುವ ಅವನ ತಾರ್ಕಿಕ ಮಾರ್ಗಕ್ಕೆ ಯಾವದನ್ನೂ ಅದು ಇದ್ದಂತೆ ಒಪ್ಪಿಕೊಳ್ಳದೆ ಸಂದೇಹ ಅಥವಾ ಅನುಮಾನ ವ್ಯಕ್ತಪಡಿಸುವುದು ಮೊದಲ ಹೆಜ್ಜೆ. ಕವಿತೆಯಲ್ಲಿ ಉಲ್ಲೇಖಿಸಿದ ಚೀನಾದ ದಾರ್ಶನಿಕನ (ಅದು ಯಾರೆಂದು ಗುರುತಿಸಲಾಗಿಲ್ಲ) ಸುರುಳಿಚಿತ್ರವೊಂದು ಬ್ರೆಷ್ಟ್‌ನ ಕೋಣೆಯಲ್ಲಿ ಸದಾ ತೂಗಿರುತ್ತಿತ್ತು.

೨೩. ಕ. ೨೯–೩೬ – ಯುದ್ಧಪೂರ್ವ ಹಾಗೂ ಯುದ್ಧಕಾಲದ ದಿನಗಳಲ್ಲಿ ಬ್ರೆಷ್ಟ್ ಅನೇಕ ಯುದ್ಧವಿಷಯಕ ಕವಿತೆಗಳನ್ನು ಬರೆದ. ಅವುಗಳಲ್ಲಿ ನಾಲ್ಕು ಸಾಲಿನ ಚುಟುಕಗಳು ಮುಂದೆ 'ಜರ್ಮನ್ ಯುದ್ಧದ ಬಾಲಬೋಧೆ' ('ಕ್ರೀಯೆಗ್ಸ್ ಫೀಬೆಲ್') ಎಂಬ ಪುಸ್ತಕರೂಪದಲ್ಲಿ ಪ್ರಕಟವಾದವು. ಇಲ್ಲಿ ಅವುಗಳಿಂದ ಕೆಲವನ್ನು ಆರಿಸಿ ಕೊಟ್ಟಿದೆ.

ಕ. ೨೯ – ಈ ಕವಿತೆಗೆ ಎರಡು ಮಗ್ಗಲುಗಳಿವೆ : ಒಂದು, ಎಲ್ಲವೂ ಸರಿಯಾಗಿಯೇ ನಡೆದಿರುವಾಗ ಹಿಟ್ಲರ್ ಆಶ್ವಾಸನೆ ನೀಡುವ ಆ 'ಮಹಾದಿನಗಳು' ಯಾವವು? ಇನ್ನೊಂದು, ಆ 'ಮಹಾದಿನಗಳಲ್ಲಿ' ಯುದ್ಧದ ಪರಿಣಾಮವಾಗಿ ಆದದ್ದು ಆಶ್ವಾಸನೆಯ ವಿಪರೀತ – ಕಾಡು, ಹೊಲ ಸುಟ್ಟುಹೋದವು, ಪಟ್ಟಣ ಗಳು ನೆಲಸಮವಾದವು, ಜನ ಸತ್ತರು.

ಕ. ೩೪ – ಗೋಡೆಯ ಮೇಲೆ 'ಅವರಿಗೆ ಬೇಕಾಗಿದೆ ಯುದ್ಧ' ಎಂದು ಬರೆದವನು ಯುದ್ಧ ವಿರೋಧಿ, ಶಾಂತಿವಾದಿ. ಯುದ್ಧ ಬೇಡವೆಂದವನೂ ಯುದ್ಧಕ್ಕೆ ಬಲಿಯಾಗಿದ್ದಾನೆ. ಅಥವಾ ಅವನು ಯುದ್ಧವಿರೋಧಿಯೆಂಬ ಕಾರಣ ಅವರೇ ಅವನನ್ನು ಕೊಂದುಹಾಕಿದ್ದಾರೆ. ಇದು ಅಂದಿನ ಜರ್ಮನಿಯಲ್ಲಿ ನಡೆಯುತ್ತಿದ್ದ ಸಂಗತಿ.

೨೪. ಕ. ೩೭ – ಈ ಕವಿತೆಯ ಹಸ್ತಪ್ರತಿಯಲ್ಲಿ ರಚನಾವರ್ಷ ೧೯೩೮ ಎಂದು ಅಂಕಿತವಾಗಿದ್ದರೂ ಘಟನೆ ನಡೆದದ್ದು ೧೯೩೩ರಲ್ಲಿ. ಹಿಟ್ಲರ್ ಜರ್ಮನಿಯ ಚಾನ್ಸೆಲರ್ ಆದ ಕೆಲವೇ ದಿನಗಳಲ್ಲಿ ಒಮ್ಮೆಲೇ ಜರ್ಮನಿಯ ಅನೇಕ ನಗರ ಗಳಲ್ಲಿ ನಾಜ್ಞಿಸಂ–ವಿರೋಧೀ ಸಾಹಿತಿಗಳ ಪುಸ್ತಕಗಳನ್ನು ಸಾರ್ವಜನಿಕವಾಗಿ ಸುಡಲಾಯಿತು. ಬರ್ಲಿನ್ ನಗರದಲ್ಲಿ ಖುದ್ದಾಗಿ ಗೋಬೆಲ್ಸ್ ಪುಸ್ತಕದಹನದ ನೇತೃತ್ವ ವಹಿಸಿದ್ದ. ಆದರಲ್ಲಿ ಬ್ರೆಷ್ಟ್‌ನ ಪುಸ್ತಕಗಳೂ ಇದ್ದವು. ಕವಿತೆಯಲ್ಲಿ

ಸೂಚಿತವಾಗಿರುವ ಲೇಖಕ ಆಸ್ಕರ್ ಮಾರಿಯಾ ಗ್ರಾಫ್. ಆತ ಮುಂದೆ ಜರ್ಮನಿಯಿಂದ ತಪ್ಪಿಸಿಕೊಂಡುಹೋಗಿ ಚೆಕೊಸ್ಲಾವಾಕಿಯಾದಲ್ಲಿ ಹಿಟ್ಲರ್ ವಿರುದ್ಧ ಪತ್ರಿಕೋದ್ಯಮ ಕೈಗೊಂಡ.

೨೫. ಕ. ೩೮ – ಬ್ರೆಷ್ಟ್ ಇದನ್ನು ಬರೆದದ್ದು ಡೆನ್ಮಾರ್ಕಿನಲ್ಲಿ 'ದೇಶಭ್ರಷ್ಟ'ನಾಗಿದ್ದಾಗ, ೧೯೩೭ರಲ್ಲಿ. ಮರುವರ್ಷವೇ ಸ್ಟೀಫನ್ ಸ್ಪೆಂಡರ್ ಇದನ್ನು ಇಂಗ್ಲಿಷಿಗೆ ಅನುವಾದಿಸಿದ್ದು ಬ್ರೆಷ್ಟ್ ಆಗಲೇ ಜರ್ಮನಿಯ ಹೊರಗೂ ಜನಪ್ರಿಯನಾಗಿದ್ದನೆಂಬುದಕ್ಕೆ ಸಾಕ್ಷಿ.

೨೬. ಕ. ೩೯– ಬ್ರೆಷ್ಟ್ ಡೆನ್ಮಾರ್ಕಿನಲ್ಲಿದ್ದಾಗ ಅವನಂತೆಯೇ ದೇಶಾಂತರವಾಸಿಯಾಗಿ ಅಲ್ಲಿಗೆ ಬಂದ ಒಬ್ಬ ಮಿತ್ರ ಡಾಕ್ಟರ್‌ನನ್ನು ಕುರಿತು ಬರೆದದ್ದು.

೨೭. ಕ. ೪೦, ಸಾಲು ೩ – 'ನನ್ನ ಮೂಗಿನ ಮಾಟ, ಕೂದಲ ಬಣ್ಣ' : ಜರ್ಮನ್‌ರಲ್ಲದ ಯೆಹೂದಿ, ರೋಮನಿಗಳ ಗುರುತುಗಳು. ಹಿಟ್ಲರ್‌ನ ಜರ್ಮನಿಯಲ್ಲಿ ಅವರು ಏನೆಲ್ಲ ಅನುಭವಿಸಿದರೆಂದು ತಿಳಿದದ್ದೇ. ಬ್ರೆಷ್ಟ್ ಯೆಹೂದಿ ಅಲ್ಲವಾದರೂ ಅವರ ಪಾತ್ರದಲ್ಲಿ ಈ ಕವಿತೆ ಬರೆದಿದ್ದಾನೆ.

ಚರಣ ೨ – ನಾಜ್ಜಿ ಆಡಳಿತದಲ್ಲಿ, ಯೆಹೂದಿಗಳನ್ನು ವಿವಾಹವಾಗಿದ್ದ ಜರ್ಮನ್ ಹೆಂಗಸರು ಬದುಕಿ ಉಳಿಯಲು ತಾವಾಗಿಯೇ ಗಂಡಂದಿರನ್ನು ನಿರಾಕರಿಸಬೇಕಾಗಿತ್ತು. ಅಷ್ಟೇ ಅಲ್ಲ, 'ನಾನು ನಾಚಿಕೆಗೆಟ್ಟವಳು' ಎಂಬ ಕೊರಳ ಪಟ್ಟಿಯನ್ನು ನೇತುಹಾಕಿಕೊಳ್ಳಬೇಕಾಗಿತ್ತು.

ಸಾಲು ೯ – 'ನಮ್ಮಮ್ಮನ ಹೊಟ್ಟೆಯಲ್ಲಿ ಹುಟ್ಟಿದ ತಪ್ಪಿಗೆ' : ಕವಿತೆ ೨ರ ಟಿಪ್ಪಣಿ ನೋಡಿ.

೨೮. ಕ. ೪೧ – ಗೀತಗುಣದಿಂದ ಕೂಡಿದ ಬ್ರೆಷ್ಟ್‌ನ ಇನ್ನೊಂದು ಪ್ರಸಿದ್ಧ ಕವಿತೆ. ಮನುಷ್ಯ ಮನುಷ್ಯನನ್ನಾಗಿ ಬಾಳಗೊಡದ ತನ್ನ ಕಾಲ ಎಷ್ಟು ಕ್ರೂರವಾಗಿತ್ತೆಂದು ಮುಂಬರುವ ಪೀಳಿಗೆಗಳವರಿಗೆ ಹೇಳಿದಂತೆ. ಇನಿತೂ ವ್ಯಂಗ್ಯವಿಲ್ಲದ ವ್ಯಥೆಯ ಕಿರುದನಿಯಲ್ಲಿ ಭಾವನೆಯನ್ನು ಕಲಕುವ ನಿವೇದನೆಯ ರೂಪದಲ್ಲಿದೆ.

೨೯. ಕ. ೪೨ – ಈ ನಾಲ್ಕು ಸಾಲುಗಳ ಕವಿತೆ ಉದ್ಧೃತವಾದಷ್ಟು ಬ್ರೆಷ್ಟ್‌ನ ಮತ್ತೆ ಯಾವ ಕವಿತೆಯೂ ಆಗಿಲ್ಲ. ಜತೆಗೇ ಹಾಡುಗಬ್ಬ ಅವನ ಪ್ರೀತಿಯ ಮಾಧ್ಯಮವಾಗಿತ್ತೆಂದೂ ತೋರಿಸುತ್ತದೆ.

೩೦. ಕ. ೪೩–೪೫ – 'ಒಳಗಾಣ್ಕೆಗಳು' : ಹಿಟ್ಲರ್ ಮತ್ತು ಅವನ ನಾಜ್ಜಿ ಪಡೆಯ ವಿರುದ್ಧ ಬರೆದ ಐದು ವಿಡಂಬನೆಗಳ ಮಾಲೆ, ಮೂರನ್ನು ಇಲ್ಲಿ ಅನುವಾದಿಸಿದೆ.

ಮೂಲದಲ್ಲಿ ಈ ಮಾಲೆಯ ಹೆಸರು 'ವಿಷನ್ಸ್'. ಇದಕ್ಕೆ ಸರಿಯಾದ ಕನ್ನಡ ಸಮಾನಪದ ಇದ್ದಂತಿಲ್ಲ. 'ಕಣಸು', 'ದರ್ಶನ' ಎಂದೆಲ್ಲ ಹೇಳುವುದುಂಟು. ನಾನು 'ಒಳಗಾಣ್ಕೆಗಳು' ಎಂದು ಅನುವಾದಿಸಿದ್ದೇನೆ : ಒಳಗಣ್ಣು ಕಂಡ ಕನಸಿನ ಮಾದರಿಯ ದೃಶ್ಯಗಳು.

೩೧. ಕ. ೪೭ – ಇನ್ನೊಂದು ಸುಪ್ರಸಿದ್ಧ ಗೀತೆ. ನೀರದೋಣಿಗಳು, ಹುಡುಗಿಯರ ಎದೆ, ಸೇಬಿನ ಮರ – ಕವಿಯ ಮುಂದೆ ಗೀತೆಗೆ ತಕ್ಕ ವಸ್ತು–ವಿಷಯಗಳೆಲ್ಲ ಇವೆ. ಆದರೆ ಕಾಲ ಹೇಗೆ ಗೀತೆಗೆ ಮಾಡಿದ್ದಲ್ಲ ಎಂಬುದನ್ನು ಗೀತೆಯ ದನಿಯಲ್ಲೇ ಹೇಳುತ್ತದೆ ಈ ಕವಿತೆ.

೩೨. ಕ. ೪೮ – ಬ್ರೆಷ್ಟ್ ಸ್ವೀಡನ್ನಿನಲ್ಲಿದ್ದಾಗ ತಾನಿದ್ದ ಮನೆಯನ್ನು ಒಬ್ಬ 'ಬೀಗದ ರಿಪೇರಿ'ಯವನ ಸುಪರ್ದಿಗೆ ವಹಿಸಿ ವರ್ಷಕಾಲ ಹತ್ತಿರದ ಲಿಡಿಂಗೊ ದ್ವೀಪಕ್ಕೆ ಹೋಗಿದ್ದ. ಹಿಂದಿರುಗಿ ಬಂದಾಗ ಆ ಮನೆಗೆ ಒದಗಿದ್ದ ದುರವಸ್ಥೆಗೆ ಮರುಗಿ ಬರೆದದ್ದಿರಬೇಕು ಈ ಕವಿತೆ. ಮೂಲದ 'ಬೀಗದ ರಿಪೇರಿಗಾರ'ನನ್ನು ಅನುವಾದದಲ್ಲಿ 'ಮರಕಟಕ' ಎಂದಿದ್ದೇನೆ, ತಲೆ ಕಡಿದಂತೆ ಮರ ಕಡಿಯುವವನು ಎಂಬರ್ಥದಲ್ಲಿ. ಈ ಕವಿತೆಯ ವೈಶಿಷ್ಟ್ಯವೆಂದರೆ ಬ್ರೆಷ್ಟ್ ತನ್ನ ನಂಬಿಕೆಗೆ ವಿರುದ್ಧವಾಗಿ ಕ್ರೈಸ್ತ ಮತೀಯ ಸೂಚನೆಗಳನ್ನು ಬಳಸಿರುವುದು ಹಾಗೂ ಸದಾ ನಿರೀಶ್ವರವಾದಿಯೆಂದು ನಂಬಿಸಿದವನು ದೇವರ ಮಾತೆತ್ತಿರುವುದು.

೩೩. ಕ. ೪೯–೫೦ – ೧೯೪೧ ರಲ್ಲಿ ಬ್ರೆಷ್ಟ್ ಹೆಂಡತಿ ಮಕ್ಕಳೊಡನೆ ಅಮೆರಿಕಾಗೆ ಹೊರಟಾಗ ಅವರೊಂದಿಗೆ ಅವನ ಸಹ–ರಂಗಕರ್ಮಿ ಮಾರ್ಗರೆಟ್ ಸ್ಟೆಫಿನ್‌ಳೂ ಇದ್ದಳು. ಆದರೆ ಶ್ವಾಸರೋಗದಿಂದ ನರಳುತ್ತಿದ್ದ ಸ್ಟೆಫಿನ್ ದಾರಿಯಲ್ಲಿ ಮಾಸ್ಕೋದ ಆಸ್ಪತ್ರೆಯಲ್ಲಿ ಉಳಿಯಬೇಕಾಗಿ ಬಂದಿತು. ಬ್ರೆಷ್ಟ್ ಕುಟುಂಬ ಅವಳನ್ನು ಹಿಂದೆ ಬಿಟ್ಟು ಮುಂದೆ ಪ್ರಯಾಣ ಮಾಡಿದರು. ಅವಳು ಅಲ್ಲೇ ಮರುತಿಂಗಳು ತೀರಿಕೊಂಡಳು. ಅವಳ ಸಾವಿನಿಂದ ಬ್ರೆಷ್ಟ್‌ಗೆ ತುಂಬ ಆಘಾತವಾಯಿತು. ಅವಳನ್ನು ಕುರಿತು ಅವನು ಬರೆದ ಆರು ಕವಿತೆಗಳಲ್ಲಿ ಎರಡನ್ನು ಇಲ್ಲಿ ಕೊಟ್ಟಿದೆ. ಬ್ರೆಷ್ಟ್ ತನ್ನ ಕಾವ್ಯಧರ್ಮಕ್ಕೆ ವಿರುದ್ಧವಾಗಿ ತೀರಾ ಬೇಕಾದವರ ವಿಷಯದಲ್ಲಿ ತುಂಬ ಭಾವಪರವಶನಾಗುತ್ತಿದ್ದ.

ಕ. ೪೯, ಸಾಲು ೫ – 'ಮೃಗಶಿರಾ' : ಇಂಗ್ಲಿಷಿನ 'ಒರೈಆನ್' (Orion) ನಕ್ಷತ್ರ.

೩೪. ಕ. ೫೧ – ಅಮೆರಿಕದಲ್ಲಿನ ಅನುಭವ

೩೫. ಕ. ೫೨ – ಭಾಷೆ ಬರದ ಪೌರ ಸಂಖ್ಯೆಯಲ್ಲಿ ಉತ್ತರ ಕೊಡುತ್ತಾನೆ. ಪ್ರಜಾಹಿತೈಷಿ ನ್ಯಾಯಾಧೀಶ ಉತ್ತರಕ್ಕೆ ತಕ್ಕಂತೆ ಪ್ರಶ್ನೆ ರೂಪಿಸಿಕೊಳ್ಳುವುದು ಇದರ ಸ್ವಾರಸ್ಯ.

೩೬. ಕ. ೫೩–೫೬ – ಹಾಲಿವುಡ್ ಅನುಭವಗಳು.

ಕ. ೫೬ – ಬ್ರೆಷ್ಟ್ ಬದುಕಿದ್ದಾಗಲೇ ಇದು ಇಂಗ್ಲಿಷಿಗೆ ಅನುವಾದವಾಗಿತ್ತು. ಅಲ್ಲಿಂದೀಚೆಗೆ ಇದರ ಮೂಲ ಜರ್ಮನ್ ಪಾಠವೇ ದೊರೆತಿಲ್ಲ!

೩೭. ಕ. ೫೭–೫೯ – 'ನಗರ ದೃಶ್ಯಮಾಲಿಕೆ' : ಅಮೆರಿಕದ ದೃಶ್ಯಗಳು.

೩೮. ಕ. ೬೦ – ಕ. ೧೦ರ ಟಿಪ್ಪಣಿ ನೋಡಿ.

೩೯. ಕ. ೬೫ – ಇದು ಯಾರನ್ನು ಕುರಿತು ಬರೆದದ್ದೆಂದು ತಿಳಿದಿಲ್ಲ.

೪೦. ಕ. ೬೬ – ಕ. ೧೮ ಮತ್ತು ೧೯ರ ಟಿಪ್ಪಣಿ ನೋಡಿ. ಅದೇ 'ಕಿನೆಟಿಕ್ ಪ್ರಿನ್ಸಿಪಲ್'. ಮೊದಲ ಚರಣದ ಕೊನೆಯ ಮೂರು ಸಾಲುಗಳು ಎರಡನೆ ಚರಣದ ಮೊದಲ ಮೂರು ಸಾಲುಗಳಾಗಿ ಪುನರಾವೃತ್ತಿಯಾಗಿ, ಮೊದಲನೆಯದರಲ್ಲಿ ನಿರಾಶಾಭಾವನೆ, ಎರಡನೆಯದರಲ್ಲಿ ಆಶಾಭಾವನೆ ವ್ಯಕ್ತವಾಗುತ್ತದೆ.

೪೧. ಕ. ೬೯ – ೧೯೪೮ರ ಫೆಬ್ರುವರಿ ೧೫ರಂದು ಸ್ವಿಟ್ಜರ್‌ಲ್ಯಾಂಡಿನ ಚೂರ್ ನಗರದಲ್ಲಿ ಬ್ರೆಷ್ಟ್‌ನ 'ಅಂತಿಗೊನೆ'ಯ ಪ್ರಥಮ ಪ್ರದರ್ಶನದ ಸಂದರ್ಭದಲ್ಲಿ ಅಂತಿಗೊನೆ ಪಾತ್ರವಹಿಸಿದ್ದ ಹೆಂಡತಿ ಹೆಲೆನ್ ವೀಗಲ್‌ಳಿಗೆ ಅಂಕಿತವಾಗಿ ಬರೆದು, ಪ್ರದರ್ಶನದ ಸ್ಮಾರಿಕೆಯಲ್ಲಿ ಅಚ್ಚಾದದ್ದು.

ಸಾಲು ೧೦ – 'ಅಧಿಕಾರ ಬಲವಿದ್ದವರು' : ದೊರೆ ಕ್ರಿಯಾನ್.

೪೨. ಕ. ೭೦– ಪೂರ್ವ ಜರ್ಮನಿಯಿಂದ ಪ್ರಕಟವಾದ ಬ್ರೆಷ್ಟ್‌ನ 'ನೂರು ಕವಿತೆಗಳು' ಆಯ್ದ ಸಂಗ್ರಹದ ಮುಖಪುಟದ ರಚನೆಗೆ ಕಲಾವಿದ ಜಾನ್ ಹಾರ್ಟ್‌ಫೀಲ್ಡ್ ಚೀನಾದ ಒಂದು ಮರದ ಕೆತ್ತನೆಯ ಸಿಂಹದ ಚಿತ್ರ ಬಳಸಿದ್ದ. ಬ್ರೆಷ್ಟ್ ಆ ಚಿತ್ರಕ್ಕೂ ತನ್ನ ಕವಿತೆಗಳಿಗೂ ಸಂಬಂಧ ಸ್ಥಾಪಿಸಿ ಈ ಕವಿತೆ ಬರೆದ.

೪೩. ಕ. ೭೧ – ಇದು ೧೯೫೨ರ ಸುಮಾರಿಗೆ ಬರೆದದ್ದಾದರೂ ಇಲ್ಲಿನ ಸನ್ನಿವೇಶ ಯುದ್ಧಪೂರ್ವ ದಿನಗಳಲ್ಲಿ ಯೆಹೂದಿ ಹಾಗೂ ಕಮ್ಯುನಿಸ್ಟರ ಬಗ್ಗೆ ಸಹಾನುಭೂತಿ ತೋರಿಸುತ್ತಿದ್ದ ಜರ್ಮನ್ ಜನತೆಗೆ ಹಿಟ್ಲರನ ಹಿಂಬಾಲಕರು ಕೊಡುತ್ತಿದ್ದ ಹಿನ್ನೆನಪಿರಬೇಕು.

೪೪. ಕ. ೭೨–೭೭. 'ಬುಕೋವ್ ಶೋಕಗೀತೆಗಳು' : ಬ್ರೆಷ್ಟ್ ಪೂರ್ವ ಬರ್ಲಿನ್‌ಗೆ ಸಮೀಪದ ಬುಕೋವ್ ಹಳ್ಳಿಯಲ್ಲಿ ವಾಸಿಸುತ್ತಿದ್ದಾಗಿನ ಕೊನೆಗಾಲದ ಕವಿತೆಗಳು. ಒಟ್ಟು ೨೨ರಲ್ಲಿ ಆರನ್ನು ಇಲ್ಲಿ ಕೊಟ್ಟಿದೆ. ಹಾಲಿವುಡ್‌ನಲ್ಲಾಗಲೀ ಬುಕೋವ್‌ನಲ್ಲಾಗಲೀ ಅವನಿಗೆ ಕಾಣಿಸುತ್ತಿದ್ದುದು ಶೋಕದ ಬದುಕೇ.

ಕ. ೭೩– ಯುದ್ಧಾನಂತರ ಸ್ವದೇಶಕ್ಕೆ ಹಿಂದಿರುಗಿ ಪೂರ್ವ ಜರ್ಮನಿಯಲ್ಲಿ ನೆಲಸಿದ ಬ್ರೆಷ್ಟ್‌ಗೆ ಆ ದೇಶ ನಡೆದಿದ್ದ ರೀತಿ ಇಷ್ಟವಾಗಿರಲಿಲ್ಲ. ಈ ಕವಿತೆಯಲ್ಲಿ ಅವನ ಮನಸ್ಸಿನ ತ್ರಿಶಂಕುಸ್ಥಿತಿ ಪ್ರಯಾಣದ ಪ್ರತಿಮೆಯ ಮೂಲಕ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಕ. ೭೫ – ಪೂರ್ವ ಜರ್ಮನಿಯ ಕಾರ್ಮಿಕರು ಅಲ್ಲಿನ ಕಮ್ಯುನಿಸ್ಟ್ ಸರಕಾರ ತಮ್ಮ ಹಿತಾಸಕ್ತಿಗಳ ವಿರುದ್ಧ ಕೈಗೊಂಡಿದ್ದ ಆರ್ಥಿಕನೀತಿಯನ್ನು ಖಂಡಿಸಿ ೧೯೫೩ರ ಜೂನ್ ತಿಂಗಳಲ್ಲಿ ದಂಗೆ ಎದ್ದದ್ದು, ಸರಕಾರ ಸೈನ್ಯ ಬಲದಿಂದ ಆ ದಂಗೆಯನ್ನು ಅಡಗಿಸಿ ಜನತೆಯ ಮೇಲೆಯೇ ತಪ್ಪು ಹೊರೆಸಿದ್ದು ಇತಿಹಾಸದ ಸಂಗತಿ. ಇದು ಬ್ರೆಷ್ಟ್‌ನನ್ನು ಧರ್ಮಸಂಕಟದಲ್ಲಿ ಸಿಕ್ಕಿಸಿತು. ಇತ್ತ ತನಗೆ ಸರಿಯೆಂದು ಕಂಡ ಜನತೆಯ ಆಂದೋಳನ, ಅತ್ತ ತನಗೆ ಆಶ್ರಯವಿತ್ತಿದ್ದ ಸರಕಾರ. ಜನಕ್ರಾಂತಿಗೆ ಬೆಂಬಲ ಕೊಟ್ಟು ಬರೆದ ಕವಿತೆ ಇದು. ಕವಿತೆಗಿಂತ ಹೆಚ್ಚಾಗಿ ರಾಜಕೀಯ ಟಿಪ್ಪಣಿ, ಬ್ರೆಷ್ಟ್‌ನ ಸಂಗ್ರಹದಲ್ಲಿ ಇಂತಹವು ಹಲವಿವೆ.

ಕ. ೭೬ – ಜರ್ಮನ್ ಕಾವ್ಯಜ್ಞರ ಪ್ರಕಾರ, ಕವಿ ಗಯಟೆಯ ನಂತರ ತೀರಾ ಕಡಿಮೆ ಸಾಲುಗಳಲ್ಲಿ ಇಂತಹ ಉತ್ತಮ ಕವಿತೆ ಬರೆದವರು ಬೇರೊಬ್ಬರಿಲ್ಲ, ಮರಗಳ ನಡುವಿನ ಮನೆ ಸ್ಥಿರಚಿತ್ರ. ಸೂರಿಂದೇಳುವ ಹೊಗೆ ಅದಕ್ಕೆ ಚಲನಶೀಲತೆ ಕೊಟ್ಟು ಜೀವಂತವನ್ನಾಗಿ ಮಾಡುತ್ತದೆ. ಹೊಗೆಯಿದ್ದಲ್ಲಿ ಬೆಂಕಿ, ಬೆಂಕಿಯೆಂದರೆ ಬಿಸುಪು, ಅಡಿಗೆ, ಮನುಷ್ಯ. ಸ್ಥಿರಪ್ರಕೃತಿಗೆ ಚಲನೆ ಕೊಡುವುದು ಮನುಷ್ಯನ ಬದುಕು.

ಕ. ೭೭ – 'ಹೊರೇಸ್' (ಕ್ವಿಂಟಸ್ ಹೊರೇಷಿಯಸ್ ಫ್ಲಾಕಸ್) : ಕ್ರಿಸ್ತಪೂರ್ವ ೬೫ರ ಸುಮಾರಿಗೆ ಜೀವಿಸಿದ್ದ ಪ್ರಖ್ಯಾತ ರೋಮನ್ ಕವಿ. ಈ ಕವಿತೆಯಲ್ಲಿ 'ಕೆಟ್ಟಕಾಲ' ಮುಂದುವರಿದಿರುವ ಸೂಚನೆ, ಜತೆಗೇ ಅದು ಮುಗಿಯದೇ ಇರಲಾರದೆಂಬ ಆಶಾಭಾವನೆಯಿದೆ. ಸಂದರ್ಭ : ಪೂರ್ವ ಜರ್ಮನಿಯ ಕಮ್ಯುನಿಸ್ಟ್ ಸರಕಾರ ನಡೆದಿದ್ದ ರೀತಿ ಬ್ರೆಷ್ಟ್‌ಗೆ ತುಂಬ ಅತೃಪ್ತಿ ಕೊಟ್ಟಿತ್ತು.

೪೫. ಕ. ೭೮, ಚರಣ ೩, ಸಾಲು ೫ – 'ಅಜ್ಡ್‌ದಕ್' : ಬ್ರೆಷ್ಟ್‌ನ 'ಕಾಕೇಶಿಯನ್ ಚಾಕ್ ಸರ್ಕಲ್'ನ ಮುಖ್ಯಪಾತ್ರ. ಚತುರ, ವಿವೇಕಿ. ಮಗು ಅದನ್ನು ದೂರ ಮಾಡಿದ ಹೆತ್ತ ತಾಯಿಗೆ ಸೇರಬೇಕೆ ಅಥವಾ ಪ್ರೀತಿಯಿಂದ ಬೆಳಸಿದ ಸಾಕು ತಾಯಿಗೋ ಎಂಬ ಸಮಸ್ಯೆಯನ್ನು ಬಗೆಹರಿಸುವವನು ಅವನು. ಇಲ್ಲಿ ಅವನ

'ಅಪ್ಪ'ನೆಂದರೆ ಆವನಿಗಿಂತಲೂ ವಿವೇಕಿ. ನಾಟಕದಲ್ಲಿ ಅಜ್ಡ್‌ದಕ್‌ನಿಗೆ ಅಂಥ ಅಪ್ಪನಿಲ್ಲ.

೪೬. ಕ. ೭೯ – ೧೯೫೬ರ ಮೇ ತಿಂಗಳಲ್ಲಿ ಬ್ರೆಷ್ಟ್ ಪೂರ್ವ ಬರ್ಲಿನ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಬರೆದದ್ದು. ಜರ್ಮನ್ ವಿಮರ್ಶಕರ ಪ್ರಕಾರ ಇಲ್ಲಿನ ಕಬ್ಬಕ್ಕಿ (ಅನುವಾದದಲ್ಲಿ 'ಕೃಷ್ಣಪಕ್ಷಿ') ಕಲೆಗೆ ಸಂಕೇತ. ಈ ವ್ಯಾಖ್ಯೆ ಕವಿತೆಯ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ. ಆದರೆ ವೇದಾಂತ, ಅನುಭಾವಗಳಿಗೆ ಒಗ್ಗಿದ ನಮಗೆ ಅದು ಸಾವಿನ ಸಂಕೇತವಾಗಿ ಬೇರೆ ಒಂದು ಆಳವಾದ ಅರ್ಥ ಕೊಡಬಲ್ಲದು. ಏನೇ ಇರಲಿ, ಬ್ರೆಷ್ಟ್ ಬರೆದ ಈ ಬಗೆಯ ಕವಿತೆ ಇದೊಂದೇ. ಇದನ್ನು ಬರೆದ ಮೂರು ತಿಂಗಳಿಗೆ, ಆಗಸ್ಟ್ ೧೪ರಂದು, ಬ್ರೆಷ್ಟ್ ತೀರಿಕೊಂಡ.

೪೭. ಕ. ೮೦ – ಇದರ ಇಂಗ್ಲಿಷ್ ಅನುವಾದ ಆದಂತಿಲ್ಲ, ಇದು ಬ್ರೆಷ್ಟ್‌ನ ಕೊನೆಗಾಲದ ಗುರಿ ಸಾಧಿಸಲಾಗಲಿಲ್ಲವೆಂಬ ಹತಾಶೆಯ ಮನಃಸ್ಥಿತಿಯನ್ನು ತೋರಿಸುತ್ತದೆ.

೪. ಘಟನಾವಳಿ

ಬ್ರೆಷ್ಟ್‌ನ ಜೀವನ, ಕಾವ್ಯಸಾಧನೆ,
ಜರ್ಮನಿಯ ರಾಜಕೀಯ ಪ್ರಸಂಗಗಳು.

೧೦ ಫೆಬ್ರುವರಿ ೧೮೯೮ – ದಕ್ಷಿಣ ಜರ್ಮನಿಯ ಔಗ್ಸ್‌ಬರ್ಗ್‌ನಲ್ಲಿ ಬ್ರೆಷ್ಟ್‌ನ ಜನನ.

೧೯೦೪ – ಅಲ್ಲೇ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಾರಂಭ.

೧೯೧೨ – ಪ್ರಾಯಶಃ ಅವನ ಮೊದಲ ಕವಿತೆ 'ಡರ್ ಬ್ರೆಂಡೆನ್ ಹಿಮೆಲ್' (ಉರಿವ ಮರ)ನ ರಚನೆ, ಆ ಕಾಲದ ಎಕ್ಸ್‌ಪ್ರೆಷನಿಸ್ಟ್ ಧಾಟಿಯಲ್ಲಿ.

೧೯೧೪ – ಔಗ್ಸ್‌ಬರ್ಗ್‌ನ ಪತ್ರಿಕೆಯೊಂದರಲ್ಲಿ ಮೊದಲ ಗದ್ಯಲೇಖನದ ಪ್ರಕಟನೆ.
– ಮೊದಲ ವಿಶ್ವ ಮಹಾಯುದ್ಧದ ಪ್ರಾರಂಭ.

೧೯೧೭ – ಔಗ್ಸ್‌ಬರ್ಗ್‌ನಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿ ಮುಂದೆ ಮ್ಯೂನಿಕ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸದ ಮುಂದುವರಿಕೆ. ವಿಷಯ: ವೈದ್ಯ ಹಾಗೂ ಜೀವಶಾಸ್ತ್ರ.

೧೯೧೮ – ಕೊಂಚ ಕಾಲ ಮೆಡಿಕಲ್ ಆರ್ಡರ್ಲಿಯಾಗಿ ಸೈನ್ಯದಲ್ಲಿ ಭರ್ತಿ.
– ಸೈನಿಕ ಜೀವನದ ಬಗ್ಗೆ ಕಟು ವಿಡಂಬನಾತ್ಮಕ ಕವಿತೆ 'ಮೃತಯೋಧನ ಜೀವನ ವೃತ್ತಾಂತ'ದ ರಚನೆ.
– ನಾಟಕ ರಚನಾರಂಭ, 'ಬಾಲ್' ನೊಂದಿಗೆ.
– ಮೊದಲ ಯುದ್ಧದಲ್ಲಿ ಜರ್ಮನಿಯ ಸೋಲು. ದೀರ್ಘ ಕಾಲದ ರಾಜಕೀಯ ಹಾಗೂ ಆರ್ಥಿಕ ದುಸ್ಥಿತಿಯ ಪ್ರಾರಂಭ.

೧೯೧೯ – ಔಗ್ಸ್‌ಬರ್ಗ್‌ನ 'ಡೆರ್ ವ್ರೋಕ್ಸ್‌ವಿಲೆನ್' ಪತ್ರಿಕೆಯಲ್ಲಿ ರಂಗವಿಮರ್ಶಕನಾಗಿ ನೇಮಕ.
– ಪೌಲಾ (ಬೀ) ಬಾನ್‌ಹೋಲ್ಸರ್‌ನೊಂದಿಗೆ ಅವಿವಾಹ ಸಂಬಂಧ, ಮಗ ಫ್ರಾಂಕ್‌ನ ಜನನ.

೧೯೨೦ – ಮ್ಯೂನಿಕ್‌ನ ಕಾಮೆರ್‌ಸ್ಪೀಲ್ ಗೃಹರಂಗಮಂದಿದಲ್ಲಿ 'ಡ್ರಾಮಟರ್ಗ್' (ನಾಟಕಕಾರ)ನಾಗಿ ಕೆಲಸ.
– ಬರ್ಲಿನ್ ನಗರಕ್ಕೆ ಮೊದಲ ಭೇಟಿ.
– ತಾಯಿಯ ಮರಣ.

೧೯೨೨ – ಮ್ಯೂನಿಕ್‌ನಲ್ಲಿ, ರಂಗಭೂಮಿಯ ಮೇಲೆ ಮೊತ್ತಮೊದಲ ಬಾರಿಗೆ ಬ್ರೆಷ್ಟ್‌ನ ನಾಟಕ ಪ್ರದರ್ಶನ, 'ಡ್ರಮ್ಸ್ ಇನ್ ದಿ ನೈಟ್'. ಇದು ಹಾಗೂ 'ಬಾಲ್' ಪುಸ್ತಕ ರೂಪದಲ್ಲಿ ಪ್ರಕಟನೆ.
– ಆಪೆರಾ ಗಾಯಕಿ ಮಾರಿಯಾನೆ ಜೋಫ್‌ಳೊಂದಿಗೆ ಮದುವೆ.
– ಬ್ರೆಷ್ಟ್‌ನ ನಾಟಕಕ್ಕೆ ಜರ್ಮನಿಯ ಅತಿಪ್ರಮುಖ ಕ್ಲೀಸ್ಟ್ ಪುರಸ್ಕಾರದ ಘೋಷಣೆ.

೧೯೨೩ – ಬ್ರೆಷ್ಟ್–ಮಾರಿಯಾನೇರ ಹೆಣ್ಣು ಮಗು ಹಾನೆಯ ಜನನ.

೧೯೨೪ – ಹೆಲೆನ್ ವೀಗಲ್‌ಳೊಂದಿಗೆ ಅವಿವಾಹ ಸಂಬಂಧ, ಅವರ ಮಗ ಸ್ಟೆಫನ್‌ನ ಜನನ.
– ಮುಂದೆ ಅವನ ಅನೇಕ ಬರವಣಿಗೆಗಳಲ್ಲಿ 'ಸಹ ಲೇಖಕಿ'ಯಾಗುವ ಎಲಿಜ್ಜಬೆತ್ ಹೌಪ್ಟ್‌ಮನ್‌ಳ ಪರಿಚಯ.
– ಬರ್ಲಿನ್ ವಾಸದ ಪ್ರಾರಂಭ.

೧೯೨೫ – ಸಣ್ಣಕತೆಗಳ ಬರವಣಿಗೆ, ಪತ್ರಿಕೋದ್ಯಮ, ಬಹುಮಟ್ಟಿಗೆ ಅವುಗಳ ಸಂಪಾದನೆಯ ಮೇಲೆ ಜೀವನ.

೧೯೨೬ – ಕವಿತಾಸಂಗ್ರಹ 'ಟಾಶ್ಚೆನ್‌ಪೋಸ್ಟಿಲ್' (ಭಕ್ತಿಪಾಠಗಳ ಕಿಸೆ ಪುಸ್ತಕ) ಪ್ರಕಟನೆ, ಕೇವಲ ೨೫ ಪ್ರತಿಗಳ ಸಂಸ್ಕರಣ.
– ಕಾರ್ಲ್ ಕೋರ್ಷ್‌ನಿಂದ ಪ್ರೇರಿತನಾಗಿ ಮಾರ್ಕ್ಸ್‌ವಾದದ ಗಂಭೀರ ಅಧ್ಯಯನದಲ್ಲಿ ತೊಡಗಿಕೆ.

ಜನವರಿ ೧೯೨೭ – ನಿಜವಾದ ಅರ್ಥದಲ್ಲಿ ಮೊದಲ ಕವಿತಾಸಂಗ್ರಹವಾದ 'ಹೌಸ್‌ಪೋಸ್ಟಿಲ್' (ಕುಟುಂಬದ ಭಕ್ತಿಪಾಠಗಳು) ಪ್ರಕಟನೆ. ಒಟ್ಟು ಐವತ್ತು ಕವಿತೆಗಳ ಗುಚ್ಛ. ಒಂದರ ಹೊರತು 'ಟಾಶ್ಚೆನ್ ಪೋಸ್ಟಿಲ್'ನ ಉಳಿದೆಲ್ಲ ಕವಿತೆಗಳೂ ಇದರಲ್ಲಿವೆ. ರಕ್ಷಾಪತ್ರದ ಮೇಲೆ ಕೇವಲ ಬ್ರೆಷ್ಟ್‌ನ ಹೆಸರಿದ್ದರೂ ಕೆಲವು ಎಲಿಜ಼ಬೆತ್ ಹೌಪ್ಟ್‌ಮನ್‌ಳವು.

– ಮಾರಿಯಾನೆ ಜೋಫ್‌ಳೊಂದಿಗೆ ವಿವಾಹವಿಚ್ಛೇದನೆ.

೧೯೨೯ – ಐದು ವರ್ಷಗಳ ಅವಿವಾಹ ಸಂಬಂಧ ಹಾಗೂ ಮಗನ ಜನನದ ನಂತರ ಹೆಲೆನ್ ವೀಗಲ್‌ಳೊಂದಿಗೆ ಅಧಿಕೃತ ಮದುವೆ.

೧೯೩೦ – ಬ್ರೆಷ್ಟ್ ಮತ್ತು ಹೆಲೆನ್ ವೀಗಲ್‌ರ ಮಗಳು ಬಾರ್ಬರಾಳ ಜನನ.

– ಜರ್ಮನಿಯ ರಾಜಕೀಯದಲ್ಲಿ ಹಿಟ್ಲರ್ ಹಾಗೂ ಅವನ ನೇಷನಲ್ ಸೋಷಿಯಲಿಸ್ಟ್ ಪಕ್ಷದ ದುರುತ್ಥಾನದ ಆರಂಭ.

– 'ದಿ ರೈಸ್ ಅಂಡ್ ಫಾಲ್ ಆಫ್ ದಿ ಸಿಟಿ ಅಫ್ ಮಹಾಗೊನಿ' (ಮಹಾಗೊನಿ ನಗರದ ಏಳು–ಬೀಳು) ನಾಟಕ ಪ್ರದರ್ಶನ. ಹಿಟ್ಲರ್‌ನ ನಾಜಿ ಪಡೆಯವರಿಂದ ವಿರೋಧ ಪ್ರದರ್ಶನ.

೧೯೩೦–೩೨ – 'ವೇರ್ಸೂಶೆ' (ಪ್ರಯೋಗಗಳು) ಎಂಬ ಹೆಸರಿನಲ್ಲಿ ಏಳು ಕವಿತೆಯ ಹೊತ್ತಿಗೆಗಳ ಪ್ರಕಟನೆ.

೧೯೩೨ – ಬ್ರೆಷ್ಟ್ ಹಾಗೂ ಅವನ ಸಹೋದ್ಯೋಗಿಗಳಿಂದ ಜರ್ಮನಿಯ ಘೋರ ನಿರುದ್ಯೋಗ ಪರಿಸ್ಥಿತಿಯನ್ನು ಟೀಕಿಸುವ 'ಕೂಹ್ಲೆ ವಾಂಪೆ' ಚಲನಚಿತ್ರದ ನಿರ್ಮಾಣ, ಪ್ರದರ್ಶನ. ಸರಕಾರದಿಂದ ಬಹಿಷ್ಕಾರ.

೧೯೩೩ – ಹಿಟ್ಲರ್ ಜರ್ಮನಿಯ ಚಾನ್ಸೆಲರ್ ಆಗಿ ನೇಮಕ.

– ಬರ್ಲಿನ್‌ನ 'ರೈಷ್‌ಸ್ಟಾಗ್' (ಶಾಸನ ಸಭಾಭವನ)ಗೆ ಬೆಂಕಿ ಬೀಳುತ್ತದೆ. ಮುಂಬರುವ ಚುನಾವಣೆಯಲ್ಲಿ ಗೆಲ್ಲುವ ದಾರಿಯೆಂದು ಹಿಟ್ಲರ್‌ನ ನಾಜ಼ಿಪಕ್ಷ ತಾನೇ ಬೆಂಕಿ ಹಾಕಿ ಕಮ್ಯುನಿಸ್ಟರ ಮೇಲೆ ತಪ್ಪು ಹೊರಿಸುತ್ತದೆ. ಬ್ರೆಷ್ಟ್ ತನ್ನ

ಸೆರೆಯಾಗಬಹುದೆಂದು ಹೆದರಿ ಬರ್ಲಿನ್ ಬಿಟ್ಟು ಹೋಗುತ್ತಾನೆ. ಹಿಟ್ಲರ್ ಸಾರ್ವಜನಿಕ ಹಕ್ಕುಗಳನ್ನು ರದ್ದು ಮಾಡುತ್ತಾನೆ.

– ಜರ್ಮನಿಯ ಚುನಾವಣೆಯಲ್ಲಿ ಹಿಟ್ಲರ್‌ಗೆ ಶೇಕಡಾ ೯೩ರ ಪೂರ್ಣ ಬಹುಮತ.

– ಶಾಸನ ಸಭೆ ಹಿಟ್ಲರ್‌ಗೆ ಸರ್ವಾಧಿಕಾರ ಕೊಡುತ್ತದೆ.

– ನಾಜ್ಜಿಗಳು ಯೆಹೂದಿಗಳಿಗೆ ಬಹಿಷ್ಕಾರ ಹಾಕುತ್ತಾರೆ. ಹಿಟ್ಲರ್ ಅವರ ನಿರ್ಮೂಲನದ ಘೋಷಣೆ ಮಾಡುತ್ತಾನೆ. ಯೆಹೂದಿಗಳು ಜರ್ಮನಿಯನ್ನು ತೊರೆದು ಹೊರದೇಶಗಳಲ್ಲಿ ನೆಲಸತೊಡಗುತ್ತಾರೆ.

– ಹೆಲೆನ್ ವೀಗಲ್ ಯೆಹೂದಿ. ಅವಳೂ ಮಕ್ಕಳೊಂದಿಗೆ ಡೆನ್ಮಾರ್ಕಿಗೆ ಹೋಗುತ್ತಾಳೆ. ಬ್ರೆಷ್ಟ್ ಸಹ ಜರ್ಮನಿ ತೊರೆದು, ದೇಶಾಂತರವಾಸಿಯಾಗುತ್ತಾನೆ. ಆಸ್ಟ್ರಿಯಾ, ಸ್ವಿಟ್ಜರ್‌ಲ್ಯಾಂಡ್, ಫ್ರಾನ್ಸ್‌ಗಳಲ್ಲಿ ಕೆಲವು ದಿನವಿದ್ದು ಕೊನೆಗೆ ಡೆನ್ಮಾರ್ಕಿಗೆ ಬಂದು, ಅಲ್ಲೇ ಮನೆಕೊಂಡು ಹೆಲೆನ್ ವೀಗಲ್ ಮತ್ತು ಮಕ್ಕಳೊಂದಿಗೆ ನೆಲಸುತ್ತಾನೆ.

೧೯೩೪ – 'ಗೆಡಿಶ್ಟೆ, ಲೀಯಡರ್, ಕೋಯೆರೆ' (ಕವಿತೆಗಳು, ಹಾಡುಗಳು, ವೃಂದಗಾನಗಳು)ಯ ಪ್ರಕಟನೆ, ಪ್ಯಾರಿಸ್ಸಿನಿಂದ. ಜರ್ಮನಿಯ ಆರ್ಥಿಕ ದುರವಸ್ಥೆ ಹಾಗೂ ಹಿಟ್ಲರ್ ವಿರೋಧೀ ಹೋರಾಟಗಳನ್ನು ಕುರಿತ ರಾಜಕೀಯ ಕವಿತೆಗಳು ಇದರಲ್ಲಿವೆ.

೧೯೩೫ – ಬ್ರೆಷ್ಟ್‌ನ ಮೊದಲ ಮಾಸ್ಕೊ ಭೇಟಿ. ರಷ್ಯದ ರಂಗ ದಿಗ್ದರ್ಶಕ ಶ್ಕ್ಲೊವೋಸ್ಕಿಯ ಪರಿಚಯ. ಅವನು ಬಳಸಿದ 'ಪ್ರಿಯೆಮ್ ಆಸ್ಟ್ರನ್ನೆನೀಜ' ರಂಗತಂತ್ರವನ್ನು ಅನುಸರಿಸಿ ಬ್ರೆಷ್ಟ್ 'ಫೆರ್‌ಫ್ರೆಮ್‌ಡುಂಗ್' (ಏಲಿಯನೇಷನ್) ಶಬ್ದ ಹಾಗೂ ತಂತ್ರಗಳಿಗೆ ಚಲಾವಣೆ ಕೊಡುತ್ತಾನೆ.

– ಪ್ಯಾರಿಸ್ಸಿನಲ್ಲಿ ನಡೆದ ಅಂತರರಾಷ್ಟ್ರೀಯ ಲೇಖಕ ಸಮ್ಮೇಳನದಲ್ಲಿ ಭಾಗವಹಿಸುತ್ತಾನೆ.

– ಮೊದಲ ಬಾರಿ ಅಮೆರಿಕಾಗೆ ಭೇಟಿ, ಅವನ 'ಮದರ್' ನಾಟಕದ ಪ್ರದರ್ಶನದಲ್ಲಿ ಭಾಗವಹಿಸಲು.

– ನಾಜ್ಜಿ ಸರಕಾರ ಬ್ರೆಷ್ಟ್‌ನ ಜರ್ಮನ್ ಪೌರತ್ವವನ್ನು ರದ್ದು ಮಾಡುತ್ತದೆ.

– ಎಂಬತ್ತು ಸಾವಿರಕ್ಕೂ ಹೆಚ್ಚು ಯೆಹೂದಿಗಳು ಜರ್ಮನಿ ಬಿಟ್ಟು ಹೋಗಿದ್ದಾರೆ.

– ಆಸ್ಟ್ರಿಯಾದಿಂದ ಮೊದಲು ಮಾಡಿ ಜರ್ಮನಿಯ ವಿಸ್ತರಣೆಗೆ ಹಿಟ್ಲರ್ ಸಂಚುಹಾಕುತ್ತಾನೆ

೧೯೩೮ – ಹಿಟ್ಲರ್ ಆಸ್ಟ್ರಿಯಾದ ಮೇಲೆ ದಾಳಿಮಾಡಿ ಅದನ್ನು ಆಕ್ರಮಿಸುತ್ತಾನೆ.
– ಯೆಹೂದಿಗಳನ್ನು 'ಕಾನ್‌ಸೆಂಟ್ರೇಷನ್ ಕ್ಯಾಂಪ್'ಗಳಿಗೆ ಕಳಿಸುತ್ತಾನೆ.

೧೯೩೯ – ಬ್ರೆಷ್ಟ್ ಡೆನ್ಮಾರ್ಕಿನಿಂದ ಸ್ವೀಡನ್ನಿಗೆ.

೧ ಸೆಪ್ಟೆಂಬರ್ ೧೯೩೯ – ಹಿಟ್ಲರ್ ಪೋಲ್ಯಾಂಡಿನ ಮೇಲೆ ಬಾಂಬಿನ ದಾಳಿ ಮಾಡಿ ಅದನ್ನು ಆಕ್ರಮಿಸುತ್ತಾನೆ. ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿಯ ವಿರುದ್ಧ ಯುದ್ಧ ಸಾರುತ್ತವೆ.
– ಮ್ಯೂನಿಕ್‌ನ ಮದ್ಯದಂಗಡಿಯಲ್ಲಿ ಬಾಂಬಿನ ಪ್ರಕರಣ. ಹಿಟ್ಲರ್ ಬಚಾವಾಗುತ್ತಾನೆ.
– ಬ್ರೆಷ್ಟ್ ಡೆನ್ಮಾರ್ಕಿನಲ್ಲಿ ದೇಶಾಂತರವಾಸದಲ್ಲಿದ್ದಾಗ ಬರೆದ ಕವಿತೆಗಳು 'ಸ್ವೆಂಡ್‌ಬೋರ್ಗರ್ ಗೆಡಿಶ್ಟೆ' (ಸ್ವೆಂಡ್‌ಬೋರ್ಗ್ ಕವಿತೆಗಳು)ಯ ಪ್ರಕಟನೆ, ಲಂಡನ್ನಿನಿಂದ.
– ತಂದೆಯ ನಿಧನ.

೧೯೪೦ – ಹಿಟ್ಲರ್ ಸೈನ್ಯ ಡೆನ್ಮಾರ್ಕ್, ನಾರ್ವೆಗಳಿಗೆ ನುಗ್ಗಿದಂತೆ ಬ್ರೆಷ್ಟ್ ಪರಿವಾರದೊಂದಿಗೆ ಸ್ವೀಡನ್‌ನಿಂದ ಫಿನ್‌ಲ್ಯಾಂಡ್‌ನ ಹೆಲ್ಸಿಂಕಿಗೆ ಬಂದು ನೆಲಸುತ್ತಾನೆ.
– ಹಾಲೆಂಡ್, ಬೆಲ್ಜಿಯಮ್‌ಗಳು ಹಿಟ್ಲರ್ ಸೈನ್ಯಕ್ಕೆ ಶರಣಾಗತವಾಗುತ್ತವೆ.
– ಜರ್ಮನಿ ಫ್ರಾನ್ಸ್ ಕಡೆಗೆ ನುಗ್ಗುತ್ತದೆ. ಜತೆಗೇ ಇಂಗ್ಲಂಡಿನ ಮೇಲೆ ಬಾಂಬಿನ ದಾಳಿ ಷುರುಮಾಡುತ್ತದೆ.

೧೯೪೧ – ಹಿಟ್ಲರ್ ಸೈನ್ಯ ಬಾಲ್ಕನ್ ಕ್ಷೇತ್ರದಲ್ಲಿ ಮುನ್ನಡೆದಂತೆ, ಬ್ರೆಷ್ಟ್ ಲೆನಿನ್‌ಗ್ರಾಡ್, ಮಾಸ್ಕೊಗಳಿಗೆ ಬಂದು, ವ್ಲಾಡಿವೋಸ್ಟಾಕ್ ಬಂದರಿನಿಂದ ಪರಿವಾರಸಮೇತ ಅಮೆರಿಕಾಗೆ ತೆರಳಿ, ಅಲ್ಲಿ ಕ್ಯಾಲಿಫೋರ್ನಿಯಾದಲ್ಲಿ ನೆಲಸುತ್ತಾನೆ.

– ಹಿಟ್ಲರ್ ಸೈನ್ಯ ರಷ್ಯಾದ ಲೆನಿನ್‌ಗ್ರಾಡ್‌ಗೆ ಮುತ್ತಿಗೆ ಹಾಕಿ, ಮಾಸ್ಕೊ ಕಡೆಗೆ ಮುನ್ನಡೆಯುತ್ತದೆ. ಮಾಸ್ಕೊ ದ್ವಾರದಲ್ಲಿ ರಷ್ಯಾ ನಾಜ್ಹಿಪಡೆಯನ್ನು ತಡೆಯುತ್ತದೆ.

೧೯೪೨ – ಯುದ್ಧದಲ್ಲಿ ಫ್ರಾನ್ಸ್‌ನ ಪತನ.

೧೯೪೩ – ನಾಜ್ಹಿಗಳು ಲಕ್ಷಾಂತರ ಯೆಹೂದಿಗಳನ್ನು ಗ್ಯಾಸ್ ಚೇಂಬರ್‌ಗಳಲ್ಲಿ ಸುಟ್ಟು ಕೊಂದಿದ್ದಾರೆ.

೧೯೪೪ – ಬರ್ಲಿನ್ ಮೇಲೆ ಅಮೆರಿಕಾದ ಬಾಂಬ್ ದಾಳಿ.
– ರಷ್ಯನರು ನಾಜ್ಹಿಗಳನ್ನು ಹಿಂದಟ್ಟಿ, ಆಸ್ಟ್ರಿಯಾದ ವಿಯೆನ್ನಾವನ್ನು ಆಕ್ರಮಿಸಿ, ಬರ್ಲಿನ್ ಕಡೆ ಧಾವಿಸುತ್ತಾರೆ. ಬರ್ಲಿನ್‌ನ 'ರೈಷ್‌ಸ್ಟಾಗ್' (ಶಾಸನ ಭವನ) ಮೇಲೆ ರಷ್ಯದ ಬಾವುಟ ಹಾರುತ್ತದೆ.

೭ ಮೇ ೧೯೪೫ – ಯುದ್ಧದಲ್ಲಿ ಜರ್ಮನಿಯ ಸೋಲು, ಶರಣಾಗತಿ.
– ಯುದ್ಧ ಮುಗಿದರೂ ಬ್ರೆಷ್ಟ್ ಸ್ವದೇಶಕ್ಕೆ ಹಿಂದಿರುಗುವುದಿಲ್ಲ, ಕಾದುನೋಡುತ್ತಾನೆ.

೧೯೪೭ – ಅಮೆರಿಕಾ–ವಿರೋಧೀ ಚಟುವಟಿಕೆಗಳ ವಿಚಾರಣೆಗೆ ಗೊತ್ತಾದ ಶಾಸನಸಭೆಯ ಕರೆಗೆ ಓಗೊಟ್ಟು ಅದರ ಮುಂದೆ ಹಾಜರಾಗಿ ಬ್ರೆಷ್ಟ್ ತಾನು ಕಮ್ಯುನಿಸ್ಟ್ ಅಲ್ಲವೆಂದು ಬಹು ಚತುರವಾಗಿ ಸಾಕ್ಷ್ಯ ಕೊಟ್ಟು, ಮರುದಿನವೇ ಹೇಳದೆ ಕೇಳದೆ ಅಮೆರಿಕಾ ಬಿಟ್ಟು ಯೂರೋಪಿಗೆ ಬರುತ್ತಾನೆ.

೧೯೪೮ – ಈಗ ಜರ್ಮನಿ ಮಿತ್ರರಾಷ್ಟ್ರಗಳ ನಡುವೆ ಇಬ್ಭಾಗವಾಗಿದೆ. ಬ್ರೆಷ್ಟ್ ಪೂರ್ವ ಜರ್ಮನಿಗೆ ಬಂದು ಪೂರ್ವ ಬರ್ಲಿನ್‌ನಲ್ಲಿ ಮತ್ತೊಮ್ಮೆ ರಂಗ–ಚಟುವಟಿಕೆಗಳಲ್ಲಿ ತೊಡಗುತ್ತಾನೆ.

೧೯೪೯ – ಪೂರ್ವ ಜರ್ಮನ್ ಸರಕಾರದ ಆಶ್ರಯದಲ್ಲಿ ಪೂರ್ವ ಬರ್ಲಿನ್‌ನಲ್ಲಿ ರಂಗಮಂದಿರದ ಸ್ಥಾಪನೆ.

೧೯೪೯–೫೭ – 'ವೇರ್ಸೂಶೆ' (ಪ್ರಯೋಗಗಳು) ಮಾಲೆಯಲ್ಲಿ ಮತ್ತೆ ಏಳು ಕವಿತೆಯ ಹೊತ್ತಿಗೆಗಳ ಪ್ರಕಟನೆ.

೧೯೫೨ – ಬರ್ಲಿನ್‌ಗೆ ಸಮೀಪದಲ್ಲಿರುವ ಬುಕೋವ್ ಹಳ್ಳಿಯಲ್ಲಿ ಮನೆಕೊಂಡು, ಬಿಡುವಿನ ವೇಳೆ ಅಲ್ಲಿ ವಾಸಿಸತೊಡಗುತ್ತಾನೆ.

೧೯೫೩ – 'ಬುಕೋವರ್ ಎಲಿಜಿಯೆನ್' (ಬುಕೋವ್ ಶೋಕ ಗೀತೆಗಳು) ಪ್ರಕಟನೆ.

– ಪೂರ್ವ ಬರ್ಲಿನ್‌ನ ಚೌಸೀಸ್ಟ್ರಾಸ್‌ನಲ್ಲಿ ಮನೆ ಪಡೆದು ವಾಸ (ಮುಂದೆ ಬ್ರೆಷ್ಟ್‌ನ ನಿಧನಾನಂತರ ಅಲ್ಲಿ 'ಬ್ರೆಷ್ಟ್ ಸೆಂಟರ್'ನ ಸ್ಥಾಪನೆ).

೧೭ ಜೂನ್ ೧೯೫೩ – ಪೂರ್ವ ಜರ್ಮನಿಯಲ್ಲಿ ಸರಕಾರದ ವಿರುದ್ಧ ಜನಕ್ರಾಂತಿ, ಅದನ್ನು ಬೆಂಬಲಿಸಿ ಬ್ರೆಷ್ಟ್‌ನ ಕವಿತೆ.

೨೧ ಜೂನ್ ೧೯೫೩ – ನಾಲ್ಕೇ ದಿನಗಳಲ್ಲಿ, ಸರಕಾರವನ್ನು ಎದುರು ಹಾಕಿಕೊಳ್ಳಲು ಇಚ್ಛಿಸದೆ, 'ರಾಷ್ಟ್ರನಿಷ್ಠೆಯ ನಿವೇದನೆ'.

೧೯೫೫ – ಬ್ರೆಷ್ಟ್‌ಗೆ ಸ್ಟಾಲಿನ್ ಶಾಂತಿ ಪುರಸ್ಕಾರ, ಅವನಿಂದ ಸ್ವೀಕಾರ.

– 'ಕ್ರೀಯೆಗ್ಸ್‌ಫೀಬೆಲ್' (ಯುದ್ಧದ ಬಾಲಬೋಧೆ) ಎಂಬ ಹೆಸರಿನಲ್ಲಿ ಅರವತ್ತೊಂಬತ್ತು ಸಚಿತ್ರ ಚುಟಕಗಳ ಪ್ರಕಟನೆ.

೧೪ ಆಗಸ್ಟ್ ೧೯೫೬ – ಹೃದ್ರೋಗದಿಂದ ಐವತ್ತೆಂಟನೆ ವಯಸ್ಸಿನಲ್ಲಿ ನಿಧನ.

ಈ ಘಟನಾವಳಿಯಲ್ಲಿ ಬ್ರೆಷ್ಟ್‌ನ ನಾಟಕ ರಚನೆ ಹಾಗೂ ರಂಗ–ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಅವು ಈ ಕವಿತಾಸಂಪುಟಕ್ಕೆ ಅಪ್ರಕೃತವೆಂಬ ಕಾರಣದಿಂದಾಗಿ ಕೊಟ್ಟಿಲ್ಲ.



